
ಕರ್ಮವೀರ

ಸಂಪುಟ ೨೦] [ಸಂಚಿಕೆ ೨೫

— ಜನಪ್ರಿಯ ಸಚಿತ್ರ ವಾರಪತ್ರಿಕೆ —

ಸಂಪಾದಕರು:
ಹ. ರಾ. ಪುರೋಹಿತ

ಸಂಸ್ಥಾಪಕರು- ನಿರ್ದೇಶಕರು:
ರಂ. ರಾ. ದಿವಾಕರ



ಸೂತ್ರ ಯಜ್ಞ

ಮಹಾತ್ಮಾ ಗಾಂಧಿಯವರ ೭೯ನೇ ಹುಟ್ಟುಹಬ್ಬ ಅಕ್ಟೋಬರ ೨ಕ್ಕೆ ನೆರವೇರಿತು. ಗಾಂಧೀ ಜಯಂತಿಯನ್ನು ಚರಕಸಪ್ತಾಹವೆಂದು ಆಚರಿಸುವದು ರೂಢಿ. ಇಲ್ಲಿ ಗಾಂಧೀಜಿ ಹಳೆಯ ಚರಕದಲ್ಲಿ ನೂಲುತ್ತಿರುವ ಅಪೂರ್ವ ಚಿತ್ರವೊಂದನ್ನು ಕಾಣಬಹುದು. ಚರಕದಲ್ಲಿಯೆ ಗಾಂಧೀಜಿಯ ಆರ್ಥಿಕ ವೇದಾಂತ ಅಡಕವಾಗಿತ್ತೆಂಬದನ್ನು ಮರೆಯಲಾಗದು.

ನಾನು ಕಂಡ ಮಹಾತ್ಮ

— ಶ್ರೀಮತಿ ನೆಲ್ಲಿ ಫಿಶರರಿಂದ (ಪುಟ ೫)

ಬೋರ್ಡಿಂಗಗಳು

(ಹರಟೆ) —ನಾ. ಕಸ್ತೂರಿ (ಪುಟ ೧೧)

KARMAVEER ... HUBLI

ಚಿಕ್ಕಕತೆ — ಕಾಳಿ

ಸಂಗ್ರಹಿಸಿದವರು :
ಮೂಸ್ಕೇರಿ ರಾಮರಾಯ ಹುಬ್ಬಳ್ಳಿ

"ಅಮ್ಮಾ ! . . .

ಅಮ್ಮಾ, ಕೂಸಿಗೆ ಸ್ವಲ್ಪ ಹಾಲು ಕೊಡಿ ! ..

ಮರಳಿ ಈ ಬಿಸಿಲಿನ ಕಡೆಗೆ ಅಷ್ಟು ಮನಸ್ಸು ಕೊಡಲು ಸಾಧ್ಯವಿರಲಿಲ್ಲ. ಹೀನದ ಅಂಕದ ಕೂಗಾಟವು ನನ್ನ ಹೃದಯದಲ್ಲಿ ತರಂಗ ತರಂಗಗಳಾಗಿ ಏಳುತ್ತಲಿತ್ತು. ಕಾದ ಕುಲುಮೆಯಲ್ಲಿ ಕುದಿಯುತ್ತಲಿದ್ದ ಕಬ್ಬಿಣದ ರಸದಂತೆ, ನನ್ನ ರಕ್ತವು ಕುದಿಯುತ್ತಲಿತ್ತು. ಅದೇ ಬಿಳಿಯ ಕಾಗದ, ಅದೇ ಲೇಖನಿ, ಅದೇ ಶಾಯಿ, ಒಂದು ಸಜೀವ, ಎರಡು ನಿರ್ಜೀವ ವಸ್ತುಗಳು ಕೆಲಸಕ್ಕೆ ತೊಡಗಿದ್ದವು.

ಆದರೂ ಏನೊಂದೂ ಮೂಡಿಸಲು ಸಾಧ್ಯವಾಗದೆ ಮಂಕು ಹಿಡಿದಂತೆ ಕುಳಿತುಬಿಟ್ಟಿದ್ದೆ. ಲೇಖನಿಯು ಹಿಂಬದಿ ತಲೆ ಕೆರೆಯುತ್ತಲಿತ್ತು.

ಸುಮಂಗಲಿಯ ಮನಸ್ಸು ಇತ್ತೀಚೆ ಸರಿಯಾಗಿಲ್ಲ. ಅವಳ ಹಸಿ ಮೈ ಇನ್ನೂ ಆರಿಲ್ಲ. ಆ ಕಣ್ಣಿನ 'ಕಾಡಿಗೆ' ಕಾಲಿಗೆ ಲೇಪಿಸಿದ ಅರಸಿನ, ಎಲ್ಲವೂ ಅಚ್ಚಳಿಯದೆ ಹಾಗೆಯೇ ಇದೆ.

ಉಕ್ಕೇರಿಬರುವ ದುಃಖವನ್ನು ಅದುಮಿಕೊಂಡು ಹೇಗೆಹೇಗೊ ದಿನ ನೂಕುತ್ತಲಿದ್ದಾಳೆ.

ನಾನು ಆ ರೀತಿ ಕುಳಿತಿದ್ದವನು ಏಳಲಾರದೆ ಈ ವಿಷಯವನ್ನು ಮೈಮೇಲೆ ಹಾಕಿಕೊಂಡೆ.

ಸುಮಂಗಲೀ ? . . ಎಂದೆ. ಅಡಿಗೆ ಮನೆಯ ಕೆಲಸಗಳನ್ನೆಲ್ಲ ಮುಗಿಸಿ ಮಲಗಿಕೊಂಡಿದ್ದಳೆಂದು ತೋರುತ್ತದೆ. ಅದೇ ಮಧ್ಯಾಹ್ನ ಮೂರೊ ಮೂರುವರೆಯೊ ಗಂಟೆಯಾಗಿರಬಹುದು. ಅವಳು ಗಡಬಡಿಸಿ ಬಂದವಳು ನಿದ್ದೆಗಣ್ಣಿನಲ್ಲಿಯೇ ನನ್ನೆದುರು ನಿಂತಳು.

"ಹೊರಗೆ ಬಂದವರು ಯಾರು ನೋಡು?" ಎಂದೆ.

ಹಾಳೆಯ ಮೇಲೆ ಏನೊ ಒಂದಕ್ಷರ ಬರೆಯಬೇಕೆಂದು ಬಯಸಿ ಲೇಖನಿ ಊರುವಷ್ಟರಲ್ಲಿ ಮತ್ತೆ ಮನಸ್ಸು ಚಲಿಸಿತು. ಸುಮಂಗಲಿಯ ಆಸೆ, ಅವಳ ಗಾಳಿಗೋಪುರ, ಎಲ್ಲವೂ ಕುಸಿದು ಹೋಯಿತು. ಅವಳ ಸುಖದ ಕನಸು ಬರಿ ಭ್ರಮೆಯಾಯಿತು. ನೀಡಿದ ಪುತ್ರನ್ನು ದೇವರು ಸೆಳೆದುಕೊಂಡನು. ಗೋಡೆಯ ಕಡೆಗೊಮ್ಮೆ ನನ್ನ ದೃಷ್ಟಿ ಹಾಯ್ದಿತು. ಆ ಬಾಲ ಮೋಹನಮೂರ್ತಿ; ಅಂಬೆಗಾಲಿನಿಂದ ಮುಂದುವರಿಯುತ್ತಲಿದ್ದ ಶ್ಯಾಮವರ್ಣದ ಬಾಲಕೃಷ್ಣನ ಚಿತ್ರ; ಅದು ನನ್ನ ಹೃದಯದ ಮೇಲೆ ಮತ್ತೊಂದು ಬರೆಯನ್ನು ಎಳೆಯಿತು. ನಿಟ್ಟುಸಿರೊಂದನ್ನು ಎಳೆದು ತಲೆಕೆಳಗೆ ಹಾಕಿದೆ. ಎದುರಿಗಿರುವ ಮೇಜೇ ನನ್ನ ಮುಖಕ್ಕೆ ಆಶ್ರಯ ನೀಡಿತು.

ಮೂರು ತಿಂಗಳ ಹಿಂದಿನ ಚಿತ್ರ. ಸುಮಂಗಲಿ ಗರ್ಭವತಿ, ತುಂಬಿದ ದೇಹ, ಅವಳ ಅರಳಿದ ಕಣ್ಣು, ಹಸುರು ಸೀರೆ ಭವಿಷ್ಯದ ಮಗುವಿಗಾಗಿ ಅವಳೇ ಹೆಣೆಯುತ್ತಲಿದ್ದ ಉಣ್ಣೆಯ ಕಾಲುಚೀಲ, ಅಂಗಿ, ಎಲ್ಲವೂ ಒಂದೊಂದಾಗಿ ಕಣ್ಮುಂದೆ ಹಾದು ಹೋಯಿತು. ಆ ದಿನ, ಸೀಮಂತದ ದಿನ, ಅವಳ ಸಿಂಗಾರ, ಆ ಆರತಿಯ ಹಾಡುಗಳು ನೆನೆದುಕೊಂಡರೆ ಹೃದಯ ತುಂಬುತ್ತದೆ.

ಮುಖ ಮೇಲಕ್ಕೆತ್ತಿದಾಗ ಸುಮಂಗಲಿಯ ಕಣ್ಣಿಂದ ಕಂಬನಿ ಧಾರೆಯಾಗಿ ಇಳಿಯುತ್ತಿತ್ತು. ನಾನು ನೋಡಿದಂತೆಯೇ ಸೆರಗನ್ನು ಕಣ್ಣಿಗೆ ಒತ್ತಿಕೊಂಡು ಬಿಕ್ಕಿಬಿಕ್ಕಿ ಅಳುತ್ತಿದ್ದಳು. ನಾನು ನನ್ನ ಉದಾಸೀನತೆಯನ್ನು ತಡೆದು ಹಿಡಿದೆ.

"ಏಕೆ? ಸುಮಂಗಲಿ, ಏಕೆ?" ಎಂದು ಶಾಂತರಿಸಿ ಕೇಳಿದೆ.

. . . ? ಅವಳಿಂದ ಉತ್ತರ ದೊರೆಯಲಿಲ್ಲ.

"ಇನ್ನೂ ಎಷ್ಟು ದಿನ ಹುಚ್ಚಿಯ ಹಾಗೆ ಮಾಡುವದು?"

ಹಾಗೆಯೇ ಬಿಕ್ಕುತ್ತ ಅವಳು ನೇರವಾಗಿ ಒಳಗೆ ನಡೆದಳು. ವಿಚಾರ ಇನ್ನಷ್ಟು ಹೆಚ್ಚಿತು. ಏನಿರಬಹುದು? ಎಂದುಕೊಂಡೆ. ಹೊರಗೆ ಯಾರೋ ಒಂದು ಭಿಕ್ಷುಕಿ ಬಂದಂತಿತ್ತು!

ತಟ್ಟನೆ ಹೊಳೆಯಿತು; ನನಗೆ.

"ಅಮ್ಮಾ ಕೂಸಿಗೆ . . ಓಹೋ!" ಎಂದುಕೊಂಡೆ.

ಈ ಬೇಡಿಕೆ ಯಾರದು? ಅವಳು ಎಂಥ ಭಿಕ್ಷುಕಿಯಿರಬಹುದು? ವಿಚಾರಕ್ಕೆ ಪುಷ್ಟಿ ದೊರೆಯಿತು.

ಸುಮಂಗಲಿಯನ್ನು ಕೇಳಲೇ? ಎನ್ನಿಸಿತು ಒಮ್ಮೆ.

ಬೇಡ, ಈ ವಿಷಯವು ಹೃದಯವನ್ನು ಕೇಳಿದಾಗಲೇ ಮತ್ತೆಮತ್ತೆ ನೋಯಿಸುವದು ಬೇಡ ಎಂದಂದುಕೊಂಡು ಕಾಗದ, ಲೇಖನಿ, ಮುದಿತ ಇಟ್ಟುಬಿಟ್ಟೆ. ಮನಸ್ಸು ಹಗುರವಾಗಲು, ಹೋದ ವರುಷ ನಾನೇ ಬರೆದಿಟ್ಟಿದ್ದ 'ಗುಳೇಗಾರ' ಕತೆಯನ್ನು ಓದತೊಡಗಿದೆ. ಹೊತ್ತೇ ಹೋಗುವದಿಲ್ಲ. ಆಗ ಆಗ ನಿಟ್ಟುಸಿರನ್ನು ಕೇಳಿಸುತ್ತ ಬೇಸರವಾದ ಮನಸ್ಸಿನಿಂದ ಆಹವಾದ ವಿಚಾರದಿಂದ ಹಾಳೆಗಳನ್ನು ತಿರುವುತ್ತಲಿದ್ದೆ. ಸುಮಾರು ತಾಸು ಕಳೆಯಿತು. ಸುಮಂಗಲಿ ಚಹವನ್ನು ತಯಾರಿಸಿ ತೆಗೆದುಕೊಂಡು ಬಂದಳು. ನಾನು ನೋಡಿದರೂ ನೋಡದಿದ್ದ ಹಾಗೆ ಅವಳೆಡೆ ಕುಡಿಗಣ್ಣನ್ನು ಹಾಯಿಸಿದೆ. ಚಹಾವನ್ನು ಮೇಜಿನ ಮೇಲೆ ಇಟ್ಟುಬಿಟ್ಟು ಹೋದಳು. ಆಗಲೂ ಅವಳ ಕಣ್ಣಿನ ತೇವವು ಹಾಗೆಯೇ ಇತ್ತು. ಸೂರ್ಯ, ಭೂಗರ್ಭ ಸೇರುವ ಸಮಯ ಸಮೀಪಿಸುತ್ತ ಬಂತು. ಎಳೆ ಕಿರಣ ಕಿಡಿಕಿಯೊಳಗಿಂದ ಹಾದು ಒಳಗೆ ಸೇರುತ್ತಲಿತ್ತು.

ಸಂಜೆಯಾಯಿತು, ರಾತ್ರಿಯಾಯಿತು; ನಮ್ಮಿಬ್ಬರ ಊಟವೂ ಮುಗಿಯಿತು. ನಾನೇ ಮುಂದಾಗಿ ಬಂದವನು ಸಿಗರೇಟಿನ ಹೊಗೆಯನ್ನು ಬಿಡುತ್ತ ನಡುಮನೆಯ ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದೆ. ಕೊಂಚ ತಡೆದು ಸುಮಂಗಲಿಯೂ ಬಂದಳು.

"ಏನು ವಿಚಾರ?" ಅವಳೇ ಮುಂದಾಗಿ ಮಾತಾಡಿಸಿದಳು.

"ಏನಿಲ್ಲ, ಹೋಗಲಿಬಿಡು" ನಾನೆಂದೆ.

"ಇಲ್ಲ, ಏನೋ ಕೇಳಬೇಕಾಗಿದೆ ನಿಮಗೆ" ಎಂದು . . . . ಸುಮಂಗಲಿ ಹೇಳುತ್ತಲೇ ಅವಳ ತುಟಿ ಅರಳಿತು. ಅದೊಂದು ಚಿಕ್ಕ ಮಿಂಚು; ಕುಡಿನಗೆ. ಎಷ್ಟೋ ದಿನಗಳ ತರುವಾಯ ಅರಳಿದ ಮೊಗ್ಗೆ ಅವಳ ಮುಖ.

"ಕೇಳಿದರೆ ಸರಿಯಾಗಿ ಹೇಳುವೆಯಾ?" ನಾನು ಪ್ರಶ್ನಿಸಿದೆ.

"ಹೌದು."

"ನಿಜವಾಗಿಯೂ ?"

"ಹೌದು ನಿಜವಾಗಿಯೂ ಹೇಳುವೆ." ಎಂದು ಸುಮಂಗಲಿ ನಿಶ್ಚಿತವಾಗಿ ಹೇಳಿದ ಬಳಿಕ ನಾನು ಮಧ್ಯಾಹ್ನದ ಘಟನೆಯ ವಿಚಾರ ತೆಗೆದುಕೊಳ್ಳಹತ್ತಿದೆ.

"ಆಗ ಬಂದವಳು ಯಾರು?" ಎಂದು ಕೇಳಿದೆ.

"ಅವಳ ಹೆಸರು ಕಾಳಿ!" ಎಂದಂದಳು ಸುಮಂಗಲಿ.

"ಅವಳೇ ಭಿಕ್ಷುಕಿ, ಹೌದಲ್ಲೊ?"

"ಅಲ್ಲ. ಅವಳು ಭಿಕ್ಷುಕಿಯಲ್ಲ."

"ಮತ್ತೆ?"

"ಅವಳು ನಿರಾಶ್ರಿತಳು."

"ಅದಕ್ಕೇ ಆಗ ನೀನು ಅಷ್ಟು ಅತ್ತುದೊ?"

"ಅಲ್ಲ."

"ಮತ್ತೇಕೆ?"

"ಅವಳೂ ನನ್ನ ಹಾಗೆ ಹಡೆದು ಎರಡು ತಿಂಗಳವಾಯಿತಂತೆ. ಎಂತಹ ಚೆಂದ ಕೂಸು! ಪಕ್ಕದ ಮನೆಯ ಗೌರಿಯ ಮಗ ಅಶೋಕನ ಹಾಗೆಯೇ ಇದೆ." ಮುಂದೆ ಏನೇನೋ ಹೇಳುತ್ತಿದ್ದಳು. ನಾನೇ ಅಲ್ಲಿಗೆ ತಡೆದೆ.

"ಯಾವೂರವಳು?" ಎಂದು ಮರು ಪ್ರಶ್ನಿಸಿದೆ.

ದೊಡ್ಡ ನಿಟ್ಟುಸಿರೊಂದುಬಿಟ್ಟು "ಯಾವೂರು? ಸುಡಗಾಡು ಮೊಗಲಾಯಿ!" ಎಂದಳು ಸುಮಂಗಲಿ.

ನಾನೂ ಒಂದು ನಿಟ್ಟುಸಿರು ಬಿಟ್ಟು "ಮೊಗಲಾಯಿ; ಸುಡಗಾಡು ಹೌದು." ಎಂದಂದು ಸುಮ್ಮನಾದೆ.

ರಾತ್ರಿಯ ಸರಿಯಾದದ ನಂತರ ಸುಮಂಗಲಿ ಆ ಕೂಸಿನ ಮೇಲೆ ಬಹಳ ಪ್ರೀತಿಯಿಟ್ಟಿದ್ದಾಳೆ ಎಂಬುದು ನನ್ನ ಮನಸ್ಸಿಗೆ ನಿಶ್ಚಯವಾಯಿತು.

"ಹಾಗಿದ್ದರೆ ಅವಳನ್ನು ಕರೆಯಲಿಲ್ಲವೇಕೆ?" ಎಂದು ಕೇಳಿದಾಗ "ನೀವು ಕೋಪಿಸಬಹುದೆಂದು ತಿಳಿದೆ" ಎಂದಂದಿದ್ದಳು.

ಅಂದ ಬಳಿಕ ನನ್ನ ಒಪ್ಪಿಗೆಯಿದ್ದರೆ ಅವಳನ್ನು ಕರೆಯುತ್ತಿದ್ದಳು: ಪ್ರೀತಿಸುತ್ತಿದ್ದಳು. ಎಂಬುದು ನಿಶ್ಚಿತ.

ಮರುದಿನ ನನಗೆ ಬೇಗನೆಯೇ ನಿರಾಶ್ರಿತರ ಶಿಬಿರಕ್ಕೆ ಭೆಟ್ಟಿಕೊಡುವ ಪ್ರಸಂಗವೊದಗಿತ್ತು. ಶಿಬಿರದ ವ್ಯವಸ್ಥಾಪಕ ಮಿತ್ರನನ್ನು ಭೆಟ್ಟಿಯಾದೆ. ಆತ ಹೇಳಿಕೇಳಿ ನನ್ನ ಗೆಳೆಯ. ಶಿಬಿರವನ್ನು ನೋಡುವ ನೆವದಿಂದ ಆತನೊಡನೆ ಹೋದೆ.

ಆತ ಒಂದೊಂದೇ ಕುಟುಂಬಗಳ ಪರಿಚಯ ಮಾಡಿಕೊಡುತ್ತ ನಡೆದ. ಇವರು ಅಲ್ಲಿಯವರು ಅವರು ಇಲ್ಲಿಯವರು, ಇಂಥವರು, ಅಂಥವರು, ಎಷ್ಟು ಜನರ ಪರಿಚಯ ತೆಗೆದುಕೊಂಡರೂ ನನ್ನ ಮನಸ್ಸಿಗೆ ನೆಮ್ಮದಿಯಿಲ್ಲ. ಮೇಲೆ ಮೇಲೆ ತಲೆ ಹಾಕುತ್ತಲಿದ್ದೆ. ಆದರೂ ಆ ದುರಂತ, ಅವರು ಕಳೆದುಕೊಂಡ ಬಂಧು ಸುಖ, ಎಲ್ಲವನ್ನೂ ಆತ ವರ್ಣಿಸುವಾಗ ಹೊಟ್ಟೆಯಲ್ಲಿ ಕಸಿವಿಸಿಯಾಗುತ್ತಿತ್ತು. ಸರಿ, ಸರತಿಯಲ್ಲಿಯೂ ಮುಗಿಯುತ್ತ ಬಂತು. ಆದರೂ ಕಾಳಿಯ ಹೆಸರು ಬಂದಿಲ್ಲ. ಸುಮಂಗಲಿ ಹೇಳಿದ ರೂಪದ ಹೆಣ್ಣೂ ಕಂಡಿಲ್ಲ. ನನಗೆ ಮತ್ತಿಷ್ಟು ಉದಾಸೀನತೆ ಹೆಚ್ಚಿತು. ಹೇಗಾದರೂ ನಾನು ಸುಮಂಗಲಿಯ ಮನಸ್ಸನ್ನು ಹಗುರುಗೊಳಿಸಬೇಕು. ಅಂತೂ ಜಡದೇಹದಿಂದಲೇ ಮನೆಗೆ ಮರಳಿದೆ. ಸುಮಂಗಲಿ ಬಾಗಿಲ ಹೊರಗೆ ಆಳವಾದ ವಿಚಾರದಲ್ಲಿ ನಿಂತಿದ್ದಳು. ನಾನೇನೊ ನನ್ನ ದಾರಿ ಕಾಯುತ್ತಿರಬಹುದೆಂದು ದೂರದಿಂದಲೇ ಎಣಿಕೆ ಹಾಕಿದ್ದೆ.

ಆದರೆ ಆ ಎಣಿಕೆ ತಪ್ಪಾಯಿತು. ನಾನು ಬಾಗಿಲ ಹತ್ತಿರ ಬಂದರೂ ಅವಳಿಗೆ ಎಚ್ಚರವಿರಲಿಲ್ಲ. ದೂರದಲ್ಲಿ ಒಬ್ಬಳು ಹೆಂಗಸು ಚಿಕ್ಕ ಕೂಸನ್ನು ಎತ್ತಿಕೊಂಡು ಹೋಗುತ್ತಲಿದ್ದಾಕೆ ಜನದಟ್ಟಣೆಯಲ್ಲಿ ಮರೆಯಾದಳು. ಆ ನಂತರವೇ ಅವಳು ಎಚ್ಚರವಾಗಿ ನನ್ನನ್ನು ನೋಡಿದಳು.

ಒಣಗಿದ ನಗೆಯೊಂದನ್ನು ನಕ್ಕಳು. ಇಬ್ಬರೂ ಒಳಗೆ ನಡೆದೆವು. ಗಂಟೆಗಂಟೆಗೂ ಸುಮಂಗಲಿ ಬಾಗಿಲ ಹೊರಗೆ ಹೋಗಿ ನಿಲ್ಲುತ್ತಾಳೆ. ಕೇಳಿದರೆ "ಮತ್ತವಳು ಬರುವಳು" ಎನ್ನುತ್ತಿದ್ದಳು. ಅಷ್ಟು ಹೆಂಗರುಳಿನ ಆಸೆಯೆ? ಎನ್ನಿಸುತ್ತಿತ್ತು, ನನಗೆ. "ಬೇರೆ ಜೀವ, ಬೇರೆ ಕರುಳಿಗಾಗಿಯೇ ಈ ರೀತಿಯಾದರೆ?" ಎಂದುಕೊಂಡೆ ಮನಸ್ಸಿನಲ್ಲಿಯೇ. ಸಂಜೆ ಅಡ್ಡಾಡಿಕೊಂಡು ಊರ ಹೊರವಾರಿಗೆ ದೂರದ ವರೆಗೆ ಹೋಗಿದ್ದೆ. ಅಲ್ಲೇ ಹೂರದಲ್ಲಿ ನಾಲ್ಕು ಜೀವಿಗಳ ಗಿಡದ ಬುಡದಲ್ಲಿ ಕೆಲವು ಗುಳೇಕಾರರಿದ್ದರು. ಅವರ ಹತ್ತಿರ ಹತ್ತಿರ ಹೋದೆ. ಅದೇ ರೂಪ; ಅದೇ ಚಿತ್ರ. ಹಸುಗಪ್ಪು ಬಣ್ಣ, ದುಂಡಗಿನ ಮೈಕಟ್ಟು, ಅರಳಿದ ಕಣ್ಣು, ಹಳೆಯದೊಂದು ಸೀರೆ, ಕೈಯಲ್ಲೊಂದು ಕೂಸು. ನನಗೆ ಮಾತಾಡಿಸಲು ಕೊಂಚ ಸಂಕೋಚ. ಆದರೂ ಎದೆ ಗಟ್ಟಿಮಾಡಿಕೊಂಡೆ.

"ಯಾವೂರವಮ್ಮಾ?" ಎಂದೆ ಆ ರೂಪರಾಶಿಯೆಡೆ ನೋಡುತ್ತ; ಆ ಸಾಧ್ವಿ ಮಾತಾಡಲು ಸಂಕೋಚ ಪಟ್ಟಳು. ಹತ್ತಿರವಿದ್ದ ಮುದುಕಿ ಮಾತಾಡಿದಳು.

"ಮೊಗಲಾಯಿ ಸ್ವಾಮಿ!"

"ಮೊಗಲಾಯಿಯಲ್ಲಿ ಎಲ್ಲಮ್ಮಾ?"

"ಬೀದರ ಜಿಲ್ಲೆ ಸ್ವಾಮಿ" ಎಂದಳು ಮುದುಕಿ.

"ಆ ತಾಯಿ ಯಾರವ್ವಾ?"

"ನಮ್ಮಕ್ಕನ ಸೊಸೆ ಸಾಮಿ, ಕಾಳವ್ವ" ಎಂದಂದು ಮುಗಿಸಹತ್ತಿದಳು. ನನ್ನ ಹೃದಯದಲ್ಲಿ ಕಳವಳದ ಆಸೆಯೊಂದು ಉದಯಿಸಿತು.

"ಯಾಕವ್ವ, ಏನು ಕತೆ?" ಎಂದೆ.

"ನಮ್ಮೂರ ಮ್ಯಾಗೆ ಮುಂಡರ ದಾಳಿ ಆಕ್ಕೈತಿ ಎಂದು ಅಂದು ಸುದ್ದಿ ಬಂತು ಸಾಮೀ. ನಾವೆಲ್ಲ ಯಾರಿಗ್ಯಾರೋ ಆಗಿ ದಿಕ್ಕೆಟ್ಟು ಓಡಿಬಂದೆವು. ಸಿಕ್ಕವರು ಸಿಕ್ಕ ಗಾಡಿ, ಸಿಕ್ಕ ಬಸ್ಸು, ಹತ್ತಿದರು. ನಾವು ಈಚೆ ತುದಿಗೆ ಊರು ದಾಟುವ ಮೊದಲೇ ಆಚೆ ತುದಿಗೆ ಉರಿ ಹಚ್ಚಿದ್ದರು," ಎಂದು ಗಳಗಳನೆ ಅಳುತ್ತಿದ್ದಳು.

"ಜಾತಿ ಮಂದಿ ಎಲ್ಲಿದ್ದಾರಮ್ಮಾ?" ಎಂದು ನಾನು ಮತ್ತೆ ಕೇಳಿದೆ.

"ಎಲ್ಲಿ ಸಾಮಿ ನಮ್ಮ 'ಗಿರಿಯಾ' ನೇ ನಮ್ಮ ಸರ್ವಸ್ವ ಕಾಳಿಯ ಭಾಗ್ಯ" ಎಂದಳು.

"ಅತ ಎಲ್ಲಮ್ಮಾ?" ಎಂದು ಮತ್ತೆ ಕೇಳಿದೆ.

"ದೇವರಿಗೆ ಗೊತ್ತು ಸಾಮಿ" ಎಂದು ಮುದುಕಿ ಹೇಳುವಾಗ ಕಾಳಿಯ ಕಣ್ಣಿಂದಲೂ ಹನಿ ನೀರು ಉದುರುತ್ತಲಿತ್ತು.

"ಹೋಗಲಿ ಬಿಡಿ, ಅಮ್ಮಾ. ಕತ್ತಲು ಕಳೆದು ಬೆಳಕು ಬಂದೀತು. ಮತ್ತೆ ಎಲ್ಲರೂ ಕೂಡುವ ಆ ದಿನವನ್ನು ಕಾಣಬಹುದು" ಎಂದು ಒಂದು ಚಿಕ್ಕ ಭಾಷಣ ಮಾಡಿ ಅವರನ್ನು ಸಂತೈಸಿದೆ.

"ನಿನ್ನೆ ಆ ನಮ್ಮ ಓಣಿಗೆ ಬಂದಿದ್ದ ಯಾ? ತಾಯಿ" ಎಂದು ಆ ಕಾಳಮ್ಮನತ್ತ ಮುಖ ಹೊರಳಿಸಿ ಕೇಳಿದೆ.

—೧೬ನೇ ಪುಟಕ್ಕೆ

ದೇಶಾಂತರಗಳಿಂದ

ಅಮೇರಿಕದ ಮೇಲೆ ಆರೋಪ

ಕಳೆದ ೨೫ ರಲ್ಲಿ ಪ್ಯಾರಿಸಿನಲ್ಲಿ ಸೇರಿದ ಸಂಯುಕ್ತ ರಾಷ್ಟ್ರ ಸಂಘದ ಮಹಾಸಭೆ ಸೇರಿದಾಗ ರಶಿಯದ ಮುಖ್ಯ ಪ್ರತಿನಿಧಿ ಆ್ಯಂಡ್ರಿ ವಿಶಿನಸ್ಕಿ ರಶಿಯದ ವಿನಾಶಕ್ಕಾಗಿ ಅಮೇರಿಕದ ಸಂಯುಕ್ತ ಸಂಸ್ಥಾನ ಅಣುಬಾಂಬಿನ ಯುದ್ಧಕ್ಕೆ ಸಿದ್ಧತೆ ನಡೆಸಿದೆ ಎಂಬ ಗಂಭೀರವಾದ ಆರೋಪವನ್ನು ಮಾಡಿದನು. ಇದಲ್ಲದೆ ಪ್ರಪಂಚದಲ್ಲಿ ಮಹಾಬಲರೆನಿಸಿದ ಪಂಚ ಮಹಾ ಪ್ರಭುತ್ವದವರು ತಮ್ಮ ನೆಲ, ಜಲ ಮತ್ತು ಆಕಾಶದ ಸೈನ್ಯಗಳಲ್ಲಿ ಮೂರನೆಯ ಒಂದಂಶವನ್ನು ಕಡಿಮೆ ಮಾಡಬೇಕೆಂಬುದಾಗಿ ಸಭೆಯಲ್ಲಿ ಅವನು ಕೇಳಿಕೊಂಡನು. ಸಂ. ರಾ. ಸಂಘವು ರಾಷ್ಟ್ರಗಳ ಅಣುಬಾಂಬಿನ ಪ್ರಯೋಗವನ್ನು ಬಹಿಷ್ಕರಿಸಬೇಕೆಂದೂ ಅವನು ಅರಿಕೆ ಮಾಡಿಕೊಂಡನು.

ಒಂದು ಗಂಟೆಯ ವರೆಗೆ ಗಂಭೀರವಾಗಿ ವಿಶಿನಸ್ಕಿ ಮಾಡಿದ ಭಾಷಣಕ್ಕೆ ಕೇಳುಗರ ಚಪ್ಪಾಳೆಯ ಸುರಿಮಳೆ ... ಯನ್ನು ವ್ಯಕ್ತಪಡಿಸಿತು. ಭಾರತದ ಪ್ರತಿನಿಧಿ ಮುಖಂಡರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ತಮ್ಮ ಆರಂಭ ಭಾಷಣದಲ್ಲಿ ಮೂರನೆಯ ಮಹಾಯುದ್ಧದ ಗಂಡವನ್ನು ತಡೆಗಟ್ಟಲು ಸಂಘಕ್ಕೆ ಬಿನ್ನವಿಸಿಕೊಂಡಿದ್ದಕ್ಕೆ ವಿಶಿನಸ್ಕಿ ಸಂತೋಷವನ್ನು ವ್ಯಕ್ತಪಡಿಸಿದನು. ವಿಶಿನಸ್ಕಿಯ ಭಾಷಣದಲ್ಲಿ ಶ್ರೀಮತಿ ವಿಜಯಲಕ್ಷ್ಮಿಯವರು ಹಳೇ ಧಾಟಿಯನ್ನೇ ಹಿಡಿದಿದ್ದರೂ ರಶಿಯದ ಧೋರಣೆ ಈ ರೀತಿಯಿದೆಯೆಂಬುದು ಬೆಳಕಿಗೆ ಬಂದು ಸಂತೋಷವಾಯಿತು ಎಂದರು. ಅಮೇರಿಕದ ಮತ್ತು ಇಂಗ್ಲೆಂಡಿನ ಪ್ರತಿನಿಧಿಗಳು ಮಾತ್ರ ಫ್ರಾನ್ಸಿನ ಪ್ರತಿನಿಧಿಯಂತೆ ಭಾಷಣವನ್ನು ಉತ್ಸಾಹದಿಂದ ಸ್ವಾಗತಿಸಲಿಲ್ಲ.

ಪಶ್ಚಿಮ ಯುರೋಪನ್ನು ರಶಿಯದ ವಿರುದ್ಧ ಎತ್ತಿ ಕಟ್ಟಲು ಒಂದು ಯತ್ನವೆಂದು ಮಾರ್ಶಲ್ ಯೋಜನೆಯನ್ನು ವಿಶಿನಸ್ಕಿ ತನ್ನ ಭಾಷಣದಲ್ಲಿ ಟೀಕಿಸಿದನು ಮತ್ತು ... ಗಳಿಗೆ ನಿಯಂತ್ರಣವನ್ನು ಭದ್ರತಾಮಂಡಲಿಯಾಗಿ ಬೇಕೆಂದು ಅವನು ಬಿನ್ನವಿಸಿಕೊಂಡ. ಭದ್ರತಾಮಂಡಲ ಸದಸ್ಯ ರಾಷ್ಟ್ರಗಳಿಗೆ ... ಪರೀಕ್ಷಕರನ್ನು ಕಳಿಸಿ ನಿಯಂತ್ರಣವು ಅಮಲಿನಲ್ಲಿ ತರಬೇಕೆಂಬುದು ನಿಃಶಸ್ತ್ರೀಕರಣ ಮಾಡುವ ಅವನ ಪಂಚಾಂಗ ಯೋಜನೆಯ ಒಂದು ಅಂಗ. ಮಂಡಲದಲ್ಲಿ ರಶಿಯಕ್ಕೆ ಪ್ರತಿಷೇಧಾಧಿಕಾರವಿರುವುದರಿಂದ ಅದು ಪ್ರಯೋಜನಕ್ಕೆ ಬರದೆಂದು ಇಂಗ್ಲೆಂಡು ಮತ್ತು ಅಮೇರಿಕಗಳು ಮೊದಲಿಂದಲೂ ಹೇಳುತ್ತ ಬಂದಿವೆ. ಆದುದರಿಂದ ಅವೇನೂ ಈ ಯೋಜನೆಯನ್ನು ಇದ್ದಕ್ಕಿದ್ದ ಹಾಗೆ ಸ್ವಾಗತಿಸುವಂತಿಲ್ಲ. ಇಂಥ ಸಂದರ್ಭದಲ್ಲಿ ಭಾರತದ ಮುಖ್ಯ ಪ್ರತಿನಿಧಿ ವಿಜಯಲಕ್ಷ್ಮಿಯವರು ತಮ್ಮ ಭಾರತೀಯವೆನಿಸುವ ಕಂಠದಿಂದ ಸಭೆಯೆದುರು ನಿಃಶಸ್ತ್ರೀಕರಣ ಮತ್ತು ಪರಾಕ್ರಮಣ ಖಂಡನೆಗಳನ್ನು ತಮ್ಮ ಆರಂಭ ಭಾಷಣದಲ್ಲಿ ಬೋಧಿಸಿದ್ದು ಶ್ಲಾಘ್ಯವೂ ಸ್ವಾಭಾವಿಕವೂ ಎನಿಸಿದೆ. ಯುದ್ಧದಿಂದ ಸೋತ ರಾಷ್ಟ್ರವೊಂದಲ್ಲದೆ ಗೆದ್ದ ರಾಷ್ಟ್ರಕ್ಕೂ ಅಪಾರ ಹಾನಿಯಿದೆ ಎಂಬುದನ್ನು ಅನುಭವದಿಂದ ಮೊನ್ನೆ ಕಂಡುಕೊಂಡ ಮೇಲೂ ಪಂಚಮಹಾಪ್ರಭುತ್ವಗಳಿಗೆ ಬುದ್ಧಿ ಬರದಿದ್ದರೆ ಅವುಗಳ ವಿನಾಶವು ಇಂದೇ ಅಲ್ಲದಿದ್ದರೆ ನಾಳೆಯಾದರೂ ನಿಶ್ಚಿತ ಎಂದು ಹೇಳಬಹುದಲ್ಲವೆ?

ಶೂನ್ಯಸಂಪಾದನೆ

ಚರ್ಚೆಯ ಮೇಲೆ ಚರ್ಚೆ, ಕರಾರಿನ ಮೇಲೆ ಕರಾರು, ಸಂದರ್ಶನದ ಮೇಲೆ ಸಂದರ್ಶನ ಹೀಗೆ ನಡೆಯಿತು ರಶಿಯ ಮತ್ತು ಪಾಶ್ಚಾತ್ಯ ಮಹಾಪ್ರಭುತ್ವತ್ರಯಗಳಲ್ಲಿ. ಆದರೆ ಕಡೆಗೂ ಫಲಿತಾಂಶ "ಶೂನ್ಯ"ವೇ ಆಯಿತು. ಪಾಶ್ಚಾತ್ಯ ಮಹಾರಾಷ್ಟ್ರತ್ರಯದ ಪ್ರತಿನಿಧಿಗಳು ಭಗೀರಥ ಪ್ರಯತ್ನದಿಂದ ಜನರಲಿಸಿಮೋ ಸ್ಟಾಲಿನ್ನರನ್ನು ಒಲಿಸಿಕೊಂಡರಂತೆ. ಆದರೆ ದೇವರು ಕೊಟ್ಟರೂ ಪೂಜಾರಿ ಬಿಡನು ಎಂಬ ಗಾದೆಯಂತೆ ಸ್ಟಾಲಿನ್ನರು ಒಪ್ಪಿದ ಅಂಶಗಳಿಗೆ ಮೊಲಟೋವ ಮತ್ತು ಸೊಕೊಲೊವಸ್ಕಿ ಒಪ್ಪಲಿಲ್ಲವಂತೆ!

ಮೇಲಿನ ಮಾತುಕತೆಗಳ ಇತಿಶ್ರೀ ಅರಿತೆನ್ನಬೇಕು. ಆದುದರಿಂದ ಅಮೇರಿಕವೀಗ ಆ ಎಲ್ಲ ವಿಷಯಗಳನ್ನು ವಿವರಪೂರ್ಣವಾಗಿ ಒಂದು ಶ್ವೇತಪತ್ರ ರೂಪದಲ್ಲಿ ಹೊರಡಿಸಿದೆ. ಸ್ಟಾಲಿನ್ನರು ಸ್ವತಃ ಹೇಳಿದ್ದು ಪಶ್ಚಿಮ ರಾಷ್ಟ್ರಗಳಿಗೆ ಬರ್ಲಿನ್ನಿನಲ್ಲಿ ಇನ್ನು ಮುಂದೆ ಉಳಿಯಲು ನ್ಯಾಯವಾಗಿ ಅಧಿಕಾರವಿಲ್ಲವಾದರೂ ಬರ್ಲಿನ್ನಿನಿಂದ ಆ ರಾಷ್ಟ್ರಗಳ ಪ್ರತಿನಿಧಿಗಳನ್ನು ಓಡಿಸಬೇಕೆಂಬ ಇಚ್ಛೆ ತಮಗಿಲ್ಲ ಎಂದು. ಸ್ವತಂತ್ರ ನಾಣ್ಯ ಚಲಾವಣೆ ಜಾರಿಯಲ್ಲಿ ಬಂದದ್ದೇ ಇಷ್ಟೆಲ್ಲ ತೊಂದರೆಗೆ ಕಾರಣವಾದುದರಿಂದ ಬರ್ಲಿನ್ನಿನಲ್ಲಿ ಸೋವಿಯಟ್ ಮಾರ್ಕ ನಾಣ್ಯ ಚಲಾವಣೆ ಒಂದೇ ಅಧಿಕೃತ ಚಲಾವಣೆಯ ನಾಣ್ಯವೆಂದೊಪ್ಪಿಕೊಳ್ಳುವುದಾದರೆ ದಿಗ್ಬಂಧನ ತೆಗೆವ ವಿಚಾರ ಮಾಡಬಹುದೆಂದು ಸ್ಟಾಲಿನ್ನರು ... ರು.



ಇಂಗ್ಲೆಂಡಿನ ಪೂರಯಿಕೆಯ ಮಂತ್ರಿ ಸ್ಟೈಟ್ ಅನರಬಲ್ ಜಿ ಆರ್. ಸ್ಟ್ರಾಸರು "ಮುಟ್ಟಿ ನೋಡು" ವ ಪ್ರದರ್ಶನವನ್ನು ಲಂಡನ್ನಿನ ಚೇರಿಂಗ್ ಕ್ರಾಸ್ ಅಂಡರ್ ಗ್ರೌಂಡ್ ನಿಲ್ದಾಣದಲ್ಲಿ ತೆರೆಯುತ್ತಿರುವುದು. ಜೊತೆಗೆ ಸುದ್ದಿ ಪಾಶೆಯ ಶಿರ್ದೇಶಕರು, ವೆಸ್ಟಮಿನಿಸ್ಟರಿನ ನಗರ ಪಿತೃ ಮತ್ತು ಲಂಡನ್ನಿನ ವಾಹನವಾಹಕ ಧಿಕಾರಿಗಳು ಇರುವರು.

ಪಶ್ಚಿಮ ರಾಷ್ಟ್ರಗಳು ಕೊಟ್ಟ ಉತ್ತರದಲ್ಲಿ ಬರ್ಲಿನ್ನಿಯ ಸರ್ವ ಸಮಸ್ಯೆಗಳನ್ನು ಚರ್ಚಿಸಲು ತಮ್ಮ ಅಡ್ಡಿ ಇಲ್ಲವೆಂದೂ ಆದರೆ ಬರ್ಲಿನ್ನಿನ ದಿಗ್ಬಂಧನ ತೆಗೆವ ವರೆಗೆ ಅದು ಶಕ್ಯವಿಲ್ಲವೆಂದೂ ಹೇಳಲಾಗಿದೆ. ಆದರೂ ಸ್ಟಾಲಿನ್ನರ ಅಭಿಪ್ರಾಯಗಳನ್ನು ತಮ್ಮ ಸರಕಾರಗಳಿಗೆ ... ದಾಗಿ ಪಾಶ್ಚಾತ್ಯ ಪ್ರತಿನಿಧಿಗಳು ನುಡಿದರೂ ... ತೂ ಮುನ್ನಡೆಯಾಗದೆ ಹುಚ್ಚು ಬಿಡದು, ... ಬಿಟ್ಟಲ್ಲದೆ ಮುಂದುವರೆಯಾಗದು. ಮಾತುಕತೆ ... ರಶಿಯದ ಕರಾರುಗಳನ್ನು ಪೂರಯಿಸಿದೆ ... ಯದು; ದಿಗ್ಬಂಧನವನ್ನು ತೆಗೆಯದು; ... ಮಿತ್ರರು ಕರಾರು ತೆಗೆವಲ್ಲದೆ ಪಾಶ್ಚಾತ್ಯ ಅಂತೂ ಪ್ರತಿನಿಧಿ ಅಮಲಿನಲ್ಲಿ ಹಾರದು! ... ಮಾಡಿದ್ದು ಶೂನ್ಯ ಸಂಪಾದನೆ.

ಈಗ ಪಾಶ್ಚಾತ್ಯ ... ಈ ಪ್ರಶ್ನೆಯನ್ನು ಸಂ. ರಾ. ಸಂಘಕ್ಕೆ ... ಮಾಡಿರುವರಂತೆ. ನೋಡಿ ... ವ ನಿರ್ಧಾರದ ನಾಟಕ ಹೇಗಿರುವುದೆಂಬುದು ಅಲ್ಲಿ ನಡೆವ ...

ಸಂ. ರಾ. ಸಂಘದ ನಿರ್ಣಿ

ದಕ್ಷಿಣ ಆಫ್ರಿಕದ ಹಿಂದೀ ... ಡಾ. ಮಾಲನ್ನರ ಸರಕಾರ ನೂತನರುದ್ಧ ಕಟ್ಟಳೆಗಳನ್ನು ಖಂಡಿಸಿ ಸಂ. ರಾ. ಸಂಘ ಕೊಟ್ಟ ದೂರಿನ ವಿಚಾರಣೆಯನ್ನು ಕೈಹಾಕಬೇಕೆಂದು ದ. ಆಫ್ರಿಕದ ಪ್ರತಿನಿಧಿ ಮಾಡಿದ ಅಬ್ಬರಕ್ಕೆ ಮನ್ನಣೆ ಕೊಟ್ಟು ಪ್ಯಾರಿಸ್ಸಿನಲ್ಲಿ ಸೇರಿದ ಸಂಘದ ಮಹಾಸಭೆ ವಿಚಾರಣೆಯನ್ನು ಮುಂಬರಿಸಲು ನಿರ್ಧರಿಸಿದ್ದು ಅದರ ನಿರ್ವೀರ್ಯತೆಗೊಂದು ದೊಡ್ಡ ಉದಾಹರಣೆಯೆನ್ನಬಹುದು.

ಪ್ರತಿಸಲವೂ ದಕ್ಷಿಣ ಆಫ್ರಿಕದ ಸರಕಾರದ ವಿರುದ್ಧ ಮತಕೊಟ್ಟುದರಿಂದ, ಪ್ರತಿಷೇಧಾಧಿಕಾರವನ್ನಿಟ್ಟುಕೊಂಡ ಮಹಾರಾಷ್ಟ್ರ ಅವುಗಳ ಯಕ್ಕೆ ಜಾಗತಿಕ ಶಾಂತಿಯನ್ನು ಕಾಯುವ ಶಕ್ತಿಯಿದೆ ಎಂಬುದನ್ನು ಚಿಕ್ಕ ರಾಷ್ಟ್ರಗಳು ನಂಬಲಾರದಾಗಿದೆಯಾದುದರಿಂದ ಮುಕ್ತ ತಮ್ಮ ರಾಷ್ಟ್ರದ ಗೃಹಕೃತ್ಯದಲ್ಲಿ ಸಂ. ರಾ. ಸಂಘ ಕೈಹಾಕಿದುದರಿಂದ ಒಟ್ಟು ತಮ್ಮ ರಾಷ್ಟ್ರವು ಅದರ ಸದಸ್ಯತ್ವವನ್ನು ಸಂಘದಿಂದ ತಿರುಗಿ ತೆಗೆದುಕೊಳ್ಳಬೇಕಾದೀತು ಎಂದು ತಾತಾ ಮಾಡಿದ ಫ್ರಾನ್ಸ್ ಗರ್ಜನೆಗೆ ಬೆಲೆ ಕೊಟ್ಟು ವಿಚಾರಣೆಯನ್ನು ತೆಗೆದು ಹಾಕದೆ ಇದ್ದರೂ ಮುಂದೂಡಲು ಸಂ. ರಾ. ಸಂಘದ ಮಹಾಸಭೆ ನಿರ್ಣಯಿಸಿದ್ದು ಹಸ ಕೇವಲ ಹೇಯವಾಗಿದೆ. ಆದರೆ ಭಾರತ ಸರಕಾರ ಈ ಯಾವ ಭಯಪ್ರದರ್ಶನಕ್ಕೂ ಅಂಜದೆ ದ. ಆಫ್ರಿಕದ ಮೇಲೆ ಹಾಕಿದ ಆರ್ಥಿಕ ಬಹಿಷ್ಕಾರವನ್ನು ನಡೆಸುತ್ತಲೇ ಇದೆ. ಹೊಸ್ಸ ಹೊಸ ಸಣದಿಸ ಸಾಮಾನುಗಳನ್ನು ಪಶ್ಚಿಮಾರ್ಧ ಗೋಲಕ್ಕೆ ಕಳುಹುವ ನೆವದಿಂದ ದ. ಆಫ್ರಿಕಕ್ಕೆ ಕಳುಹಲು ಪ್ರಯತ್ನಿಸಿದ್ದನ್ನು ತಿಳಿದು ಅದಕ್ಕೆ ಕೊಟ್ಟ ಅಪ್ಪಣೆಯನ್ನು ಹಿಂತೆಗೆದುಕೊಂಡು ಹಿಂದೀ ಸರಕಾರವು ಮುಂದೆ ಕ್ರಮ ತೆಗೆದುಕೊಳ್ಳಲು ಯೋಜಿಸಿದೆ. ದ. ಆಫ್ರಿಕದ ವರ್ಣದ್ವೇಷಾಗ್ನಿ ಹೀಗೇ ಹೆಚ್ಚಿದರೆ ಅದು ಇಡೀ ಏಶಿಯದ ವೈರ ಕಟ್ಟಿಕೊಳ್ಳುವುದು ಖಂಡಿತ.

ಇಂಡೊನೇಶಿಯದ ಅಂತಃಕಲಹ

ಇಂಡೊನೇಶಿಯದ ಪ್ರಜಾರಾಜ್ಯಕ್ಕೂ ಕಮ್ಯುನಿಸ್ಟರಿಗೂ ನಡೆಯುತ್ತಿರುವ ಕದನ ಉಗ್ರರೂಪವನ್ನು ತಾಳುತ್ತಿದೆ. ಸ್ವಜನರ ಈ ಕಲಹ ಡಚ್ಚರಿಗೆ ತಮ್ಮ ಸಾಮ್ರಾಜ್ಯವಾದದ ಧ್ವಜವನ್ನು ದೃಢಪಡಿಸಲು ಅನುಕೂಲವಾಗುವ ಸಂಭವವಿದೆ.

ಕಳೆದ ಸಲ ಕಮ್ಯುನಿಸ್ಟರು ಮೇಡಿಯಂ ನಗರ ಹಿಡಿದರು. ಅದು ಅವರು ಹಿಡಿದ ನಗರಗಳಲ್ಲಿ ೩ ನೆಯದು. ಈಗ ಮಧ್ಯ ಜಾವಾದಲ್ಲಿರುವ ಮತ್ತೆರಡು ನಗರಗಳನ್ನು ಹಿಡಿದುದಾಗಿ ಸುದ್ದಿ ಬಂದಿದೆ. ಆದರೆ ಸುರಾಕರ್ತ ಪ್ರದೇಶದಲ್ಲಿ ಸರಕಾರೀ ದಲಗಳು ಕಮ್ಯುನಿಸ್ಟರನ್ನು ಹಿಂದಕ್ಕೆ ಅಟ್ಟಿದವು.

ಕಮ್ಯುನಿಸ್ಟರ ದಂಗೆಯನ್ನು ಅಡಗಿಸಲು ವಿಶೇಷಾಧಿಕಾರವನ್ನು ಪಡೆದ ಡಾ. ಮಹಮ್ಮದ ಹಟ್ಟಾ ಅವರ ಸರಕಾರವನ್ನು ಉರುಳಿಸಲು ಅನುವಾಗುವಂತೆ ಎಲ್ಲ ಮಜೂರ ಸಂಘದವರೂ ಸಂಪನ್ನು ಹೂಡಬೇಕೆಂದು ಕಮ್ಯುನಿಸ್ಟ ಮಜೂರ ಸಂಘದ ಮುಖಂಡ ಹರೊಂಜೊ ಸಂಘಗಳಿಗೆ ಕೇಳಿಕೊಂಡಿದ್ದಾನೆ.

ಡಚ್ ಲೆಫ್ಟಿನೆಂಟ್ ಗವರ್ನರ್ ಜನರಲ್ ಡಾ ಹ್ಯೂಬರ್ಟಸ್ ವ್ಯಾನ್‌ಮೂಕನು ಹಾಲೆಂಡಿಗೆ ಬಟೇವಿಯದಿಂದ ಬಂದಿಳಿದ ಕೂಡಲೆ ಹೊಸ ಪರಿಸ್ಥಿತಿಯುಂಟಾದ್ದರಿಂದ ಆಗಿಂದಾಗ ಅವನನ್ನು ತಿರುಗಿ ಕಳಿಸಲು ನಿರ್ಧರಿಸಲಾಯಿತು.

ಮೊದಲು ನಿಯಮ

ಮಾಸ್ಕೋದಲ್ಲಿ ಮೇರಿಯ ಮರ್ಕಲೋವ ಎಂಬ ಗೃಹಸ್ಥೆ ಮರಗಳಿಗೆ ಮೊಳೆ ಹೊಡೆದು ಫಲಗೆ ತಗಲುಹಾಕಬೇಕೆಂದು ... ಗುರುತು ಹಲಗೆಯ ಮೇಲೆ ಬರೆದು ಮೊಳೆ ಹೊಡೆದು ತಗಲುಹಾಕಿದ್ದಕ್ಕೆ ೧೦೦ ರೂಬಲ್ ದಂಡ ವಿಧಿಸಲಾ...

ನಗೆಯ ಸೊರೆ

ಆತ ನನ್ನ ಅಪ್ಪ

ಅಕೆಗೆ ಸುಮಾರು ೨೦ ವರ್ಷ ವಯಸ್ಸು. ಮೊಂಡು ನಂಬುಗೆಯ ಗಂಡನನ್ನು ... ಚಿಟ್ಟ ಹೋಗಿದ್ದಿಲ್ಲ. ಒಂದು ... ಒಬ್ಬ ತರುಣನನ್ನು ... ಹುಡುಗಾಟ ನಡೆಸಿದ್ದಳು. ಅವನಿಗೆ ... ಹೋಗಬೇಕೆನಿಸಿದ್ದರೂ ಹೇಗೆಹೇಗೋ ಅವಳ ಮಾತಿಗೆ ಹೂಗುಟ್ಟುತ್ತ ಕುಳಿತಿದ್ದ. ಮುನ್ನಿದ್ದ ... ಕಡೆಗೂ ಅವಳ ... ಮುಗಿಯದಾಗಲು, ಅವನೆಂದ—

"ನೀನು ಶಾಲೆಗೆ ಹೋಗುತ್ತಿದ್ದಾಗ ನಿನ್ನ ಗಬ್ಬ ಹಿಡಿದು ಕಲಕುಳಿ ಇರುತ್ತಿದ್ದ ತರುಣನ ನೆನಪಿರುವುದೇನು ನಿನಗೆ?"

"ಓಹೋ, ಅವನೇ ಏನು ನೀನು!" ಎಂದು ಬಾಯಿತುಂಬ ನಕ್ಕು ಉದ್ಗರಿಸಿದಳು.

"ಅಲ್ಲ, ಆತ ನನ್ನ ಅಪ್ಪ," ಎಂದು ತರುಣ ಉತ್ತರವಿತ್ತ.

ಹೆಂಡತಿ

ತಂದೆ ಪ್ರಾಯಕ್ಕೆ ಬಂದ ಮಗನೊಡನೆ ಕೇಳುತ್ತಿದ್ದ—

"ಮಗು ನಿನಗೆ ಯಾರೊಡನೆ ಮದುವೆ ಮಾಡಬೇಕು?"

"ನಿನ್ನ ತಾಯಿಯೊಡನೆ"

"ಥೂತ್, ಮೂರ್ಖ"

"ಕೋಪಿಸಬೇಡಪ್ಪ, ಅನ್ಯಾಯ ಮಾಡಬೇಡ."

"ಅನ್ಯಾಯ?"

"ಹೌದು. ನ್ಯಾಯ ಪ್ರಕಾರವೇ ತಾಯಿ ನನ್ನ ಹೆಂಡತಿಯಾಗಬೇಕು! ನನ್ನ ತಾಯಿ ನಿನ್ನ ಹೆಂಡತಿಯಾಗಿ..."

ತಂದೆ ಯಾರು?

ದೇಶಭಕ್ತರೊಬ್ಬರು ಭಾಷಣ ಮಾಡುತ್ತಿದ್ದರು. "ಭಾರತಿ ನಮ್ಮ ತಾಯಿ. ಅವಳಿಗಾಗಿ ತನು ಸವೆಸಬೇಕು" ಎಂದು. ಕೇಳುತಿದ್ದ ಒಬ್ಬ ಎದ್ದು ನಿಂತು ...

"ಸ್ವಾಮಿ ನಮ್ಮ ತಂದೆ ಯಾರು?"

ಮನುಜ

ಪಂಡಿತ— ಮನುವೆಂಬವನಲ್ಲಿ ಹುಟ್ಟಿದವರು ಮನುಜರು; ನಾವೆಲ್ಲ ಮನುಜರು.

ಪಾಮರ— ಹಾಗಾದರೆ ನಾನು ಮನುಜನಲ್ಲ

ಪಂಡಿತ— ಏಕೆ? ಕಾರಣವೇನು?

ಪಾಮರ— ನನ್ನ ತಂದೆ ಮನು ಎಂಬವರಲ್ಲ.

ಮುದ್ದು

ಅತ— ಒಂದು ಮುದ್ದು ಕೊಡೇ.

ಆಕೆ— ಥೂತ್ ಸಮಾನ ವಯಸ್ಕರಿಗೆ ಮುದ್ದು ಕೊಡುತ್ತಾರೋ?

ಅತ— ನಿನ್ನ ಗಂಡನಿಗೆ ಮುದ್ದು ಕೊಡುವುದಿಲ್ಲವೇ?

ಅತಿ ವಕ್ರರು

ಯಾರ್ಕಶೈರಿನಲ್ಲಿ ನಾಲ್ಕು ಹುಡುಗರು ಸೇರಿ ೬೪ ಐಸ್‌ಕ್ರೀಂ ಇಟ್ಟಿಗೆಗಳನ್ನು ಒಂದು ಅಂಗಡಿಯಿಂದ ಕದ್ದದ್ದು ರುಜುವಾತಾಯಿತು. ತಂದುಕೊಂಡಿರೆಂದು ಗದ್ದರಿಸಿದಾಗ ಅವರು ತಂತಮ್ಮ ಹೊಟ್ಟೆಯ ಕಡೆಗೆ ನೋಡುತ್ತ ನಿಂತರು!

ಪಾಸಗಿಯಲ್ಲಿ ಪ್ರವೇಶ

ಮೆಲ್ಬೋರ್ನಿನ ಉದ್ಯಾನವೊಂದರಲ್ಲಿ ಒಂದೇ ಒಂದಾದ ತನ್ನ ಚಿಣ್ಣದ ಪಾಸಗಿಸ್ಥಳದಲ್ಲಿದ್ದ ಹರಕನ್ನು ಹೊಲಿಯುತ್ತಿದ್ದ ಲೋಯಿಬೋ ಎಂಬವನನ್ನು ಪೋಲೀಸರು ಸೆರೆಹಿಡಿದರು! ಅವನು ಗಂಡಸಾಗಿದ್ದದ್ದೇ ತಪ್ಪೆ?

ಯಮದೂತರು

ಒಬ್ಬ ಪೋಲೀಸನು ಕೈದಿಯನ್ನು ಚೆನ್ನಾಗಿ ಥಳಿಸಿದ.

ಕೈದಿ (ಕೋಪದಿಂದ) — ಈ ಜೈಲಿನ ಪೋಲೀಸರಲ್ಲಿ ಅರ್ಧ ಜನರು ಯಮದೂತರು.

ಪೋಲೀಸ— ಏನು ಮತ್ತೊಮ್ಮೆ ಬೊಗಳು.

ಕೈದಿ (ಹೆದರಿಕೆಯಿಂದ)— ತಪ್ಪಾಯಿತು ಸ್ವಾಮಿ, ಈ ಜೈಲಿನ ಪೋಲೀಸರಲ್ಲಿ ಅರ್ಧ ಜನರು ಯಮದೂತರಲ್ಲ.

(ಶಾ. ಕ. ಶೀನಪ್ಪಯ್ಯನವರ)

ಆಕೆ— ನಿಮ್ಮ ಹಿಂದೆ ಹೆಚ್ಚೋ, ನನ್ನದೋ

ಅತ— ನಿನ್ನದೇ ಹೆಚ್ಚು.

ಆಕೆ— ಹಾಗಾದರೆ ನಿಮ್ಮಷ್ಟು ಸುಂದರ ಯಾರೂ ಇಲ್ಲ- ನಾನೂ ಅಲ್ಲ!

ಮದ್ರಾಸ ಪ್ರಾಂತದ ಮುನ್ನಡೆ

ಜಮೀನದಾರಿ ನಿರ್ಮೂಲನ, ಪಾನನಿರೋಧ

(ನಮ್ಮ ಪ್ರತಿನಿಧಿಯಿಂದ)

ಮದ್ರಾಸ ಸರಕಾರವು ಶಾಸನ ಸಭೆಯಲ್ಲಿ ಮಂಡಿಸಿರುವ ಜಮೀನದಾರಿ ಮಸೂದೆಯು ತೀವ್ರವಾದ ಟೀಕೆಗಳಿಗೊಳಗಾದಷ್ಟು ಬೇರಾವ ಮಸೂದೆಯೂ ಆಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ಶಾಸನ ಸಭೆಯ ಕಾಂಗ್ರೆಸ ಪಕ್ಷದಲ್ಲಿಯೇ ಮಸೂದೆಯ ವ್ಯಾಪ್ತಿ ಹಾಗೂ ಭಾಷ್ಯದ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳುಂಟಾಗಿ, ವಿರುದ್ಧ ಪಕ್ಷೀಯರು ಅನೇಕ ಬಾರಿ ಕಾಂಗ್ರೆಸ ಹೈಕಮಾಂಡದ ಕಡೆಗೆ ನಿಯೋಗ ಹೋಗಿ, ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿರುವುದು ಎಲ್ಲರಿಗೂ ತಿಳಿದಿದೆ. ಜಮೀನದಾರಿ ನಿರ್ಮೂಲನದ ಬಗ್ಗೆ ಕೇಂದ್ರ ಸರಕಾರವು ಕೊಟ್ಟ ಸಲಹೆಯನ್ನು ನಿರಾಕರಿಸಿ ಸ್ವಂತ ಜವಾಬ್ದಾರಿಯ ಮೇಲೆ ಮದ್ರಾಸ ಸರಕಾರವು ಮುಂದುವರೆಯುತ್ತಿರುವದು ಗಮನಾರ್ಹವಾಗಿದೆ.

ಕೇಂದ್ರ ಸರಕಾರದ ಅಭಿಪ್ರಾಯಕ್ಕೆ ಉತ್ತರವಾಗಿ, ಮದ್ರಾಸ ಪ್ರಧಾನ ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯವರು, ಪ್ರಾಂತೀಯ ಸರಕಾರ ಈ ಮಸೂದೆಯನ್ನು ಶಾಸನ ಸಭೆಯಲ್ಲಿ ಮೂರನೆಯ ಪಠನದ ವರೆಗೂ ಮುಂದೊಯ್ದು, ಇನ್ನೇನು ಶಾಸನವಾಗಬೇಕೆಂದಿರುವಾಗ, ಹಿಂದೆ ಸರಿಯಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟರು. ಪರಿಹಾರದ ಹಣ ೧೨ ಕೋಟಿ ರೂಗಳಿಗಿಂತ ಜಾಸ್ತಿಯಾಗಲಿಕ್ಕಿಲ್ಲವೆಂದೂ, ಪ್ರಾಂತೀಯ ಸರಕಾರ [illegible] ತೀಯ [illegible] ಮೇಲೆ ವಿರ್ಣಯಿಸಿದ [illegible] ದಿಂದಲೇ ಕೊಡಲು ಪ್ರಯತ್ನಿಸುವುದಾಗಿ ತಿಳಿಸಿದರು. ಯಥಾಶಕ್ತಿ ಪ್ರತಿಫಲ ಕೊಡುವುದಾಗಿ, ಸಾಧ್ಯವಿಲ್ಲದ ಹೋದಲ್ಲಿ [illegible] ಯನ್ನು ಅಂಗೀಕರಿಸಿ ಶಾಸನವನ್ನಾಗಿ ಸೂಕ್ತ ಸಮಯದ ವರೆಗೆ ಆಚರಣೆಗೆ ತರಬಹುದೆಂದು ಸಹ ಶ್ರೀ ರೆಡ್ಡಿಯವರು [illegible] ವಾಗಿ ಹೇಳಿದರಂತೆ.

[illegible] ಶನಿವಾರ ಶಾಸನ ಸಭೆಯಲ್ಲಿ ಜಮೀನದಾರರಿಗೆ ಸಲ್ಲಬೇಕಾದ ಪ್ರತಿಫಲದ ಬಗ್ಗೆ ಚರ್ಚೆ [illegible]. ಮಿರ್ಜಾಪುರ ಹಾಗು ವೆಂಕಟಗಿರಿ [illegible] ವಾರರು ನ್ಯಾಯವಾದ ಪ್ರತಿಫಲ [illegible] ಬೇಕೆಂದು ವಾದಿಸಿದರು. ಜಮೀನು [illegible] ಗಿರುವ ಬೆಲೆಯಂತೆ ಪ್ರತಿಫಲವನ್ನು ಕೊಡಬೇಕೆಂಬ ತಿದ್ದುಪಡಿಯನ್ನು ಸಭೆ ನಿರಾಕರಿಸಿತು. ಕಂದಾಯ ಮಂತ್ರಿಗಳಾದ ಶ್ರೀ. ಕಳಾ ವೆಂಕಟರಾಯರು, ಜಮೀನದಾರರು ಕಂದಾಯವನ್ನೆತ್ತುತ್ತಿದ್ದ ಪ್ರತಿನಿಧಿಗಳಾಗಿ ಪರಿಗಣಿಸಲ್ಪಟ್ಟಿದ್ದರಿಂದ, ನೆಲದ ಒಡೆಯರಲ್ಲವೆಂದೂ, ಸ್ವಾಮ್ಯದ ಹಕ್ಕುಗಳಿಲ್ಲವೆಂದೂ ವಾದಿಸಿದರು. ಪ್ರತಿಫಲವು ಯಾವ ಸಂದರ್ಭದಲ್ಲಿಯೂ ೧೦–೧೨ ಕೋಟಿಗಳಿಗಿಂತ ಹೆಚ್ಚಾಗುವುದಿಲ್ಲವೆಂದೂ ದಿಚ್ಚಾಗುವದಾದರೆ ಸರಕಾರದ ಸಾಮರ್ಥ್ಯಕ್ಕೆ ತಕ್ಕಂತೆ ಮಾತ್ರ ಪ್ರತಿಫಲವನ್ನು ಕೊಡಲು ಸಾಧ್ಯವೆಂದೂ ತಿಳಿಸಿದರು

ಈ ಜಮೀನದಾರಿ ಮಸೂದೆಯ ವ್ಯಾಪ್ತಿಯಲ್ಲಿಯೇ ಇನಾಂ ಭೂಮಿಯನ್ನು ಸೇರಿಸಬೇಕೆಂದು ಕಂದಾಯ ಮಂತ್ರಿಗಳು ಹೇಳಿದಾಗ, ಕಾಂಗ್ರೆಸ ಪಕ್ಷದಲ್ಲಿಯೇ ವಿರೋಧಾಭಿಪ್ರಾಯವೆದ್ದು, ಕಾಂಗ್ರೆಸ ಹೈಕಮಾಂಡದ ವರೆಗೂ ಈ ವಿಷಯವನ್ನು ಕೊಂಡೊಯ್ದರು. ಹೈಕಮಾಂಡದವರು ಇನಾಂದಾರರಿಗೆ ಪೂರ್ಣ ಪ್ರತಿಫಲವನ್ನು ಕೊಡಬೇಕೆಂದೂ ಇಲ್ಲವಾದರೆ ಅವನ್ನು ಈ ಮಸೂದೆಯ ವ್ಯಾಪ್ತಿಯಲ್ಲಿ ಸೇರಿಸಕೂಡದೆಂದೂ ತಿಳಿಸಿರುವರು.

ಭಾಷಾವಾರು ಪ್ರಾಂತವಿಭಜನೆ

ಮದ್ರಾಸ ಕರ್ನಾಟಕ ಸಂಘದ ತೃತೀಯ ವಾರ್ಷಿಕೋತ್ಸವದ ಅಧ್ಯಕ್ಷ ಭಾಷಣ ಮಾಡುತ್ತಾ, ಮದ್ರಾಸ ಮೇಯರರಾದ ಡಾ॥ ಯು. ಕೃಷ್ಣರಾಯರು, ದೇಶದ ಸದ್ಯದ ವಿಷಮ ಪರಿಸ್ಥಿತಿಯಲ್ಲಿ ಭಾಷಾವಾರು ಪ್ರಾಂತ ನಿರ್ಮಾಣವನ್ನು ಮುಂದೆ ಹಾಕುವುದು ಕ್ಷೇಮವೆಂದು ವಾದಿಸಿದರು.

ನಗರದಲ್ಲಿ ಕನ್ನಡಿಗರ ಸ್ಥಾನವನ್ನು ತಿಳಿಸುತ್ತಾ, ಕನ್ನಡಿಗರೆಲ್ಲರಿಗೂ ಒಪ್ಪಿಗೆಯಾದ ಸ್ಥಳದಲ್ಲಿ ಕಾರ್ಪೊರೇಷನ್ನಿನವರು ಶಾಲೆಯೊಂದನ್ನು ತೆರೆಯಲು ಸಿದ್ಧರಿದ್ದಾರೆಂದು ಭರವಸೆಯಿತ್ತರು. ಪೌರ ಸಭೆಯ ವಾಚನಾಲಯಗಳಲ್ಲಿ ಕನ್ನಡ ವೃತ್ತಪತ್ರಿಕೆಗಳನ್ನು ತರಿಸಲಾಗುತ್ತಿದೆಯೆಂದೂ ಕನ್ನಡಿಗರು ಈ ಸೌಕರ್ಯಗಳನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳಬೇಕೆಂದೂ ವಾಪಿಸಿದರು.

ಪಾನ ನಿರೋಧ ಕಾರ್ಯಕ್ರಮ

ಪಾನನಿರೋಧ ಕಾರ್ಯಕ್ರಮವನ್ನು ಒಂದು ವರ್ಷದ ವರೆಗಾದರೂ ಮುಂದುವರಿಸುವುದಾದರೆ, ದೇಶದಲ್ಲಿ ಹರಡಿರುವ ಅತಿ ಪ್ರಸರಣ ತಡೆಯಲು ಸಹಾಯಕವಾದೀತೆಂದು ಕೇಂದ್ರ ಸರಕಾರ ದೆಹಲಿ ಸಮ್ಮೇಳನದಲ್ಲಿ ಸಲಹೆ ಕೊಟ್ಟಿತು. ಮದ್ರಾಸ ಸರಕಾರ ಈ ಸಲಹೆಯನ್ನೂ ಒಪ್ಪಲು ಸಿದ್ಧವಾಗಿರಲಿಲ್ಲ.

ಪ್ರಾಂತೀಯ ಸರಕಾರ ಹಾಗೂ ಶಾಸನ ಸಭೆಯ ಕಾಂಗ್ರೆಸ ಪಕ್ಷ ಪ್ರಾಂತದಲ್ಲೆಲ್ಲ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರುವುದಾಗಿ ಜನತೆಗೆ ಮಾತು ಕೊಟ್ಟಿರುವುದರಿಂದಲೂ ಅಕ್ಟೋಬರ ೨ ರಿಂದ– ಗಾಂಧೀ ಜಯಂತಿಯ ಶುರುಹಾಗಿ– ಜಾರಿಗೆ ತರಲು ಸಿದ್ಧತೆಗಳನ್ನು ನಡೆಸುತ್ತಿರುವುದರಿಂದಲೂ ಈಗ ಹಿಂದಕ್ಕೆ ಹೆಜ್ಜೆ ಹಾಕಲು ಸಾಧ್ಯವಿಲ್ಲವೆಂದೂ ಶ್ರೀ ರಾಮಸ್ವಾಮಿ ರೆಡ್ಡಿಯವರು ಹೇಳಿದರು ಮೊದಲಿನಂತೆಯೇ ಕೇಂದ್ರ ಸರಕಾರದಿಂದ ಧನಸಹಾಯವಿರಲಾರದೆಂದೂ ಮದ್ರಾಸ ಸರಕಾರ ಸ್ವಾವಲಂಬಿಯಾಗಿರತಕ್ಕದೆಂದೂ ಸ್ಪಷ್ಟಪಡಿಸಲಾಯಿತು. ಇದರಿಂದ ಉಂಟಾಗುವ ಆದಾಯ ನಷ್ಟವನ್ನು ಸರಿಪಡಿಸಲು, ಮಾರಾಟ ತೆರಿಗೆಯನ್ನು ಸಾಕಷ್ಟು ಹೆಚ್ಚಿಸಲಾಗಿದೆಯೆಂದು ಶ್ರೀ ರೆಡ್ಡಿಯವರ ವಾದ.

ಉಳಿದ ಎಂಟು ಜಿಲ್ಲೆಗಳಲ್ಲಿಯೂ ಮದ್ರಾಸ ನಗರದಲ್ಲಿಯೂ [illegible] ರಿಂದ ಪಾನ [ನಿ]ರೋಧವನ್ನು ಜಾರಿಗೆ ತರಲು ಈಗಾಗಲೇ ಸಿದ್ಧತೆಗಳು ನಡೆದಿವೆ. ಪ್ರತಿ ಜಿಲ್ಲೆಯಲ್ಲೂ ಪಾನ ನಿರೋಧವನ್ನು ಆರಂಭಿಸುವ ಕೆಲಸವನು ಮಂತ್ರಿಗಳು ಹಂಚಿಕೊಂಡಿದ್ದಾರೆ. ನಗರದಲ್ಲಿ ಪ್ರಧಾನಿ ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯವರೂ ಆರೋಗ್ಯ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟಿಯವರೂ ಪ್ರಾರಂಭೋತ್ಸವವನ್ನು ನಡೆಸಲಿದ್ದಾರೆ.

ಕಳ್ಳಪೇಟೆ ನಿರ್ಮೂಲನ ಮಸೂದೆ

ಮದ್ರಾಸ ಶಾಸನ ಸಭೆಯಲ್ಲಿ ಉತ್ತರವೀಯುತ್ತಾ, ಆಹಾರ ಮಂತ್ರಿಗಳಾದ ಡಾ. ರಾಜನರು, ಕಳ್ಳಪೇಟೆಯನ್ನು ನಿರ್ಮೂಲನ ಮಾಡಲು ಪಶ್ಚಿಮ ಬಂಗಾಲ ಸರಕಾರದವರು ತರಲಿರುವ ಮಸೂದೆಯಂತೆ, ಸೂಕ್ತ ಮಸೂದೆಯನ್ನು ತಯಾರಿಸಲಾಗುತ್ತಿದೆಯೆಂದು ತಿಳಿಸಿದರು. ಕಳ್ಳಪೇಟೆಯ ವ್ಯವಹಾರ, ಮತ್ತು ಲಾಭಬಡುಕರು ಹೆಚ್ಚಾಗಿರುವುದೇ ಜನರ ಅನಾದರಕ್ಕೂ ಅಸಹಕಾರಕ್ಕೂ ಸಾಕ್ಷಿಯೆಂದು ಹೇಳಿದರು. ಆಹಾರ ಪದಾರ್ಥಗಳ ಮೇಲೆ ನಿಯಂತ್ರಣವಿದ್ದಾಗ, ಅನೇಕ "ಕಂಟ್ರೋಲ" ಆಜ್ಞೆಗಳನ್ನು ಮುರಿಯುವವರನ್ನು ಶಿಕ್ಷೆಗೆ ಗುರಿ ಮಾಡಲು, ಸರಕಾರದವರು ಪ್ರತ್ಯೇಕ ಸಿ ಆಯ ಡಿ ಶಾಖೆಯನ್ನು ನಿರ್ಮಿಸಿದ್ದರು. ವಿನಿಯಂತ್ರಣದ ನಂತರ ಈ ಪೋಲೀಸ ಶಾಖೆಯನ್ನು ರದ್ದು ಮಾಡಲಾಯಿತು. ಕಂಟ್ರೋಲುಗಳನ್ನು ಮತ್ತೆ ಜಾರಿಗೆ ತರುವ ಆಲೋಚನೆಯಿರುವುದರಿಂದ ಪುನಃ ಪ್ರತ್ಯೇಕ ಪೋಲೀಸ ಪಡೆಯನ್ನು ನಿರ್ಮಿಸುವುದೂ ಸೂಕ್ತ. ಅದಕ್ಕಾಗಿ ಬದಲಾವಣೆಗಳನ್ನು ಕೈಕೊಳ್ಳುವುದೂ ಸರಕಾರದ ಆಲೋಚನೆಯಲ್ಲಿದೆಯೆಂದು ಡಾ॥ ರಾಜನ್ ತಿಳಿಸಿದರು.

ನೂತನ ಗವರ್ನರರ ನೇಮಕ

ಭಾವನಗರದ ಮಹಾರಾಜರನ್ನು ಮದ್ರಾಸ ಪ್ರಾಂತದ ಗವರ್ನರರಾಗಿ ನೇಮಕ ಮಾಡಿದಾಗ, ಪ್ರಾಂತೀಯ ಸರಕಾರದ ಪೂರ್ವ ಒಪ್ಪಿಗೆಯನ್ನು ಪಡೆಯಲಾಗಿತ್ತೇ ಎಂಬ ವಿಷಯ ಕಳೆದ ವಾರ ಶಾಸನ ಸಭೆಯಲ್ಲಿ ಚರ್ಚಿಸಲ್ಪಟ್ಟಿತು. ಸಭಾ ಧುರೀಣರಾದ ಶ್ರೀ ಬಿ. ಗೋಪಾಲ ರೆಡ್ಡಿಯವರು ಸರಕಾರದ ಪರವಾಗಿ ಉತ್ತರವೀಯುತ್ತಾ, ಗವರ್ನರರ ನೇಮಕದ ಪೂರ್ವಭಾವಿಯಾಗಿ, ಕೇಂದ್ರದವರು ಮುಖ್ಯ ಮಂತ್ರಿ ರೆಡ್ಡಿಯವರೊಡನೆ ಪರ್ಯಾಲೋಚನೆ ಮಾಡಿದ್ದಾರೆಂದೂ, ಸಾರ್ವಜನಿಕ ಹಿತದೃಷ್ಟಿಯಿಂದ ಹೆಚ್ಚು ವಿವರಗಳನ್ನು ಬಹಿರಂಗ ಪಡಿಸಲು ಸಾಧ್ಯವಿಲ್ಲವೆಂದೂ ಹೇಳಿದರು..

ಉತ್ತರ ಭಾರತದ ಸಂಸ್ಥಾನವೊಂದರ ಮಹಾರಾಜರಿಗೆ, ದಕ್ಷಿಣ ಪ್ರಾಂತದ ಗವರ್ನರರಾ[illegible] ಹೊಂದಿಕೊಳ್ಳಲಾದೀತೇ ಎಂದು ಸಂಶಯ [illegible] ಜನಕ್ಕೆ. ಕಳೆದ ಶುಕ್ರವಾರ ನ[illegible] ಗವರ್ನರರಿಗೂ ಅವರ ಪತ್ನಿಯ[illegible] ಭಾವ ಮದ್ರಾಸ ಕಾರ್ಪೊರೇಶನ್ನಿನ [illegible] ಡುಟ್ಟದ ಒಳ ಅರ್ಪಣ ಸಮಾರಂಭ, ಕಣ್ಣು ತೆರೆ[illegible] ಮಾನಪತ್ರಕ್ಕೆ ಉತ್ತರವೀಯು[illegible] ಪಕೇಳಿದರು. ನಗರದ ಮಹಾರಾಜರು ಭಾರತ[illegible] ಒಗ್ಗಟ್ಟನ್ನೂ ಐಕ್ಯವನ್ನೂ [illegible]

ಉತ್ತರ ದಕ್ಷಿಣ ಜನರ ಭಿನ್ನತೆ [illegible] ಇದೆ. ಕೇವಲ ಹೊರಗಿನವೇ ಹೊರತು; [illegible], ರಾಜಕೀಯದರೆ ಇಡೀ ದೇಶದಲ್ಲಿ ಎಲ್ಲರನ್ನು ತೊರೆದು ಎಂಬ ಆಂತರಿಕ ಐಕ್ಯವಿದ್ದು ಬಲ ಕೊಡುವುದು ಸ್ವಾರ್ಥಿಗಳ ಬಲೆಗೆ ಬೀಳದು ಎಚ್ಚರಿಸಿದರು ಧಾರ್ಮಿಕ ವ್ಯಕ್ತಿ [illegible] ರಾಜರೂ ಮಹಾರಾಣಿ ರಾಷ್ಟ್ರೀಯ ಸರಕಾರ [illegible] ನೇಕ ಸಾರ್ವಜನಿಕ ಎಲ್ಲರ ಅಧ್ಯಕ್ಷತೆ [illegible] ಗಗಳಲ್ಲಿ ಭಾಗವಹಿಸಿ,

ಭಾವನಗರದ [illegible] ನುರಾಗಿಗಳಾಗುತ್ತಿದ್ದಾರೆನ್ನಯವರೂ ಈಗಾ[illegible] ಡ ಸಂಸ್ಥೆಯ ವಿರುದ್ಧ ಚಳ ಸಂಸ್ಥೆಗಳ [illegible] ಡಿಗೆ ತಣ್ಣಗಾಗಿದೆ. ಹೆಚ್ಚು [illegible] ಬಹುದು. [illegible] ವಳಿ ಸಹ [illegible]

ಕೂಲಿಕಾರರಿಗೆ ಲಾಭದಲ್ಲಿ ಪಾಲು

ಕೇಂದ್ರ ಸರಕಾರದ ತಜ್ಞ ಸಮಿತಿಯ ಸೂಚನೆಗಳು

ಉದ್ಯಮಗಳಲ್ಲಿ ದೊರೆತ ಲಾಭದಲ್ಲಿ ಒಂದಂಶವನ್ನು ಕೂಲಿಕಾರರಿಗೆ, ಹಂಚುವದು ಎಷ್ಟು ಮಟ್ಟಿಗೆ ಅಪೇಕ್ಷಣೀಯವೆಂದು ವಿಚಾರಿಸಲು ಕೆಲ ತಿಂಗಳುಗಳ ಹಿಂದೆ ಕೇಂದ್ರ ಸರಕಾರದವರು ನೇಮಿಸಿದ ಸಮಿತಿಯವರು ಕಳೆದವಾರ ತಮ್ಮ ವರದಿಯನ್ನು ಸರಕಾರಕ್ಕೆ ಒಪ್ಪಿಸಿದರು. ಅದರಲ್ಲಿ ಅವರು ಆರು ಪ್ರಮುಖ ಉದ್ಯಮಗಳಲ್ಲಿ ೫ ವರ್ಷಗಳ ವರೆಗೆ ಪ್ರಯೋಗಾರ್ಥವಾಗಿ ಲಾಭದಲ್ಲಿ ಕೂಲಿಕಾರರಿಗೆ ಹಂಚಬೇಕೆಂದು ಸರಕಾರಕ್ಕೆ ಸಲಹೆ ಕೊಟ್ಟಿದ್ದಾರೆ.

× × ×

ಅನೇಕ ವಾರಗಳಿಂದ ಪತ್ರಿಕೆಗಳಲ್ಲಿ ಈ ವಿಷಯದಲ್ಲಿ ಚರ್ಚೆ, ವಾದ ವಿವಾದಗಳು ನಡೆಯುತ್ತ ಬಂದಿವೆ. "ಕರ್ಮವೀರ" ದಲ್ಲಿ ಹಿಂದೊಮ್ಮೆ ಈ ವಿವಾದದ ಎರಡೂ ದೃಷ್ಟಿಕೋಣಗಳನ್ನು ವಿವೇಚಿಸಲಾಗಿತ್ತು. ಈ ಸೂಚನೆಗೆ ಮುಖ್ಯ ವಿರೋಧ ಬಂಡವಳಗಾರರದೇ ಇದ್ದರೂ ಕೂಲಿಕಾರ ಪ್ರತಿನಿಧಿಗಳು ಕೂಡ ಇದನ್ನು ಸಂಶಯದಿಂದ ನೋಡುತಿದ್ದಾರೆಂದೂ ಜಗತ್ತಿನಲ್ಲಿ ಇಂಥ ಪ್ರಯೋಗಗಳು ಅನೇಕ ದೇಶಗಳಲ್ಲಿ ನಡೆದಿದ್ದರೂ ಅದರ ಫಲಿತಾಂಶ ಅಷ್ಟು ಆಶಾದಾಯಕವಾಗಿರಲಿಲ್ಲವೆಂದೂ ಹೇಳಬಹುದು.

× [illegible] ಹಾಕಿದ್ದ [illegible] × ×

[illegible] ಸಮಿತಿಯವರು ಮುಖ್ಯವಾಗಿ ಎರಡು ಕೋನಗಳಿಂದ ನೋಡಿ ಈ ಪ್ರಯೋಗ ಮಾಡಿನೋಡುವದು ಅಪೇಕ್ಷಣೀಯವೆಂದು ಸೂಚಿಸಿದ್ದಾರೆ ಆ ಕೋನಗಳೆಂದರೆ, ಒಂದು ಲಾಭದಲ್ಲಿ ಪಾಲು ಕೊಡುವದರಿಂದ ಔದ್ಯೋಗಿಕ ರಂಗದಲ್ಲಿ ಶಾಂತಿಯುಂಟಾಗುವದು, ಮತ್ತು ಇನ್ನೊಂದು, ಅದರಿಂದ ಕೂಲಿಕಾರರಿಗೆ ಉತ್ಪಾದನೆಯನ್ನು ಹೆಚ್ಚಿಸಲು ಹುರುಪು ಬರಬಹುದೆಂಬವು ಲಾಭದಲ್ಲಿ ತಮಗೂ ಪಾಲು ದೊರೆಯುವದೆಂದು ತಿಳಿದ ಕೂಲಿಕಾರರು ಅನಾವಶ್ಯಕ ಸಂಪುಗಳು, ಉದ್ದೇಶಪೂರ್ವಕ ಸೋಮಾರಿತನ ಮೊದಲಾದವುಗಳಲ್ಲಿ ಆಸಕ್ತರಾಗದೆ ಉತ್ಪಾದನೆಯನ್ನೂ ತನ್ಮೂಲಕ ತಮ್ಮ ಲಾಭವನ್ನೂ ಹೆಚ್ಚಿಸಿಕೊಳ್ಳಲು ಹೆಣಗುವರೆಂದು ಸಮಿತಿಯವರು ನಂಬಿದ್ದಾರೆ.

× × ×

ಉದ್ದಿಮೆಗಾರ–ಬಂಡವಲುಗಾರರ ವಿರೋಧವನ್ನು ಸಮಾಧಾನಪಡಿಸಲು ಸಮಿತಿಯವರು ಅವರ ಬಂಡವಲಕ್ಕೆ ನೂರಕ್ಕೆ ಆರು [illegible] ಲಾಭವನ್ನು ಬಿಟ್ಟು ಉಳಿದುದನ್ನು ಮಾತ್ರ ಲಾಭ ಹಂಚಿಕೆಯ ಯೋಜನೆಗೊಳಪಡಿಸಬೇಕೆಂದು ಸೂಚಿಸಿದ್ದಾರೆ. 'ಬರಡವ [illegible]' ಎಂಬುದರಲ್ಲಿ ಬರಿ ಪಾಲುಬಂಡವಲು ಆ ಎಲ್ಲ ಮೂಲ ಬಂಡವಲು ಮಾತ್ರವೇ [illegible] ಧವನ್ನು ಎಲ್ಲ ಕ್ಷೇಮನಿಧಿಗಳೂ ಸೇರಿ [illegible] ವ್ಯವಹಾರದಲ್ಲಿ ತೊಡಗಿಸಲ್ಪಟ್ಟ [illegible] ಕೇವಲ ಬಂಡವಲಿಗೆ ನೂರಕ್ಕೆ ಆರರಂತೆ [illegible] ಗಿ ನೋಡಿ [illegible] ಭಾರತೀಯರ

ಬಿಡಲಾಗುವದು. ಇದಲ್ಲದೆ ಒಂದು ವರ್ಷದ ಲಾಭಾಂಶ ನೂರಕ್ಕೆ ೬ ಕ್ಕಿಂತ ಕಡಿಮೆಯಾದರೆ ಮುಂದಿನ ವರ್ಷಗಳ ಗಳಿಕೆಯಲ್ಲಿ ಕೊರತೆಯ ಅಂಶವನ್ನು ತುಂಬಿಕೊಳ್ಳಬಹುದು [illegible] ಬಂಡವಲುಗಾರರ ಆಕ್ಷೇಪಗಳಿಗೆ ನ್ಯಾಯವಾದ ಪರಿಹಾರವೆಂದು ಸಮಿತಿಯ ಅಭಿಪ್ರಾಯ. ಇದಲ್ಲದೆ ಕ್ಷೇಮನಿಧಿಗೆ ನೂರಕ್ಕೆ ೧೦ ರ [illegible] ಲಾಭವನ್ನು ತೆಗೆದಿಡಲು ಎಡೆ ಕೊಡಲಾಗಿ[illegible]

× × ×

ವಿದೇಶಗಳಲ್ಲಿ ಕೂಲಿಕಾರರು ಇಂಥ [illegible] ನೆಗಳಲ್ಲಿ ಆಸ್ಥೆ ವಹಿಸದಿರಲು ಅವರಿಗೆ ಲಾಭಾಂಶ ತೀರ ನಿಕೃಷ್ಟವಾಗಿದ್ದು [illegible] ಣವಾಗಿತ್ತೋ ಏನೊ. ಅದೆ [illegible] ಬಹುದು, ಮೇಲಿನ ಎಲ್ಲ [illegible] ಅಂದರೆ ಬಂಡವಲಿನ ಮೇಲೆ [illegible] ನಿಧಿಗೆ ನೂರಕ್ಕೆ ೧೦ ಮ[illegible] ಯಥಾಯೋಗ್ಯವಾದಷ್ಟು, [ನಂ]ತರ ಉಳಿದ ಲಾಭದಲ್ಲಿ ನೂರ[illegible]ನ್ನು ಕೂಲಿಕಾರರಿಗೆ ಹಂಚಬೇ[ಕೆಂದು ಸೂ]ಚಿಸಿದ್ದಾರೆ

× ×

ಈ ಲಾಭವನ್ನು ಕೂ[ಲಿಕಾರರು] ಯಾವ ಆಧಾರವನ್ನಿಟ್ಟು ಕೊಂಡ[ು ಹಂಚಬೇ]ಕು? ಅವನ ಒಟ್ಟು [illegible] ಪನ್ನದ [illegible] ಎಂದು ಗಳಗಳಿಸಿ [illegible] ತಟ್ಟಿ ಭತ್ತೆ ಇವನ್ನೆಲ್ಲ [illegible] ನಾನು "ಬಾಕಿ ಮಂ[illegible] ವನ್ನೆ ಆಧಾರವಾಗಿಟ್ಟು ಪ್ರಮಾಣದಲ್ಲಿ [illegible] ನಾನು ಮಾಚಬೇಕೆಂದು ಆರ[illegible] ಗೆನಿಸಿದೆ. ಬೋನಸ್ಸಿನಲ್ಲಿ ಸಾಮಿಲಾಭಾಂಶವೆಲ್ಲವೂ ನಗದಿ ಬಿಟ್ಟು ಮೂಲ ಸಂಬ[ಳ] ಸರ್ವಸ್ವ [illegible] ಕೈಗೆ ಹತ್ತಬಾರದು. ಲಾಭಾಂಶವನ್ನು [illegible] ತ ಎಳಿಕೆಯ ಕಾಲಂಶಕ್ಕಿಂತ ಸೂಚನೆ. ಇದಲ್ಲದೆ [illegible] ಭ ಹಂಚಿಕೆಯಲ್ಲಿ ಅವನ ಯಾಗಿ ಕೂಲಿಕಾ[ರ] ಜೀವ[illegible] ನೂರಕ್ಕೆ [illegible] ದರಂತೆ ಅವನ ಮೂಲ [illegible] ದ ಹಣವನ್ನು ಪ್ರಾವಿಡೆಂಟ ಹೆಚ್ಚು ಹಣ ಈ [illegible] ಮಾಡಬೇಕು. ಅರ್ಥಾತ್ ಕೈಸೇರಕೂಡದು. [illegible] ಮೂರು ತಿಂಗಳ ಮೂಲ ಹಂಚಿ ಹೆಚ್ಚಿಗೆ [illegible] ಲಾಭಾಂಶವಾಗಿ ಕೈಗೆ ಸಿಕ್ಕಿ ಫಂಡಿಗೆ ಜಮಾ [illegible] ಸನ್ನಿಧಿಯಾಗಿ ಉಳಿಯುವದು. ಕೂಲಿಕಾರರಿಗೆ [illegible] ಗಳಿಕೆ ಯಷ್ಟು [illegible] ಉಳಿದುದು [illegible]

× ×

[illegible] ಸೂಚನೆಗಳಲ್ಲಿ ಇನ್ನೊಂದು ಅಂಶವೆಂದರೆ, ಈ ಲಾಭ ಹಂಚಿಕೆ [illegible] ದಖಾನೆಗಳಿಗೆ ಬೇರೆ ಬೇರೆಯಾಗಿ

ಸಮಿತಿ[illegible] ಪ್ರದೇಶದ ವಿಶಿಷ್ಟ ಉದ್ಯೋಗಗಮನ್ನು [illegible] ಒಂದೊಂದು ಘಟಕವಾಗಿ ಹಿಡಿದು, ವಿಶಿಷ್ಟ [illegible] ಡುತ್ತದೆ. ಸದ್ಯಕ್ಕೆ ಜವಳಿ ಉದ್ಯೋಗ ಮುಂ[ಬ]ಯಿ, ಸೊಲ್ಲಾಪುರ, ಅಹಮದಾಬಾದದ ಎಲ್ಲ ಗಿರಣಿಗಳನ್ನು ಒಂದು ರಾಶಿಯೆಂದು ಭಾವಿಸಿ ಅವುಗಳ ನಿಕ್ಕಿ ಲಾಭದ ಅರ್ಧಾಂಶಗಳನ್ನೆಲ್ಲ ಒಂದುಗೂಡಿಸಿ ಅವನ್ನು ಆ ಎಲ್ಲ ಗಿರಣಿಗಳ ಕೂಲಿಕಾರರಿಗೆ ಮೇಲ್ಕಾಣಿಸಿದ ಪ್ರಮಾಣದಲ್ಲಿ ಹಂಚತಕ್ಕದ್ದು. ಇಲ್ಲದಿದ್ದರೆ ಲಾಭ ಕಡಮೆಯಾಗಿದ್ದ ಗಿರಣಿಯ ಕುಶಲ ಕೂಲಿಕಾರ [illegible] ಬೇರೆ ಗಿರಣಿಗಳ ಕೂಲಿಕಾರರಿಗಿಂತ ಕಡಿಮೆ ಲಾಭವನ್ನು ಹೊಂದಬೇಕಾಗುವದು. ಇದರಿಂದ ಉದ್ಯಮದಲ್ಲಿ ಮತ್ತೆ ಅಶಾಂತಿಯುಂಟಾಗಬಹುದು.

× × ×

ಈ ಬಗೆಯ ಲಾಭಾಂಶದ ಹಂಚಿಕೆಯಲ್ಲಿ ನಮಗಿನ್ನೂ ಅನುಭವವಿಲ್ಲದ್ದರಿಂದ ಪ್ರಯೋಗ ಕಾಲದ ಅನುಭವಗಳಿಂದಲೇ ಕಲಿತು ಸುಧಾರಿಸಬೇಕೆಂದು ಸಮಿತಿ ಹೇಳಿದೆ. ಅದಕ್ಕಾಗಿ ಸದ್ಯಕ್ಕೆ ಉಕ್ಕು, ಜವಳಿ, ಸಣಬು, ಸಿಮೆಂಟ ರಬ್ಬರ್ ಟಾಯರ ಹಾಗು ಸಿಗರೇಟ ಉದ್ಯಮಗಳಿಗೆ ಮಾತ್ರ ಈ ಯೋಜನೆಯನ್ನು ಅನ್ವಯಿಸಬೇಕೆಂದು ಅದರ ಸೂಚನೆ.

ನಾನು ಕಂಡ ಮಹಾತ್ಮಾ ಗಾಂಧಿ

ಜಗತ್ತು ಇನ್ನೂ ಗಾಂಧಿಯವರ ವ್ಯಕ್ತಿತ್ವದ ಗಾಢ ನಿಸ್ತಬ್ಧತೆಯಿಂದ ಚೇತರಿಸಿಕೊಂಡಿಲ್ಲವಾದರೂ ಗಾಂಧೀಯುಗ ಇದೇ ಈಗ ಪ್ರಾರಂಭವಾಗುತ್ತಿದೆ. ಅವರ ಜೀವನದ ಎಪ್ಪತ್ತೊಂಭತ್ತು ವರ್ಷಗಳು ಮಾನವ ಕುಲದ ಮನಸ್ಸಾಕ್ಷಿಯನ್ನು ಕುಲುಕಿ ಎಚ್ಚರಗೊಳಿಸುವವರಲ್ಲೆ ಸಂದವು.

ನಾನು ಮಹಾತ್ಮರನ್ನು ಮೊದಲ ಬಾರಿ ಕಂಡದ್ದು ೧೯೨೫ ರಲ್ಲಿ, ಕಾನಪುರ ನಗರದಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನ ಸೇರಿದಾಗ. ರವಿವಾರ ದಿನ ಸಂಜೆ ತಡವಾಗಿ ಬಂದುದರಿಂದ ನನಗೆ ಅಧಿವೇಶನ ತಪ್ಪಿಹೋಗಿತ್ತು. ಸೋಮವಾರ ಮುಂಜಾನೆ ಬೇಗ ಎದ್ದು ಸಭಾಮಂಟಪಕ್ಕೆ ಬಂದೆ. ಮುಂದಾಳುಗಳು ಕೂಡುವ ವ್ಯಾಸಪೀಠದತ್ತ ನೋಡಿದೆ. ಅಲ್ಲಿ ಪ್ರಸಿದ್ಧ ಮುಸ್ಲಿಂ ಅಲಿ ಬಂಧುಗಳಿದ್ದರು, ಇನ್ನೂ ಹಲವರಿದ್ದರು. ಗಾಂಧಿಯವರು ಮಾತ್ರ ಇರಲಿಲ್ಲ.

"ಇಂದು ಅವರ ಮೌನದ ದಿನ," ಎಂದು ನನ್ನ ಗೆಳತಿ ದೇವಿ ನನ್ನ ಕಿವಿಯಲ್ಲಿ ಉಸುರಿದಳು. "ಪ್ರತಿ ಸೋಮವಾರ ಅವರು ಮೌನವನ್ನು ಆಚರಿಸುತ್ತಾರೆ." ಕೆಲ ಕ್ಷಣಗಳ ವರೆಗೆ ಅವಳು ಮಾಯವಾದಳು. ಮರಳಿದಾಗ ಮಹಾತ್ಮರು ತಮ್ಮ ಬಳಿ ಬಂದು ಕುಳ್ಳಿರಲು ನನಗೆ ಆಮಂತ್ರಣವಿತ್ತಿರುವರೆಂದಳು.

ಮಾಸದ ನಸುನಗೆ

ಗಾಂಧಿಯವರೂ ನನ್ನ ಗಂಡನೂ ಅನೇಕ ವರ್ಷಗಳಿಂದ ಗೆಳೆಯರು. ಈಗ ನಾವು ದಕ್ಷಿಣ ಆಫ್ರಿಕೆಯಿಂದ ಅಲ್ಲಿಯ ಹೋರಾಟದ ಹೊಸ ಸುದ್ದಿಯೊಡನೆ ಬಂದಿದ್ದೆವು. ಅಷ್ಟರಿಂದ ಬಳಗದವಳಾದ ನಾನು ಮೌನದ ದಿನವೂ ಅವರ ಬಳಿ ಹೋಗಿ ಕುಳಿತುಕೊಳ್ಳಬಹುದಾಗಿತ್ತು. ನಾನು ಒಡನೆ ಹೋದೆ. ಆ ನಿರಾಡಂಬರ ಕೊಟಡಿಯನ್ನು ನಾನು ಪ್ರವೇಶಿಸುತ್ತಿದ್ದಾಗ ಅವರು ನೆಲದಿಂದೆದ್ದು, ನನ್ನ ಎರಡೂ ಕೈಗಳನ್ನು ತಮ್ಮ ಕೈಗಳಲ್ಲಿ ಹಿಡಿದುಕೊಂಡು ನಸುನಗೆಯ ಸ್ವಾಗತವನ್ನಿತ್ತರು. ಆ ನಸುನಗೆ ನನ್ನ ಮನದಲ್ಲಿ ವರ್ಷ ವರ್ಷಾಂತರಗಳ ವರೆಗೆ ಉಳಿಯಿತು—ಬರಿ ಐದು ತಿಂಗಳ ಹಿಂದೆ ನಾನು ದಿಲ್ಲಿಯಲ್ಲಿ ಅವರೊಡನೆ ಕಳೆದ ಕೊನೆಯ ಗಳಿಗೆಯ ವರೆಗೆ ಕೂಡ.

ಕೋಣೆ ವಿಜನವಾಗಿತ್ತು. ಗಾಂಧಿಯವರು ಒಂದು ಬಿಳಿ ಗಾದಿಯ ಮೇಲೆ ಕುಳಿತಿದ್ದರು ಬಳಿಯಲ್ಲಿ ಅವರ ಚರಕ, ಪುಸ್ತಕಗಳ ರಾಶಿ ಮತ್ತು ಇತರ ಕಾಗದ ಪತ್ರಗಳು. ಅವರು ಒಂದು ಕಾಗದದ ತುಣಕಿನ ಮೇಲೆ ಸೀಸದ ಕಡ್ಡಿಯಿಂದ ಏನೋ ಬರೆದು, ತುಂಟ ನೋಟದೊಡನೆ, ಅದನ್ನು ನನ್ನ ಕೈಯಲ್ಲಿಟ್ಟರು. ಆ ನೋಟ ಎಲ್ಲ ಪರಕೀಯತೆಯನ್ನು ಪರಿಹರಿಸಿಬಿಟ್ಟಿತು. "ನೀವು ಮಾತಾಡಬಹುದು, ನಾನು ಕೂಡದು," ಎಂದು ಆ ಚೀಟಿಯಲ್ಲಿತ್ತು. ಅದುದರಿಂದ ನಾನು ಆ ಕೋಣೆಯಲ್ಲುಳಿದಿದ್ದ ಇನ್ನೊಂದೇ ಒಂದಾದ ಗಾದಿಯ ಮೇಲೆ ಕುಳಿತೆ. ದಕ್ಷಿಣ ಆಫ್ರಿಕೆಯನ್ನೂ ಅವರ ಮಗ ಮಣಿಲಾಲನನ್ನೂ ಕುರಿತು ಒಂದೆರಡು ಮಾತಾಡಿದೆ. ಮುಂದೆ ಆ ಕೊಟಡಿಯನ್ನು ಆವರಿಸಿದ ಗಂಭೀರ ಧ್ಯಾನಶ್ರೀಯಲ್ಲಿ ಮಾತು ಅಸ್ಥಾನಿಕವೆಂದೆನಿಸಿತು. ಅಲ್ಲಿ ನಾನು ಒಂದು ತಾಸನ್ನೇ ಕಳೆದಿರಬಹುದು. ಗಾಂಧಿಯವರು ಆಗಾಗ್ಗೆ ನೂಲುತ್ತಿದ್ದರು, ಆಗಾಗ್ಗೆ ಒಂದು ಪುಸ್ತಕವನ್ನು ತೆರೆದು ಓದುತ್ತಿದ್ದರು, ಒಮ್ಮೊಮ್ಮೆ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಿದ್ದರು. ಆ ಕ್ಷಣದಿಂದ ನಾನು ಗಾಂಧಿಯವರನ್ನು ಲಘು ದೇಹಿಯೆಂದು ಬಗೆಯುವದನ್ನು ಬಿಟ್ಟೆ. ಉಪವಾಸ ವನವಾಸಗಳಿಂದ ಅವರ ಮೈ ಸಣ್ಣಾಗಿದ್ದರೂ ಅವರ ಕಣ್ಣುಗಳು ನಿಮ್ಮ ಕಣ್ಣಲ್ಲಿ ನೇರವಾಗಿ ನಟ್ಟು ಸತ್ಯವನ್ನು ಅರಸತೊಡಗಿದಾಗ ಅವರ ಪ್ರಚಂಡ ತೇಜಸ್ಸಿನ ಪರಿಚಯವಾಗುತ್ತಿತ್ತು. ಅತ್ತ ಮಂಟಪದಲ್ಲಿ ಕಾಂಗ್ರೆಸ ಅಧಿವೇಶನ ಸಾಗಿತ್ತು ಆದರೆ ಅದರ ಬೆಂಬಲದ ಈ ಅಗಾಧ ಪ್ರಭಾವ, ಅದನ್ನೆಲ್ಲ ವ್ಯಾಪಿಸಿದ ಈ ಶಕ್ತಿ, ಇಲ್ಲಿ, ಒಮ್ಮೆ ನೂಲುತ್ತ ಒಮ್ಮೆ ಧ್ಯಾನಿಸುತ್ತ, ಮೌನವಾಗಿ ಕುಳಿತಿತ್ತು.

ಕೊಲೆಯಿಲ್ಲದ ಯುದ್ಧ

ಗಾಂಧಿಯವರು ಸೇನಾನಿಯಾಗಿ, ಭಾರತದ ಸ್ವಾತಂತ್ರ್ಯ ಯುದ್ಧ ಆವೇಶದಿಂದ ಸಾಗಿತ್ತು. ಯುರೋಪು ಅಮೇರಿಕೆಗಳಿಗೆ, ಭಾರತದ ನರನಾರಿಯರು ಹೋರಾಡುತ್ತಿದ್ದ ಈ ಕೊಲೆಯಿಲ್ಲದ ಯುದ್ಧದ ಅರ್ಥವೇ ಆಗುತ್ತಿರಲಿಲ್ಲ. ಅವರ ಕೈಲಾಗುವ ಒಂದೇ ಯುದ್ಧವೆಂದರೆ ಕೊಲ್ಲುವ ಯುದ್ಧ.

ಇದು ಅಹಿಂಸಾ ಯುದ್ಧವಾಗಿದ್ದುದರಿಂದಲೆ ಸ್ತ್ರೀಯರು ಅದರಲ್ಲಿ ಪೂರ್ಣವಾಗಿ ಭಾಗವಹಿಸಬಲ್ಲವರಾದರು; ಆಜೀವ ಬುರುಖೆಯಲ್ಲಿ ಕಳೆದಿದ್ದ ಹೆಂಗಸರು ತಾವೇ ನೂತು ನೇಯ್ದಿದ್ದ ಖಾದಿಯನ್ನು ಧರಿಸಿ ಪರದೆಯ ಮರೆಯಿಂದ ಹೊರಧುಮುಕಿದರು; ಸರಕಾರದ ಗಡಂಗುಗಳನ್ನೂ ಅಫೀಮಿನ ಅಂಗಡಿಗಳನ್ನೂ ಪಿಕೆಟಿಂಗ್ ಮಾಡಿ ಸೆರೆಮನೆಗೆ ಹೋಗಲು ಸಿದ್ಧರಾದರು. ದಕ್ಷಿಣ ಆಫ್ರಿಕೆಯಲ್ಲಿ ಗಾಂಧಿಯವರ ವಿನಯಶಾಲಿನಿ ಪತ್ನಿ ಕಸ್ತೂರಿಬಾ ಅವರು, ನಾಲ್ಕು ಮಕ್ಕಳ ತಾಯಿ, ದರ್ಬಾನದಿಂದ ಪ್ರಿಟೋರಿಯಕ್ಕೆ ೩೦೦೦ ಭಾರತೀಯರು ಕೈಕೊಂಡ ಆರುನೂರು ಮೈಲಿನ "ನಿಷೇಧ ಯಾತ್ರೆ"ಯ

—ಶ್ರೀಮತಿ ನೆಲ್ಲಿ ಫಿಶರರಿಂದ—

ಮುಂದಾಳತನವನ್ನು ವಹಿಸಲಪೇಕ್ಷಿಸಿದಂದಿನಿಂದಲೇ ಗಾಂಧಿಯವರು ಸ್ತ್ರೀಯರನ್ನು ತಮ್ಮ ಆಂದೋಲನದ ಅವಿಭಾಜ್ಯ ಅಂಗವನ್ನಾಗಿ ಮಾಡಿದ್ದರು.

"ಹೆಂಗಸು ಇನ್ನು ಗಂಡನ ಕ್ರೀತ ದಾಸಿಯರಾಗಿರಕೂಡದು. ಅವಳು ತನ್ನ ಮಾರ್ಗವನ್ನು ಕಂಡುಕೊಳ್ಳಲು ತನ್ನ ಗಂಡನಷ್ಟೇ ಸ್ವತಂತ್ರಳು" ಎಂದು ನವಭಾರತಕ್ಕೆ ಗಾಂಧಿಯವರು ವಿಧಿಸಿದರು.


ಚರಕದ ಕವಚ

ಚರಕವೆಂಬುದು ಅಹಿಂಸಕ ಯೋಧನ ಕವಚವಾಗಿತ್ತು. ನಿಜವಾಗಿ ಅದು ಇಡಿ ಆಂದೋಲನದ ಸಂಕೇತವೂ ಆಗಿತ್ತು. "ಇದು ಇತಿಹಾಸ ಚಕ್ರವನ್ನು ಹಿಂದೆ ತಿರುಗಿಸುವದು" ಎಂದು ಪಾಶ್ಚಿಮಾತ್ಯ ಜಗತ್ತು ಟೀಕಿಸಿತು. ಆದರೆ ಗಾಂಧಿಯವರಾಗಲಿ ಅವರ ಕೈಯಲ್ಲಿ ಚೆನ್ನಾಗಿ ಪಳಗಿದ ಕುಶಲ ಶಿಷ್ಯರಾಗಲಿ ಈ ಪಾಶ್ಚಿಮಾತ್ಯ ಉಪಹಾಸದಿಂದ ವಿಚಲಿತರಾಗಲಿಲ್ಲ. ಅವರು ತಮ್ಮ ಅಟ್ಟಗಳಿಂದ ಹಳೆಯ ಚರಕಗಳನ್ನು ಹೊರತೆಗೆದರು. ಇಲ್ಲದಿದ್ದರೆ ಹೊಸವನ್ನು ಕೊಂಡುಕೊಂಡರು. ಮತ್ತು ೧೫೦ ವರ್ಷಗಳಿಂದ ಒತ್ತಾಯದಿಂದ ಪರದೇಶಗಳಿಗೆ ಒಯ್ಯಲ್ಪಟ್ಟು ಅಲ್ಲಿ ನೇಯ್ದು ಅರಿವೆಯಾಗಿ ಬಡ ಹಿಂದುಸ್ತಾನಕ್ಕೆ ತಿರುಗಿ ಬರುತ್ತಿದ್ದ ಹತ್ತಿಯನ್ನು ತಮ್ಮೀ ಚರಕಗಳಲ್ಲಿ ನೂಲ ತೊಡಗಿದರು. ಆದರೆ ಚರಕವು ಇಷ್ಟನ್ನು ಮಾತ್ರವೇ ಸಾಧಿಸಲಿಲ್ಲ. ಅದು ಪಾಶ್ಚಿಮಾತ್ಯ ಪ್ರಪಂಚಕ್ಕೆ ಕನಸಿನಲ್ಲಿಯೂ ಹೊಳೆಯದ ಸಂಗತಿಗಳನ್ನು ಕೈಗೂಡಿಸಿತು. ಅದು ಆಂದೋಲನವನ್ನು ಒಂದುಗೂಡಿಸಿ ಅದರ ಸದಸ್ಯರನ್ನು ಸರಳ ಜೀವನಕ್ಕೊಳಪಡಿಸಿತು ತಾನೇ ನೇಯ್ದ ಅರಳೆಯ ಬಟ್ಟೆಯನ್ನು ಧರಿಸಿದ ಮೇಲೆ ಆಭರಣಗಳಾಗಲಿ ಹ್ಯಾಟುಗಳಾಗಲಿ ಬೂಟುಗಳಾಗಲಿ ಅವನಿಗೆ ಅಥವಾ ಅವಳಿಗೆ ಎಲ್ಲಿ ಒಪ್ಪಬೇಕು? ಹಳ್ಳಿಗರು ಪೇಟೆಗರು ಒಂದಾಗಿ ತೋರಿದರು; ಬ್ರಾಹ್ಮಣ ಅಸ್ಪೃಶ್ಯರಲ್ಲಿ ಭೇದ ಕಾಣಲಿಲ್ಲ; ಎಲ್ಲ ವರ್ಗಗಳೂ ಒಂದು ಮಹಾ ಧ್ಯೇಯದತ್ತ ಜೀವನ ಧಾರೆಯನ್ನು ತಿರುಗಿಸಿದರು.

ಸ್ತ್ರೀಯರ ಕ್ರಾಂತಿ

ಈ ಅಹಿಂಸಾತ್ಮಕ ಯುದ್ಧ ಕಠೋರ ಸಾಧನೆಯಾಗಿತ್ತು. ಅದು ಬಹು ದೀರ್ಘ ಕಾಲವೂ—ಮೂರು ದಶಕಗಳ ವರೆಗೆ—ನಡೆಯಿತು. ಆದರೆ ಸುಧಾರಣಾ ವಾದಿಗಳು ಸ್ಥೈರ್ಯಗೆಡಲಿಲ್ಲ; ಏಕೆಂದರೆ ಯುದ್ಧದಿಂದ ಅವರ ಚರಿತ್ರದ ಪರೀಕ್ಷೆಯೂ ಆಗಿತ್ತು, ಅದರ ವಿಕಾಸವೂ ಆಗಿತ್ತು. ತಮ್ಮ "ರಾಣೀವಾಸ"ಗಳಿಂದ ಮೆತ್ತನ್ನ ಅಡಿಯಿಡುತ್ತ ಹೊರಬಂದಿದ್ದ ಸ್ತ್ರೀಯರು ಈ ಯುದ್ಧದಲ್ಲಿ ಎಲ್ಲೊ ಒಂದು ಅಂಚಿನಲ್ಲಿರದೆ ರಂಗದ ನಟ್ಟನಡುವೆ ಹೋರುತ್ತಿದ್ದರು. ಅವರು ಎಲ್ಲ ಕಷ್ಟನಿಷ್ಠುರಗಳನ್ನೂ ಕೊನೆ ವರೆಗೆ—ಸ್ವಾತಂತ್ರ್ಯ ಸಿದ್ಧಿಸುವ ವರೆಗೆ—ಸಹಿಸಿದರು. ಹಿಂದುಸ್ತಾನವಿಂದು ಸ್ವತಂತ್ರವಾಗಿದೆ.

ಐದು ತಿಂಗಳ ಹಿಂದೆ, ಭಾರತದಲ್ಲಿ ಮತ್ತೆ ಸಂಚರಿಸಿದಾಗ ಈ ಹೆಣ್ಣುಮಕ್ಕಳಲ್ಲಿ ಕೆಲವರನ್ನು ಕಾಣಹೋಗಿದ್ದೆ. ಮುಂಚೆ ನಾನು ಸೆರೆಮನೆಯಲ್ಲಿ ಭೆಟ್ಟಿಯಾಗುತ್ತಿದ್ದ ಸರೋಜಿನಿ



ನಾಯಡು ಅವರನ್ನು ಕಾಣಲು ಈ ಬಾರಿ ಲಖನೋದ ರಾಜಭವನಸಮಾನವಾದ ಸರಕಾರಿ ಬಂಗಲೆಗೆ ಹೋಗಬೇಕಾಯಿತು. ಅಲ್ಲಿ ಅವರು ಯುಕ್ತಪ್ರಾಂತದ ಸಮರ್ಥ ಗವರ್ನರರಾಗಿ ಆಳುತ್ತಿದ್ದಾರೆ.

ಗಾಂಧಿಯವರ ಕ್ರಿಶ್ಚನ್ ಶಿಷ್ಯೆಯಾದ ರಾಜಕುಮಾರಿ ಅಮೃತಕುವರರನ್ನು ೧೯೩೯ ರಲ್ಲಿ ನಾನು ವರ್ಧಾದ ಗಾಂಧಿಯವರ ಗುಡಿಸಲಲ್ಲಿ ಕಂಡಿದ್ದರೆ, ಈ ಬಾರಿ ಅವರನ್ನು ಕಾಣಲು ದಿಲ್ಲಿಗೆ ಹೋಗಬೇಕಾಯಿತು. ಅವರು ಅಲ್ಲಿ ಮುಖ್ಯ ಮಂತ್ರಿ ನೆಹರೂ ಅವರ ಮಂತ್ರಿಮಂಡಲದಲ್ಲಿ ಏಕ ಮಾತ್ರ ಸ್ತ್ರೀ ಮಂತ್ರಿಯಾಗಿ ಸಮಸ್ತ ಭಾರತದ ಆರೋಗ್ಯದ ವಿಷಯವನ್ನು ನೋಡಿಕೊಳ್ಳುತ್ತಿದ್ದಾರೆ.

ತ್ರಿಪುರಿಯಲ್ಲಿ ವಿಜಯಲಕ್ಷ್ಮಿಯನ್ನು ಕಾಣಲು ಕಾಂಗ್ರೆಸ್ ಅಧಿವೇಶನದ ಡೇರೆಗೆ ಹೋಗಿದ್ದರೆ ಈಗ ಅವಳನ್ನು ಕಾಣಬೇಕಾದರೆ ಮಾಸ್ಕೋಕ್ಕೆ ಹೋಗಬೇಕಾದೀತು. ಅಲ್ಲಿ ಅವಳು ಭಾರತದ ಗೌರವಿತ ಪ್ರತಿನಿಧಿ. ಗಾಂಧಿಯವರ ನೇತೃತ್ವದಲ್ಲಿ ತರಬೇತಿ ಹೊಂದಿದ ಇಂಥ ಉದಾತ್ತ ಮಹಿಳೆಯರು ನೇಕರು ಇಂದು ಭಾರತ ಮಾತೆಯ ಪುನರುದ್ಧಾರದಲ್ಲಿ ಪೂರ್ಣವಾಗಿ ಭಾಗ ತೆಗೆದುಕೊಂಡಿದ್ದಾರೆ.

"ಸುಧಾರಣೆ ಹಳ್ಳಿಗಳಿಗೆ ಮುಟ್ಟಬೇಕು; ಅದು ಹೊರತು ಸುಧಾರಣೆಯಿಲ್ಲ,"—ಎಂದು ಗಾಂಧಿಯವರು ವರ್ಧಾದ ತಮ್ಮ ಮುಟ್ಟಿ ಮಣ್ಣಿನ ಗುಡಿಸಲಲ್ಲಿ ಕುಳಿತು ನನಗೆ ಹೇಳಿದ್ದರು. ಅದಕ್ಕಾಗಿ ಅ. ಭಾ. ಗ್ರಾಮೋದ್ಯೋಗ ಸಂಘ, ಅ. ಭಾ. ಚರಕ ಸಂಘ, ವರ್ಧಾ ಶಿಕ್ಷಣ ಯೋಜನೆ ಮೊದಲಾದವುಗಳನ್ನು ಅವರು ಯೋಜಿಸಿದ್ದರು ಆದರೆ ಈಗ ಹಿಂದೀ ಸರಕಾರ ಅಸ್ಪೃಶ್ಯತೆಯನ್ನು ಶಾಸನ ಬಾಹಿರವಾಗಿ ಮಾಡಿದಂತೆ ನಿರಕ್ಷರತೆಯನ್ನೂ ಕಡಿಮೆ ಮಾಡಲು ಪ್ರಯತ್ನಿಸದಿರರು. ಹಿಂದುಸ್ತಾನಕ್ಕೆ ಈಗ ದೊರೆ[illegible] ಕುಶಲ ಮುಂದಾಳತನವನ್ನು ನೋಡಿ[illegible]ದರೆ ಭಾರತದ ೭೫೦ ಸಾವಿರ ಹಳ್ಳಿಗಳು ಮರವೆಗೀಡಾಗಲಿಕ್ಕಿಲ್ಲೆಂದು ಭರವಸೆಯುಂಟಾಗುವದು.

ಕೊನೆಯ ಭೆಟ್ಟಿ

ಡಿಸೆಂಬರ ೧೯೪೭ರಲ್ಲಿ ನಾನು ದಿಲ್ಲಿಗೆ ಕೊನೆಯ ಬಾರಿ ಭೆಟ್ಟಿ ಕೊಟ್ಟಾಗ ಬಿರ್ಲಾಭವನದ ಉಪವನದಲ್ಲಿ ಗಾಂಧಿಯವರು ನಡೆಸುತ್ತಿದ್ದ ಪ್ರಾರ್ಥನೆಗಳಲ್ಲಿ ತಪ್ಪದೆ ಉಪಸ್ಥಿತಳಾಗುತ್ತಿದ್ದೆ. ಒಮ್ಮೆ ಯುವಕ ಬಿರ್ಲಾ ಅವರು ನನ್ನನ್ನು ಮೋಟಾರಿನಲ್ಲಿ ನನ್ನ ಹೋಟೆಲಿಗೆ ಬಿಟ್ಟು ಬಂದರು. ಆಗ ಸ್ವಾಭಾವಿಕವಾಗಿ ನಮ್ಮ ಸಂವಾದ ನಮ್ಮನ್ನೆಲ್ಲ ಮಂಕುಗೊಳಿಸಿದ ಈ ಮಹಾತ್ಮನತ್ತ ಹೊರಳಿತು. ಬಿರ್ಲಾ ಅವರು ಶುದ್ಧ ಹಿಂದೀ ಉಡುಗೆ ತೊಡುಗೆಯಲ್ಲಿದ್ದರು. "ಕೆಲ ವರ್ಷಗಳ ಹಿಂದೆ, ನಾನು ಎಂದಾದರೂ ಈ ಉಡುಪನ್ನು ಧರಿಸುವೆನೆಂದು ಯಾರಾದರೂ ಹೇಳಿದ್ದರೆ, ನಾನು ಅವನನ್ನು ತಿರಸ್ಕಾರ ಪೂರ್ವಕವಾಗಿ ನಗುತ್ತಿದ್ದೆ." ಎಂದರವರು— "ಯೇಸುಕ್ರಿಸ್ತನ ಬಳಿಗೆ ಬಂದ[illegible] ದುಃಖದಿಂದ ಮುಖದಿರುಹಿದ ಶ್ರೀಮಂತನಂತೆ ನಾನಾಗಲಿಲ್ಲ. ಈ ಭ್ರಷ್ಟ ಜೀವಿಯನ್ನು ನಾನು ಬಿಟ್ಟಿರಲಾರೆ [illegible] ಬಳಿ ಕಟ್ಟಕಡೆ ಸಿಕ್ಕಿವೆ."

ಈ ಭೆಟ್ಟಿ ಬಿರ್ಲಾರ ಬಂಗಲೆಯಲ್ಲಿ ಕೊನೆಗೆ ಗಾಂಧಿಯವರನ್ನು ಅವರ [illegible]ಗಳು ಕೊಂದವು ಅವರು ಅಲ್ಲಿಯೆ ಪ್ರಾರ್ಥನೆಗಳನ್ನು ನಡೆಸುತ್ತಿದ್ದರು, ಅಲ್ಲಿಯೆ ಎಲ್ಲ ವರ್ಗಗಳಿಂದಲೂ ಬರುವ ಜನರನ್ನು ಬರಮಾಡಿಕೊಳ್ಳುತ್ತಿದ್ದರು. ಅದು ಎಂದೆಂದಿನ ವರೆಗೂ ದೇಗುಲವಾಗಿ ಉಳಿಯಬೇಕು—ಹಿಂದುಸ್ತಾನಕ್ಕೆ

[illegible]

ದಿಲ್ಲಿಯಿಂದ ನಾನು ಹೊರಡುವ ದಿನ ಪ್ರಾರ್ಥನೆಯ ನಂತರ ನಾನು ಬಿರ್ಲಾಭವನದೊಳಗೆ ಅವರ ಬೆನ್ನ ಹಿಂದೆಯೆ ಹೋಗಿ [illegible] ಮಾತುಗಳನ್ನಾಡಿದೆ. ಬೂಟು ಕಳೆದಿಟ್ಟುಕೊಂಡೆ ಒಳಗೆ ಬರಲು ಅವರು ಹೇಳಿದರು.

ದೇವರ ಕೈಯಲ್ಲಿ

"ಇದು ವಿದೇಶಿ ಜಮಖಾನೆಯಲ್ಲವೆ? ಆದ್ದರಿಂದ ನಿಮ್ಮ ಪದ್ಧತಿಯನ್ನೇ ಅನುಸರಿಸಿರಿ" ಎಂದು ನನ್ನ ಸಂಕೋಚವನ್ನು ಕಳೆಯಲು ಅವರು ಯತ್ನಿಸಿದರು. ತಾವು ಮಾತ್ರ ಚಪ್ಪಲಿಗಳನ್ನು ಕಳಚಿ ತಗ್ಗಾದ ವೇದಿಕೆಯ ಮೇಲೆ ಕುಳಿತರು. ನಾನು ನೆಲದ ಮೇಲೆ ಕುಳಿತೆ. ಅಂದು ನಾನು ಕಂಡಿದ್ದ ನಿರಾಶ್ರಿತರನ್ನು ಕುರಿತೇ ಮಾತು ಬೆಳೆಯಿತು. ಅವರಂದರು: "ತಮ್ಮದೇನೂ ತಪ್ಪಿಲ್ಲದೆ ಈ ಗತಿಗೆ ಬಂದ ಈ ಬಡಪಾಯಿಗಳಿಗಾಗಿ ನಾನು ನನ್ನ ಜೀವನದ ಮುಂದಿನ ಭಾಗವನ್ನು ಸವೆಸುವೆ."

ಹಿಂದೂ ಮುಸ್ಲಿಮರನ್ನು ಹತ್ತಿರ ತರಲು ಅವರು ಸಂಕಲ್ಪಿಸಿದ್ದ ಉಪವಾಸದ ಸಂಗತಿ ಎತ್ತಿದೆ. ಅವರು ಹೇಳಿದ ಮಾತುಗಳು ಆಜೀವ ನನ್ನ ಹೃದಯದಲ್ಲಿ ರಣರಣಿಸುವದೇನಿಜ. "ನನಗಾಗಿ ಚಿಂತಿಸಬೇಡಿರಿ. ನನ್ನ ಪ್ರಾಣಗಳು ಆ ಪರಮೇಶ್ವರನ ಕೈಯಲ್ಲಿವೆ."

ನಿಜವಾಗಿತ್ತು ಅವರ ಮಾತು. ಹಿಂದೊಮ್ಮೆ ಅವರು ಹೇಳಿದ್ದು ನೆನಪಿಗೆ ಬರುತ್ತದೆ "ಪರಲೋಕದಲ್ಲಿ ಪರಮಾತ್ಮನ ಮುಂದೆ ನಾವು ನಿಂತಾಗ ಅವನು ಕೇಳುವದು ನಮ್ಮ ಹೆಸರನ್ನಲ್ಲ, ನಾವು ಎಂಥವರು, ನಾವು ಏನು ಮಾಡಿದ್ದೇವೆ ಎಂಬುದನ್ನು."

ವಿವಿಧ ಪ್ರಪಂಚ

ಗುಂಡು ನಾಟದ ವಸ್ತ್ರ

ಅಮೇರಿಕೆಯಲ್ಲಿ ಈಚೆಗೆ ಸಿದ್ಧ ಮಾಡಲ್ಪಟ್ಟ ಒಂದು ಬಗೆಯ ವಸ್ತ್ರಕ್ಕೆ ಗುಂಡು ಕೂಡ ನಾಟುವದಿಲ್ಲೆಂದು ಕೆಲದಿನಗಳ ಕೆಳಗೆ ಪ್ರದರ್ಶನ ಮಾಡಿ ತೋರಿಸಲಾಯಿತು. ಅದನ್ನು ಪ್ಲಾಸ್ಟಿಕ್ಸ ದ್ರವ್ಯ ಮತ್ತು ಸಾದಾ ಬಟ್ಟೆಯಿಂದ ತಯಾರಿಸಲಾಗಿದೆ. ಅದಕ್ಕೆ ನಾಟದೆ ಗುಂಡು ತಾನೆ ಚಪ್ಪಟೆಯಾಗಿ ಬೀಳುತ್ತದೆ.

ಈ "ವಸ್ತ್ರ" ತೋಫಿನ ಗುಂಡುಗಳನ್ನು ಕೂಡ ಉಕ್ಕಿನ ಕವಚದಷ್ಟೇ ಗಟ್ಟಿಯಾಗಿ ತಾಳಿಕೊಳ್ಳಬಲ್ಲದೆಂದು ಹೇಳಲಾಗಿದೆ. ಇದರಿಂದ ಈಗಾಗಲೆ ಮೋಟಾರಿನ ಮೈಗಳನ್ನೂ ದೋಣಿಗಳನ್ನೂ ವಿಮಾನದ ಮೈಗಳನ್ನೂ ತಯಾರಿಸಲಾಗಿದೆ.

ಒಂದು ತುಂಡು ಬಟ್ಟೆಯ ಮೇಲೆ ವಿಶೇಷ ತರದ ಒಂದು ಪ್ಲಾಸ್ಟಿಕ್ ದ್ರವವನ್ನು ಸುರಿಯುವರು. ಅದನ್ನು ವಸ್ತ್ರದ ಮೇಲೆಲ್ಲ ಹಬ್ಬಿಸಿ ಇನ್ನೊಂದು ಬಟ್ಟೆಯ ತುಂಡನ್ನಿಟ್ಟು ತಿರುಗಿ ಅದೇ ದ್ರವವನ್ನು ಹಬ್ಬಿಸುವರು. ಹೀಗೆಯೆ ಅನೇಕ ಬಾರಿ ಮಾಡಿದ ಮೇಲೆ ಅದನ್ನು ಸಾಧಾರಣ ಭಾರದ ಒತ್ತಡಕ್ಕೆ ಒಳಪಡಿಸಲಾಗುವದು. ಬಿಸಿನೀರಿನಲ್ಲಿ ಅದನ್ನು ಕೆಲ ನಿಮಿಷಗಳ ವರೆಗೆ ಮುಳುಗಿಸಿದರೆ ಅದು ಗಟ್ಟಿಯಾಗುತ್ತದೆ. "ಸುರುಳಿ ಹೋಳಿಗೆ" ಯಂಥ ಈ ವಸ್ತುವೇ ಉಕ್ಕಿಗಿಂತಲೂ ಗಟ್ಟಿಯಾದ "ವಸ್ತ್ರ".



ದೆವ್ವದಂಥ ಈ ... ಪೀಸ್‌ನ್ನು ಈಚೆಗೆ ಭಾರತಕ್ಕೆ ಬ್ರಿಟನ್ನಿನಿಂದ ಕಳಿಸಲಾಯಿತು. ... ೧೦೦ ... ೬೫ ಟನ್, ಉದ್ದ ೬೦ ... ಅಡಿ ಇದನ್ನು ಕಾರಖಾನೆಯೊಳಗಿಂದ ಹೊರತರಬೇಕಾದರೆ ಬೇರೆಯೇ ದಾರಿಯನ್ನು ಹಿಡಿಯಬೇಕಾಯಿತು. ಭಾರತದಲ್ಲಿ ಸಿಂದ್ರಿಗೆ ಬರಲಿದೆ ಈ ಪೀಸು.

ಸಾಲು ಮದುವೆ

ಒಂದೇ ಮಂಟಪದಲ್ಲಿ ಒಂದಕ್ಕಿಂತ ಹೆಚ್ಚು ಜೋಡಿಗಳ ಮದುವೆ ಮಾಡುವ ದೃಶ್ಯ ಹಿಂದೂಸ್ಥಾನದಲ್ಲೇನೂ ಹೊಸತಲ್ಲ. ಆದರೆ ಚೀನದಲ್ಲಿ ಈಚೆಗೆ ಜನಪ್ರಿಯವಾಗುತಿರುವ "ಸಾಲು ಮದುವೆ"ಗಳು ನಮಗೂ ಕುತೂಹಲಪ್ರದವಾಗಬಹುದು.

ಮೊನ್ನೆಮೊನ್ನೆ ಚೀನದ ಪೀಂಪಿಂಗ್ ನಗರದ ನಗರ ಭವನದಲ್ಲಿ ೪೯ ದಂಪತಿಗಳ ಸಾಲು ಮದುವೆಯಾದುದನ್ನು ಒಂದು ಬ್ರಿಟಿಶ ಪತ್ರಿಕೆ ವರದಿ ಮಾಡಿದೆ. ಇಂಥ ಮದುವೆಗಳು ಇನ್ನೂ ಅನೇಕ ಚೀನೀ ನಗರಗಳಲ್ಲಿ ವರ್ಷದಲ್ಲಿ ನಾಲ್ಕಾವೃತ್ತಿ ನಡೆಯುತ್ತಿವೆ. ಯುದ್ಧಕಾಲದಲ್ಲಿ ಹೆಚ್ಚು ಬಳಕೆಗೆ ಬಂದ ಈ ಪದ್ಧತಿಯನ್ನು ಸರಕಾರವೇ ಪ್ರಾರಂಭಿಸಿತು. ಅವುಗಳ ಪುರೋಹಿತರು ಆಯಾ ನಗರಸಭೆಗಳ ಅಧ್ಯಕ್ಷರು.

ಮೇಲೆ ಹೇಳಿದ ಪೀಹಿಂಗ್ ಮಹಾವಿವಾಹದಲ್ಲಿ ೪೯ ವರರೂ ನೀಲಿ ನಿಲುವಂಗಿಗಳನ್ನು ತೊಟ್ಟು ಚಿಕ್ಕ ಚಿಕ್ಕ ವಾಹನಗಳಲ್ಲಿ "ಕಲ್ಯಾಣ ಮಂಟಪ"ಕ್ಕೆ ಬಂದರು. ಅಷ್ಟೇ ವಧುಗಳೂ ಉತ್ತಮ ತಿಲಿಯೋಲೆಗಳನ್ನು ಧರಿಸಿ, ಕೆಂಪು ಹೂಗಳನ್ನು ಕುರುಳಲ್ಲಿ ತುರುಬಿ ಉಪಸ್ಥಿತರಾದರು. ವರರನ್ನು ಒಂದು ಕೋಣೆಯಲ್ಲಿ ವಧುಗಳನ್ನು ಒಂದು ಕೋಣೆಯಲ್ಲಿ ನಂಬರು ಹಾಕಿದ ಕುರ್ಚಿಗಳಲ್ಲಿ ಕುಳ್ಳಿರಿಸಿದ್ದರು. ವಧುಗಳಲ್ಲಿ ಪ್ರತಿಯೊಬ್ಬಳ ಆಸನದ ಮುಂದೆ ಒಂದೊಂದು ಪೆಟ್ಟಿಗೆಯಿತ್ತು. ಅದರಲ್ಲಿ ನಗರಸಭೆಯವರು ಮಾಡಿಸಿಟ್ಟ ವಿವಾಹ ಸಮವಸ್ತ್ರಗಳು—ಬಿಳಿ ಗೌನುಗಳು—ಇದ್ದವು.

ಎರಡೂ ಕೋಣೆಗಳಲ್ಲಿ ನಂಬರು, ಹೆಸರುಗಳನ್ನು ಕೂಗಿ "ಹಾಜರಿ" ತೆಗೆದುಕೊಳ್ಳುವದಾಯಿತು. ವಧುಗಳು ತಮ್ಮ ವಿವಾಹದ ಗೌನುಗಳನ್ನು ಅಲ್ಲೇ ಅವಸರದಲ್ಲಿ—ಇದ್ದ ಸ್ವಂತ ಗೌನುಗಳ ಮೇಲೆಯೆ—ಹಾಕಿಕೊಂಡರು.

ನಗರಾಧ್ಯಕ್ಷರು ಬಂದರು. ಮಂಗಲ ವಾದ್ಯಗಳು ಅಪಸ್ವರದಿಂದ ಮೊಳಗತೊಡಗಿದವು. ಒಂದು ಬದಿಯಿಂದ ವರರು ಇನ್ನೊಂದರಿಂದ ವಧುಗಳು ಸಾಲಾಗಿ ಬಂದು ಭವನದ ನಡುವೆ ತಂತಮ್ಮ ನಂಬರು ಹಾಕಿದ್ದ ಸ್ಥಳದ ಮೇಲೆ ಜತೆಜತೆಯಾಗಿ ನಿಂತರು. ಭಾಷಣಗಳಾದವು. ವಧೂವರರು ಒಬ್ಬರೊಬ್ಬರಿಗೆ ಮುಖ ಹಾಕಿ ನಿಂತು ಬಾಗಿದರು. ಮದುವೆಯ ಸರ್ಟಿಫಿಕೇಟುಗಳನ್ನು ಕೊಡಲಾಯಿತು.

ಕೊನೆಗೆ ಎಲ್ಲರೂ ಅರ್ಧಚಂದ್ರಾಕಾರದಲ್ಲಿ ನಿಂತರು. ಫೋಟೋ ತೆಗೆಯಲಾಯಿತು. ಮುಗಿಯಿತು ಮದುವೆ. ತಂತಮ್ಮ ವಧುಗಳ ಕೈಹಿಡಿದುಕೊಂಡು ವರರು ತಂತಮ್ಮ ಮನೆಗಳಿಗೆ ಸಾಗಿದರು.

ಹೃದ್ರೋಗಿಗಳಿಗೆ ಸೂಚನೆ

ಸ್ಯಾನ್‌ಫ್ರಾನ್ಸಿಸ್ಕೋದ ಡಾಕ್ಟರ ಕೂಪರರು ಹೃದಯವಿಕಾರದಿಂದ ಬಳಲುತಿದ್ದ ತಮ್ಮ ರೋಗಿಯೊಬ್ಬನಿಗೆ ಬರೆದ ಪತ್ರ ಹೃದ್ರೋಗಿಗಳೆಲ್ಲರಿಗೂ ಮಾರ್ಗದರ್ಶಕವಾಗಿದೆ. ಅವರ ಸೂಚನೆಗಳ ಸಾರ ಹೀಗಿದೆ:

೧. ಆಹಾರವನ್ನು ಮಿತಗೊಳಿಸಿ ಎತ್ತರಕ್ಕೆ ತಕ್ಕಂತೆ ನಿನ್ನ ತೂಕವನ್ನಿಳಿಸಿಕೋ. ಹೊಟ್ಟೆಯನ್ನು ಸರ್ವಥಾ ಭಾರ ಮಾಡಿಕೊಳ್ಳಬೇಡ.

೨. ದೈಹಿಕ ಚಟುವಟಿಕೆಗಳ ಪ್ರಮಾಣವನ್ನೂ ವೇಗವನ್ನೂ ಕಡಿಮೆ ಮಾಡು. ರೈಲು ಹತ್ತಲು ಓಡಬೇಡ, ಅಟ್ಟ ಏರುವಾಗ ಅವಸರ ಮಾಡಬೇಡ. ಶಕ್ತಿಮೀರಿ ಮಾಂಸಖಂಡಗಳನ್ನು ದುಡಿಸಬೇಡ. ಉಂಡೊಡನೆ ದುಡಿಯಬೇಡ, ದಣಿಗೆ ಬರುವಂಥ ಯಾವ ಕೆಲಸವನ್ನೂ ಮಾಡಬೇಡ. ಶ್ವಾಸೋಚ್ಛ್ವಾಸ ಯಾವಾಗಾದರೂ ಹೆಚ್ಚಾದರೆ ಒಡನೆ ವಿಶ್ರಾಂತಿ ಪಡೆ.

೩. ಮನಸ್ಸು ಉಲ್ಲಾಸದಲ್ಲಿರುವಾಗ ಮಾತ್ರ ಬೌದ್ಧಿಕ ಕೆಲಸ ಮಾಡು, ಬುದ್ಧಿ ಬಳಲಿದೊಡನೆ ಅದನ್ನು ಬಿಟ್ಟುಬಿಡು.

೪. ನಿನ್ನ ಭಾವನೆ ಉದ್ವೇಗಕ್ಕೊಳಗಾಗದಿರಲಿ. ಸಿಟ್ಟು ಬಂದೊಡನೆ ಒಬ್ಬ ರೋಗಿಯ ರಕ್ತದ ಒತ್ತಡ ೬೦ ಅಂಕ ಹೆಚ್ಚಿದ್ದನ್ನು ನೋಡಿರುವೆ. ಇದರಿಂದ ಹೃದಯಕ್ಕೆ ಎಂಥ ಧಕ್ಕೆಯಾಗಬಹುದೆಂದು ನೀನು ಊಹಿಸಿಕೋ. ಇಂಗ್ಲೆಂಡಿನ ಪ್ರಸಿದ್ಧ ಶಸ್ತ್ರ ಚಿಕಿತ್ಸಾಪಟು ಹಂಟರರು ತಮ್ಮ ಭಾವನೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲಾರದೆ ಹೋದುದರಿಂದ ಒಮ್ಮೆ ಸಿಟ್ಟೇರಿದಾಗ ಹೃದಯಸ್ತಂಭನವಾಗಿ ಸತ್ತರು.

೫. ಎಂಥ ಪ್ರಸಂಗದಲ್ಲೂ ಉಲ್ಲಾಸಿಯಾಗಿರು. ಚಿಂತೆಯ ಪ್ರಸಂಗ ಬಂದಾಗ ಅದನ್ನು ಮರೆಯಲು ನಿನ್ನ ಜೀವನದ ಆನಂದಪ್ರಸಂಗಗಳನ್ನು ನೆನೆದುಕೋ.

ತಂಬಾಕನ್ನು ಸೇದಬೇಡ.

ಸ್ವಾತಂತ್ರ್ಯದ ಒಂದನೆಯ ಹುಟ್ಟುಹಬ್ಬ

ಭಾರತಮಾತೆಯು
ಸ್ವತಂತ್ರಳಾಗಿ
    ಆಯಿತೊಂದು ವರುಷ!
    ಶತಶತಮಾನದ

ಕಷ್ಟವ ಭೋಗಿಸಿ
ಬಂದಿದೆ ಹೊಸ ದಿವಸ!
    ಕುಟಿಲ ಜೀವಿಗಳು
    ಮುಳ್ಳು ಬಿತ್ತಿದರು

ದೇಶದೇಶದಲ್ಲಿ!
ಜವಹರಲಾಲರ
    ಜಾಣತನದಿ ಸರಿ
    ಹೋಯಿತೆಲ್ಲ ತೀಲಿ!

ಹುಟ್ಟನು ಹಾಕುತ
ತೆರೆಯನು ನೂಕುತ
    ದೇಶದ-ಜನರೆಲ್ಲ!
    ಮೋಹನದಾಸನು

ಮಡಿದರು, ಬಾಳಲಿ
ಹಿಂದಡಿಯಿಡಲಿಲ್ಲ!
    ಭಾರತ ದೇಶದ
    ಬಾವುಟ ಹಿಡಿಯುತ

ಜೈ, ಜೈ, ಜೈ, ಎನುತ!
ನಾಡಿನ ಕೈಂಕ—
    ರ್ಯವ ಕೈಗೊಳ್ಳಲು
    ಕುಣಿಯುವ ನಾವೆಲ್ಲ!

—ಕುಮಾರ ಅಚ್ಯುತ, ಬಾಗಲಕೋಟೆ

ಅಮೇರಿಕೆಯ ಮತದಾರರು

ಅಮೇರಿಕೆಯೆಂಬದು ಅತ್ಯಂತ ಮುಂದುವರಿದ ದೇಶವೆಂಬ ಭಾವನೆ ಪ್ರಚಲಿತವಾಗಿದೆ. ಅಲ್ಲಿ "ಪ್ರಜಾತಂತ್ರ" ನಡೆಯುತಿದೆಯೆಂಬಲ್ಲಿ ಸಂಶಯ ನಮಗೂ ಇಲ್ಲ ನಿಮಗೂ ಇಲ್ಲ. ಮತದಾನದ ಮೂಲಕವೇ ಅಲ್ಲಿಯೂ ಪ್ರಜೆಗಳು "ತಮ್ಮನ್ನು ತಾವು ಆಳಿಕೊಳ್ಳುತ್ತಾರೆ." ಆದರೆ ಆ ಸುಶಿಕ್ಷಿತ ಮತದಾರರು ತಮ್ಮ ಪ್ರತಿನಿಧಿಗಳಿಂದ ಅಪೇಕ್ಷಿಸುವ ಸಂಗತಿಗಳಿಗೂ ನಮ್ಮ ಅಜ್ಞಾನಿ ರೈತರು ಮಂತ್ರಿಗಳಿಂದ ನಿರೀಕ್ಷಿಸುವ ಸಂಗತಿಗಳಿಗೂ ಬಹಳ ಅಂತರವಿಲ್ಲ. ಅರ್ಥಾತ್ ಅಲ್ಲಿಯ ಮತದಾರರು "ಸುಶಿಕ್ಷಿತ ಅಜ್ಞಾನಿ" ಗಳು. ಅಮೇರಿಕೆಯ ಮತದಾರರು ತಮ್ಮ ಪ್ರತಿನಿಧಿಗಳಿಗೆ (ನಮ್ಮ ಎಂ. ಎಲ್. ಎ. ಗಳಂಥವರಿಗೆ) ಬರೆದ ಪತ್ರಗಳ ಮಾದರಿಗಳಿವು:

ಪ್ರತಿನಿಧಿ ಆಲ್ಬರ್ಟ ರೇನ್ಸರಿಗೆ,

ನನ್ನ ಸೋದರಮಾವನ ಮೇಲೆ ಪುರುಷಕಾಯದೆಯಂತೆ ಆರೋಪವಿಡಲಾಗಿದೆ. ಅವನನ್ನುಳಿಸಲು ನೀವೇನಾದರೂ ಮಾಡುವಿರಾ? ನಿಜವಾಗಿ ಅವನೊಡನೆ ಪ್ರಯಾಣ ಮಾಡುತಿದ್ದವಳು ಹೆಂಗಸಲ್ಲದೆ ಗಂಡಸಲ್ಲ.

ನಿಮ್ಮ—

ಪ್ರತಿನಿಧಿ ಬಾಟ್ಲ್‌ರ್ಟ್ರರಿಗೆ,

ನಾನು ನಿಮಗೆ ಮೂರು ಸಲ ಮತಕೊಟ್ಟಿದ್ದೇನೆ. ನೀವು ನಿಜವಾಗಿ ಪ್ರಚಂಡರೆಂದು ನನ್ನ ಅಭಿಪ್ರಾಯ. ದಯಮಾಡಿ ನನಗೆ ೬೦೦ ಡಾಲರು ಕಳಿಸಿರಿ. ನನ್ನ ಕಾರಿಗೆ ಹೊಸದಾಗಿ ಬಣ್ಣ ಹಾಕಿಸಲು ಬೇಕಾಗಿದೆ.

ಇತಿ—

ಪ್ರತಿನಿಧಿ ಬ್ಯಾಟಲ್ಲರಿಗೆ,

ಒಬ್ಬನಿಗೆ ಮಾತ್ರ ಮತ ಕೊಡುವ ಅಧಿಕಾರ ನನಗಿರುವದೆಂದು ಗೊತ್ತಿದೆ. ಆದರೆ ನಾನು ಎಷ್ಟು ಜನರ ವಿರುದ್ಧ ಮತಕೊಡಬಹುದು?

ಇತಿ—

ವಸತಿ ಸೌಕರ್ಯ ಸಮಿತಿಗೆ,

ನಮ್ಮ ಮನೆಯ ವಿಷಯದಲ್ಲಿ ಏನಾದರೂ ಮಾಡಿರಿ— ಅದು ಸೋರುತಿದೆ. ನಿನ್ನೆ ರಾತ್ರಿ ಗಾಳಿ ಮಳೆ ಬೀಸುತಿದ್ದಾಗ ನಾನು ಊಟ ಮಾಡುತಿದ್ದೆ. ಛಾವಣಿ ಸೋರುತಿದ್ದುದರಿಂದ ನಾನು ಸಾರನ್ನು ಮೂರು ಮೂರು ಸಲ ಕುಡಿದರೂ ಅದು ತೀರಲೇ ಇಲ್ಲ!

ಇತಿ—

ಪ್ರತಿನಿಧಿ ಲೆಸ್ಲಿ ಅರೆಂಡ್ಸರಿಗೆ,

ನಿಮ್ಮ ಪತ್ರಗಳು ಪುಕ್ಕಟೆಯಾಗಿ ಟಪಾಲಿನಲ್ಲಿ ಹೋಗುತ್ತವೆಯೆಂದು ಕೇಳಿದ್ದೇನೆ. ನಾನು ನನ್ನ ಕ್ರಿಸ್ಮಸ್ ಕಾರ್ಡುಗಳನ್ನೆಲ್ಲ ನಿಮಗೆ ಕಳಿಸುವೆ. ದಯವಿಟ್ಟು ಅವನ್ನು ಟಪಾಲಿಗೆ ಹಾಕಿಸುವಿರಾ?

ಇತಿ—

ಜನಮತ

ಕೇರಳೀಯರ ಆಕ್ರಮಣ ಧೋರಣೆ

ಕೇರಳ ಪ್ರಾಂತಿಕ ಕಾಂಗ್ರೆಸ್ ಸಮಿತಿ ಮತ್ತು ಐಕ್ಯ ಕೇರಳ ಸಮಿತಿಯವರು ಸಪ್ಟಂಬರ ದಿನಾಂಕ ೧ ರಲ್ಲಿ ಭಾಷಾವಾರು ಪ್ರಾಂತ ಸಮಿತಿ (Linguistic Provinces Commission) ಯ ಪ್ರಶ್ನಮಾಲಿಕೆಗೆ ಕೊಟ್ಟ ಉತ್ತರಗಳನ್ನು ಓದಿದ ಕನ್ನಡಿಗರಿಗೆ ನೋವಾಗದಿರಲಾರದು. ಕೇರಳಕ್ಕೆ ತಿರುವಾಂಕೂರು, ಕೊಚ್ಚಿ, ಮಲಬಾರು ಮೊದಲಾದ ಮಲಯಾಳೀ ಪ್ರದೇಶಗಳು ಮಾತ್ರವಲ್ಲದೆ ಸಂಪೂರ್ಣ ಕನ್ನಡ ಪ್ರದೇಶವಾದ ದಕ್ಷಿಣ ಕನ್ನಡ, ಕೊಡಗುಗಳು ಸೇರಬೇಕೆಂದು ಅವರು ಪ್ರತಿಪಾದಿಸಿದ್ದಾರೆ. ದಕ್ಷಿಣ ಕನ್ನಡದ ಕಾಸರಗೋಡು ತಾಲೂಕು ಮಲೆಯಾಳ ಭಾಷೆಯನ್ನಾಡುವವರಿಂದ ತುಂಬಿದೆ ಎಂಬದು ಅವರ ವಾದ. ಉಳಿದ ತಾಲೂಕುಗಳಾದ ಮಂಗಳೂರು, ಪುತ್ತೂರು, ಕಾರ್ಕಳ, ಉಡುಪಿ, ಕುಂದಾಪುರ, ಇವುಗಳಲ್ಲಿ ತುಳು ಭಾಷೆ ಪ್ರಚಾರದಲ್ಲಿದೆಯೆಂದೂ ತುಳು ಭಾಷೆಯು ಮಲೆಯಾಳಿ ಭಾಷೆಗೆ ಹೊಂದಿಕೊಂಡ ಭಾಷೆ (dialect of Malayalam) ಯೆಂದೂ ಪ್ರತಿಪಾದಿಸಿದ್ದಾರೆ. ಅದ್ದರಿಂದ ಇವು ಕೇರಳಕ್ಕೆ ಸೇರಬೇಕಂತೆ! ಕೊಡಗಿನ ಭಾಷೆಯೂ ಮಲೆಯಾಳಕ್ಕೆ ಹೊಂದಿಕೆಯಾದ ಭಾಷೆಯಂತೆ. ಅದಲ್ಲದೆ ಈ ಪ್ರದೇಶಗಳ ರೀತಿ ನೀತಿ, ವೇಷ ಭೂಷಣ ಮಲೆಯಾಳಿಗಳ ಅನುಕರಣವೆಂದೂ ಹೇಳಲಾಗಿದೆ.

ಮೇಲಿನ ಪ್ರತಿಪಾದನೆಗಳು ಎಷ್ಟು ಹಾಸ್ಯಾಸ್ಪದವೆಂಬುದು ಯಾರಿಗಾದರೂ ಗೊತ್ತಾಗದಿರದು. ಕಾಸರಗೋಡು ತಾಲೂಕಿನಲ್ಲಿ ಮಲೆಯಾಳಿ ಮಾತನಾಡುವವರು ಇರಬಹುದು. ಅಂತೆಯೇ ಕನ್ನಡಿಗರೂ ಇದ್ದಾರೆ. ಇಲ್ಲಿನ ಕನ್ನಡ ಮತ್ತು ಮಲೆಯಾಳಿ ಭಾಷೆ ಮಾತನಾಡುವವರ ವ್ಯಾವಹಾರಿಕ ಭಾಷೆ ಕನ್ನಡವೆಂಬುದನ್ನು ಕೇರಳದ ಕಾಂಗ್ರೆಸ್ಸಿಗರು ಮರೆತಂತಿದೆ. ಅಲ್ಲದೆ, ಕಾಸರಗೋಡಿನವರು ದಕ್ಷಿಣ ಕನ್ನಡ ಜಿಲ್ಲೆಯಿಂದ ಹೊರಗಾಗಲು ಸಿದ್ಧರಿಲ್ಲ. ಈ ಸಂಬಂಧದಲ್ಲಿ ಜನಾಬ್ ಶಮ್ನಾಡ ಸಾಹೇಬರು ಹೇಳಿಕೆ ಕೊಟ್ಟು ಕಾಸರಗೋಡು ಪ್ರತ್ಯೇಕವಾಗಲಾರದೆಂದು ಸಾರಿದ್ದನ್ನು ಕೇರಳ ಕಾಂಗ್ರೆಸ್ಸಿಗರು ಮನಗಾಣಲಿ. ಮಂಗಳೂರು, ಉಡುಪಿ, ಕಾರ್ಕಳ, ಪುತ್ತೂರು ತಾಲೂಕುಗಳಲ್ಲಿ ತುಳು ಭಾಷೆ ಪ್ರಚಾರದಲ್ಲಿದ್ದರೂ, ಅದು ಗ್ರಾಂಥಿಕ ಭಾಷೆಯಲ್ಲ. ಅಲ್ಲದೆ ಅದಕ್ಕೆ ಲಿಪಿ ಇಲ್ಲ. ಅದೊಂದು ಆಡು ಭಾಷೆ. ವ್ಯವಹಾರದಲ್ಲಿರುವುದು ಕನ್ನಡ ಮಾತ್ರ. ಈ ಪ್ರದೇಶದ ಒಬ್ಬನೆ ಒಬ್ಬ ವ್ಯಕ್ತಿ ಮಲೆಯಾಳಿಯಲ್ಲಿ ವ್ಯವಹರಿಸುವದ ಸಿಗಲಾರ. ತುಳುಭಾಷೆಗೂ ಮಲೆಯಾಳಿಗೂ ಏನೇನೂ ಸಂಬಂಧವಿಲ್ಲ. ಅದು ಮಲೆಯಾಳಿಯ ಉಪಭಾಷೆಯೆಂಬ ಮಾತನ್ನು ಧೈರ್ಯವಾಗಿ ಅಲ್ಲಗಳೆಯಬಹುದು. ಇನ್ನು ಕುಂದಾಪುರದಲ್ಲಿ ತುಳು ಭಾಷೆ ಪ್ರಚಾರದಲ್ಲಿದೆ ಎಂಬುದು ಸರಿಯಲ್ಲ. ಕುಂದಾಪುರದವರಿಗೆ ತುಳು ಭಾಷೆಯ ಅರಿವೇ ಇಲ್ಲ. ಅವರ ಮನೆ ಮಾತೂ ಕನ್ನಡ, ವ್ಯವಹಾರದ ಮಾತೂ ಕನ್ನಡ. ಕೊಡಗು ಜಿಲ್ಲೆಯಲ್ಲಿ ಕೊಡಗು ಭಾಷೆ ಪ್ರಚಾರದಲ್ಲಿದ್ದರೂ ಅದು ವ್ಯವಹಾರದಲ್ಲಿಲ್ಲ. ಕನ್ನಡವೇ ಅಲ್ಲಿನ ವ್ಯವಹಾರದ ಭಾಷೆ. ಕೊಡಗು ಭಾಷೆಯನ್ನು ಬರಿ ಮನೆಮಾತಾಗಿ ಮಾತ್ರ ಆಡುತ್ತಿದ್ದಾರೆ.

ಇನ್ನು ಸಂಸ್ಕೃತಿ ವಿಚಾರ. ಕೇರಳೀಯರ ಸಂಸ್ಕೃತಿಯೇ ಬೇರೆ. ಕನ್ನಡಿಗರ ಸಂಸ್ಕೃತಿಯೇ ಬೇರೆ. ದಕ್ಷಿಣ ಕನ್ನಡಿಗರ ಮತ್ತು ಮಲೆಯಾಳಿಗಳ ರೀತಿನೀತಿ, ವೇಷ ಭೂಷಣಗಳಲ್ಲಿ ಯಾವ ಹೊಂದಿಕೆಯೂ ಇಲ್ಲ.

ಮೇಲಿನ ಎಲ್ಲಾ ಕಾರಣಗಳಿಂದ ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳು ಕೇರಳಕ್ಕೆ ಸೇರಲು ಸಾಧ್ಯವಿಲ್ಲ. ಕರ್ನಾಟಕ ಪ್ರಾಂತದ ಬಹು ದೊಡ್ಡ ಭಾಗವನ್ನು ಸ್ವಾಹಾ ಮಾಡಲು ಹಂಚಿಕೆ ಹಾಕುತ್ತಿರುವ ಕೇರಳ ಕಾಂಗ್ರೆಸ್ಸಿಗರ ಮನೋವೃತ್ತಿ ಖಂಡನಾರ್ಹವಾಗಿದೆ. ಈ ಅತಿಕ್ರಮಣ ಧೋರಣೆಯನ್ನು ಪ್ರತಿಭಟಿಸಲೇಬೇಕು. ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಮುಖಂಡರೂ, ಕರ್ನಾಟಕ ಏಕೀಕರಣ ಸಮಿತಿಯವರೂ ಕೇರಳದ ಮುಂದಾಳುಗಳ ಈ ಧೋರಣೆಗೆ ತೀವ್ರ ನಿಷೇಧ ಸೂಚಿಸಬೇಕಾಗಿ ವಿನಂತಿಸುತ್ತೇವೆ

ಕೋಟಿ, ಗಣೇಶ ಸುಬ್ಬಪ್ಪಯ್ಯ

ಆಹಾರದ ಪುನರ್ನಿಯಂತ್ರಣ

ಹಣದ ಅತಿಪ್ರಸರಣವು ಮಿತಿಮೀರಿ ಬೆಳೆದದ್ದರಿಂದ ಮತ್ತು ಆಹಾರಧಾನ್ಯಗಳ ಬೆಲೆ ಇಳಿಯದ್ದರಿಂದ ಆಹಾರ ನಿಯಂತ್ರಣ ಪದ್ಧತಿಯನ್ನು ಮತ್ತೆ ಜಾರಿಯಲ್ಲಿ ತರಲು ಸರಕಾರವು ನಿರ್ಧರಿಸಿರುವದಾಗಿ ಭಾರತದ ಆಹಾರ ಮಂತ್ರಿ ಜಯರಾಮದಾಸ ದೌಲತರಾಮರು ತಾ. ೨೪ ರಂದು ಪತ್ರಿಕಾ ಪರಿಷತ್ತಿನಲ್ಲಿ ಸಾರಿದರು. ಆಹಾರ ಧಾನ್ಯಗಳ ದರವನ್ನೂ ಎತ್ತುವಳಿಯನ್ನೂ ವಿತರಣವನ್ನೂ ಕ್ರಮಶಃ ನಿಯಂತ್ರಿಸಿ ೧೯೪೮ರ ಅಕ್ಟೋಬರದ ಹೊತ್ತಿಗೆ ೧೯೪೭ ನವೆಂಬರದಲ್ಲಿದ್ದ ಸ್ಥಿತಿಗೆ ತರಲಾಗುವದು.

ಅತಿಪ್ರಸರಣವನ್ನು ತಡೆಗಟ್ಟಲು ಬಟ್ಟೆಯ ನಿಯಂತ್ರಣವು ಮೊದಲ ಹೆಜ್ಜೆಯಾಗಿದ್ದು ಆಹಾರ ನಿಯಂತ್ರಣವು ಈ ದಿಶೆಯಲ್ಲಿ ಎರಡನೆಯ ಹೆಜ್ಜೆಯಾಗಿದೆ. ಅತಿಪ್ರಸರಣದ ಗಂಡಾಂತರವನ್ನು ನಿವಾರಿಸಲು ಇನ್ನೂ ಕೆಲವು ಜೀವನಾವಶ್ಯಕ ಪದಾರ್ಥಗಳ ಮೇಲೆ ನಿಯಂತ್ರಣ ಹೇರಬಹುದು.

ದಿಲ್ಲಿಯಲ್ಲಿ ಆಹಾರ ಸಮಸ್ಯೆಯನ್ನು ಪರಿಶೀಲಿಸಲು ಎಲ್ಲ ಪ್ರಾಂತಗಳ ಮತ್ತು ಸಂಸ್ಥಾನಗಳ ಮುಖ್ಯಮಂತ್ರಿಗಳು ಸಭೆ ಸೇರಿದ್ದರು. ಎಲ್ಲರೂ ಆಹಾರಧಾನ್ಯಗಳ ಪುನರ್ನಿಯಂತ್ರಣವನ್ನು ಸ್ವಾಗತಿಸಿದ್ದಾರೆ. ಮುಖ್ಯವಾಗಿ ಅಕ್ಕಿ, ಜೋಳ, ಗೋದಿ, ಸಜ್ಜೆ, ಗೋವಿನಜೋಳ, ಬಾರ್ಲಿ, ಕಡಲೆ, ರಾಗಿ ಇವನ್ನು ನಿಯಂತ್ರಿಸಲಾಗುವದು.

ನಿಯಂತ್ರಣದ ರೂಪರೇಷೆ

(೧) ದೇಶದಲ್ಲಿಯ ಕೊರತೆಯ, ಉಳಿಕೆಯ, ಸ್ವಾವಲಂಬಿ ಪ್ರದೇಶಗಳನ್ನು ಪ್ರತ್ಯೇಕಿಸಿ ಸರಕಾರವೇ ಧಾನ್ಯಗಳ ಸಾಗಾಟವನ್ನು ಕೈಕೊಳ್ಳುವದು.

(೨) ಉಳಿಕೆಯ ಪ್ರದೇಶದಲ್ಲಿ ಸರಕಾರವು ನೇಮಿಸಿದ ಸಂಸ್ಥೆಯೇ ಕೇಂದ್ರ ಸರಕಾರವು ನಿರ್ಧರಿಸಿದ ಬೆಲೆಗೆ ರೈತರಿಂದ ಹೆಚ್ಚಿನ ಧಾನ್ಯ ಕೊಳ್ಳುವದು.

(೩) ಆಹಾರದ ಸಂಗ್ರಹ ಒಟ್ಟು ಎಷ್ಟಿದೆ ತಿಳಿಯಲು ಧಾನ್ಯ ಕೊಳ್ಳಲು ಮಾರಲು ಸಂಗ್ರಹಿಸಲು ಲಾಯಸೆನ್ಸ ಪಡೆದುಕೊಳ್ಳುವ ಮತ್ತು ಕಾಲಕಾಲಕ್ಕೆ ವರದಿ ಒಪ್ಪಿಸುವ ವ್ಯವಸ್ಥೆಯಿದೆ.

(೪) ಕೂಡಿಟ್ಟುಕೊಳ್ಳುವದನ್ನು ತಪ್ಪಿಸಿ ಜನರಲ್ಲಿ ವಿಶ್ವಾಸ ಉಂಟಾಗಲು ಸೀದಾ ಪದ್ಧತಿ ಪ್ರಾರಂಭವಾಗುವದು.

ದರಗಳ ಏರಾಟವನ್ನು ತಡೆಯಲು ಉತ್ಪಾದನೆಯನ್ನು ಹೆಚ್ಚಿಸುವದೇ ಶ್ರೇಷ್ಠ ಉಪಾಯವಾದ್ದರಿಂದ ಆಹಾರೋತ್ಪಾದನೆಗೇ ಹೆಚ್ಚು ಲಕ್ಷ್ಯ ಪೂರೈಸಲಾಗುವದು. ಮತ್ತು ಆಹಾರದ ಎತ್ತುವಳಿಯನ್ನು ರಭಸದಿಂದ ಸಾಗಿಸಲಾಗುವದು. ದರಗಳು ಸುಗ್ಗಿಯಿಂದ ಸುಗ್ಗಿಯವರೆಗೆ ಬದಲಾಗತಕ್ಕದ್ದಲ್ಲವೆಂದೂ ನಿರ್ಧರಿಸಲಾಗಿದೆ. ರೈತನಿಗೂ ಜನಸಾಮಾನ್ಯರಿಗೂ ಸಮಾಧಾನವಾಗುವಂತೆಯೇ ಎತ್ತುವಳಿಯ ದರಗಳನ್ನು ತಗ್ಗಿಸಲಾಗುವದು. ಆಹಾರ ನಿಯಂತ್ರಣವನ್ನು ಜಾರಿಗೆ ತರಲು ಪ್ರಾಂತಿಕ ಸರಕಾರಗಳು ಧಾನ್ಯ ಬೆಳೆವ ರೈತನಿಗೆ ಬಟ್ಟೆ, ಕಲ್ಲೆಣ್ಣೆ, ಉಕ್ಕು, ಕಬ್ಬಿಣ, ಸಿಮೆಂಟ ಮುಂತಾದ ಪದಾರ್ಥಗಳನ್ನು ಕೊಡುವಂತೆ ಏರ್ಪಡಿಸಲಾಗುವದು.

ಕೇಂದ್ರ ಸರಕಾರವು ಧಾನ್ಯದ ಎತ್ತುವಳಿಗೆ ಉತ್ತೇಜನ ಕೊಡಲು ಪ್ರಾಂತಿಕ ಸರಕಾರಗಳಿಗೆ ವಸೂಲ ಮಾಡಿದ ಒಂದು ಮಣ ಧಾನ್ಯಕ್ಕೆ ೮ ಆಣೆಗಳಂತೆ ಸಹಾಯ ಧನ ಕೊಡುವದು. ಅಲ್ಲದೆ ಪ್ರಾಂತಿಕ ಸರಕಾರಗಳು ನಿರ್ಯಾತ ಮಾಡಿದ ಧಾನ್ಯದ ಪ್ರತಿ ಮಣಕ್ಕೂ ಅಷ್ಟೇ ಸಹಾಯ ಧನ ಸಲ್ಲಿಸುವದು. ಹೀಗೆ ಕೊಟ್ಟ ಈ ಹಣವನ್ನು ಪ್ರಾಂತಿಕ ಸರಕಾರಗಳು ಹೆಚ್ಚಿಗೆ ಆಹಾರ ಬೆಳೆವ ಯೋಜನೆಗಳಿಗೇ ಬಳಸಬೇಕೆಂಬ ನಿರ್ಬಂಧ ಹಾಕಲಾಗಿದೆ. ಇದರಿಂದ ಕೇಂದ್ರಕ್ಕೆ ೫ ಕೋಟಿ ರೂ. ವೆಚ್ಚ ತಗಲುವದು.

ಆಹಾರಧಾನ್ಯ ಕೂಡಿಟ್ಟುಕೊಳ್ಳುವವರನ್ನೂ ಲಾಭಬಡುಕರನ್ನೂ ಅತಿ ಉಗ್ರವಾಗಿ ದಂಡಿಸಲಾಗುವದು. ಇದೇ ಅಕ್ಟೋಬರ ಮಧ್ಯದಿಂದ ಧಾನ್ಯದ ಎತ್ತುವಳಿ ಪ್ರಾರಂಭವಾಗುವದು. ಸಕ್ಕರೆಯನ್ನು ನಿಯಂತ್ರಿಸಬೇಕೋ ಬೇಡವೋ ಎಂಬುದು ನಿರ್ಧಾರವಾಗಿಲ್ಲ. ದ್ವಿದಳ ಧಾನ್ಯಗಳ ಪ್ರಕಾರಗಳು ಅಸಂಖ್ಯಾತವಿರುವದರಿಂದ ಅವನ್ನು ನಿಯಂತ್ರಿಸಬಾರದೆಂದು ಗೊತ್ತಾಗಿದೆ.

ಈಗ ಕೇವಲ ೩ ಕೋಟಿ ಜನರು ಮಾತ್ರ ಸೀದಾ ಪದ್ಧತಿಯ ಲಾಭ ಪಡೆದುಕೊಳ್ಳುತ್ತಿದ್ದಾರೆ. ಹೊಸ ನಿಯಂತ್ರಣ ಪದ್ಧತಿಯು ಸಂಪೂರ್ಣ ಜಾರಿಯಲ್ಲಿ ಬಂದರೆ ೭ ಕೋಟಿ ಜನರು ದರ ಲಾಭ ಪಡೆಯುವರು. ಆಗ ಪ್ರತಿಯೊಬ್ಬನಿಗೂ ೩೦ ತೊಲಿ ಸೀದಾ ಕೊಡಲಾಗುವದು.

ಮುಂಬಯಿ ಶಾಸನ ಸಭೆ

ಹೊಲ ಸಾಗುವಳಿ ಕಾಯದೆ ತಿದ್ದುಪಡಿ ಮಸೂದೆ

ಕಂದಾಯ ಮಂತ್ರಿಗಳಾದ ಶ್ರೀ ಮುರಾರಜಿ ದೇಸಾಯಿಯವರು ತಾ. ೧೧ ರಂದು ಮುಂಬಯಿ ಶಾಸನ ಸಭೆಯಲ್ಲಿ ಹೊಲ ಸಾಗುವಳಿ ಕಾಯದೆ ತಿದ್ದುಪಡಿಯ ಮಸೂದೆಯನ್ನು ಮಂಡಿಸಿದರು. ಅವರು ಈ ಮಸೂದೆಯನ್ನು ಸಮರ್ಥಿಸುತ್ತ ಇದನ್ನು ಬಳಕೆಯಲ್ಲಿ ತಂದರೆ ೫ ವರ್ಷಗಳಲ್ಲಿ ಭೂಸುಧಾರಣೆಯ ಸಮಸ್ಯೆಯು ಬಗೆಹರಿಯುವದೆಂದು ಹೇಳಿದರು. ಈ ಮಸೂದೆಯ ಪ್ರಕಾರ ಸಂರಕ್ಷಿತ ರೈತನಿಗೆ ಒಡೆಯನ ಕಡೆಯಿಂದ ತಾನು ಸಾಗು ಮಾಡುತ್ತಿದ್ದ ಭೂಮಿಯನ್ನು ಕೊಳ್ಳಲು ಬರುತ್ತದೆ. ಆದರೆ ಯೋಗ್ಯ ಬೆಲೆ ಕೊಡದೆ ಹೊಲದೊಡೆಯರ ಅಧಿಕಾರವನ್ನು ನಿರ್ಮೂಲ ಮಾಡಿ ಭೂಸುಧಾರಣೆ ಮಾಡುವ ಇಚ್ಛೆ ಸರಕಾರಕ್ಕಿಲ್ಲವೆಂದೂ ಮಂತ್ರಿಗಳು ಸ್ಪಷ್ಟೀಕರಿಸಿದರು.

೫೦ ಎಕರೆ ಸ್ಪಷ್ಟೀಕರಣ

೫೦ ಎಕರೆಗಿಂತ ಹೆಚ್ಚು ದೊಡ್ಡ ಕ್ಷೇತ್ರ ಯಾರ ಒಡೆತನದಲ್ಲಿಯೂ ಉಳಿಯಲಾರದೆಂದು ಈ ಮಸೂದೆಯಿಂದ ತಪ್ಪು ತಿಳುವಳಿಕೆಯುಂಟಾಗಿದೆ. ಈ ೫೦ ಎಕರೆ ನಿರ್ಬಂಧವು ಕೇವಲ ಎರಡು ಸಂದರ್ಭಗಳಿಗೆ ಅನ್ವಯಿಸುವದು. ಸ್ವಂತ ಸಾಗುವಳಿ ಮಾಡುವದಾದರೆ ಒಡೆಯನಿಗೆ ರೈತನನ್ನು ಬಿಡಿಸುವ ಹಕ್ಕು ಇದೆ. ಆದರೆ ಈ ಮೊದಲೇ ೫೦ ಎಕರೆ ಭೂಮಿಯನ್ನು ಒಡೆಯನು ಸಾಗುಮಾಡುತ್ತಿದ್ದರೆ ಅವನಿಗೆ ಈ ಹಕ್ಕು ಉಂಟಾಗಲಾರದು. ೫೦ ಎಕರೆಗಿಂತ ಹೆಚ್ಚಿನ ಭೂಮಿಯನ್ನು ತಾನೇ ಸಾಗುಮಾಡಿಕೊಳ್ಳುತ್ತಿದ್ದ ಒಡೆಯನ ಕಡೆಯಿಂದ ಹೆಚ್ಚಿನ ಭೂಮಿಯನ್ನೆಲ್ಲ ಕಸಿದುಕೊಳ್ಳಲಾಗುವದೆಂದು ತಿಳಿಯಲಾಗದು. ಇನ್ನು ಸಂರಕ್ಷಿತ ರೈತನಿಗೆ ೫೦ ಎಕರೆಗಿಂತ ಹೆಚ್ಚಿಗೆ ಭೂಮಿಯನ್ನು ಕೊಳ್ಳಲು ಬರಬಾರದೆಂದು ಮಸೂದೆಯಲ್ಲಿ ವ್ಯವಸ್ಥೆ ಇದೆ. ಆದ್ದರಿಂದ ಈ ಮಸೂದೆಯಲ್ಲಿ ಹೇಳಲಾದ ೫೦ ಎಕರೆ ನಿರ್ಬಂಧದಿಂದ ಒಬ್ಬನಿಗೆ ೫೦ ಎಕರೆಗಿಂತ ಹೆಚ್ಚು ಕ್ಷೇತ್ರ ಉಳಿಯಲಾರದೆಂದು ತಿಳಿಯಕೂಡದು.

ಮಸೂದೆಯಲ್ಲಿ ಒಕ್ಕಲತನದ ಸುಧಾರಣೆಯ ಕಲಮುಗಳಿವೆ. ಕೆಲವರ್ಷಗಳಿಂದ ಪಡ ಬಿದ್ದ ಭೂಮಿಗಳನ್ನು ಸರಕಾರವು ವಶಪಡಿಸಿಕೊಳ್ಳಬಲ್ಲದು. ದೇಶದ ಆಹಾರದ ಪರಿಸ್ಥಿತಿಯು ಸರಿಯಾಗಿಲ್ಲದ ಈ ಸಮಯದಲ್ಲಿ ಸಾಗಾಗಬಲ್ಲ ಯಾವ ಭೂಮಿಯೂ ಪಡ ಬೀಳಬಾರದು.

ರೈತನಿಗೆ ಅಥವಾ ಒಕ್ಕಲತನವನ್ನೇ ವ್ಯವಸಾಯವಾಗಿಟ್ಟುಕೊಂಡು ಆ ಬಗ್ಗೆ ಯೋಗ್ಯ ಪ್ರಮಾಣಪತ್ರ ಪಡೆದವನನ್ನು ಹೊರತು ಪಡಿಸಿ ಇತರರಿಗೂ ಹೊಲವನ್ನು ಮಾರಬಾರದೆಂದು ಮಸೂದೆಯಲ್ಲಿ ಹೇಳಲಾಗಿದೆ.

ಈ ವಿಷಯದಲ್ಲಿ ಅನೇಕ ತಿದ್ದುಪಡಿಗಳೂ ಮುಂದೆ ಬಂದವು. ಆದರೆ ತಾ. [illegible] ರಂದು ಚರ್ಚೆ ನಡೆದು, ಸಂರಕ್ಷಿತ ಸಾಗುವಳಿದಾರನಿಗೆ ತನ್ನ ಹೊಲದೊಡೆಯನ ೫೦ ಎಕರೆ ವರೆಗೆ ಭೂಮಿ ಕೊಳ್ಳಲು ಹಕ್ಕು ಇರುವದೆಂಬ ಕಲಮು ಸ್ವೀಕೃತವಾಯಿತು. ಇದರಂತೆ ಅವಿಭಕ್ತ ಕುಟುಂಬದಲ್ಲಿ ಎಷ್ಟೇ ಶಾಖೆಗಳಿದ್ದರೂ ಅದರ ಒಡೆತನದಲ್ಲಿ ೨೦೦ ಎಕರೆ ವರೆಗೆ ಭೂಮಿ ಉಳಿಯತಕ್ಕದ್ದೆಂಬ ತಿದ್ದುಪಡಿಯೂ ಮಾನ್ಯ ಮಾಡಲ್ಪಟ್ಟಿತು.

ರೈತನು ತಾನು ಕೊಂಡ ಹೊಲವನ್ನು ಮಾರುವದಾದರೆ ಹೊಲದೊಡೆಯನು ಸಾಗುವಳಿದಾರನಿದ್ದಲ್ಲಿ ಅವನಿಗೇ ಅದನ್ನು ಕೊಳ್ಳಲು ಪ್ರಥಮ ಪ್ರಾಶಸ್ತ್ಯ ಸಿಗುವದೆಂದೂ ಸರಕಾರದ ಅಪ್ಪಣೆಯಿಲ್ಲದೆ ಹೊಲ ಮಾರತಕ್ಕದ್ದಲ್ಲೆಂದು ನಿರ್ಬಂಧ ಹಾಕಲಾಗುವದೆಂದೂ ಕಂದಾಯ ಮಂತ್ರಿಗಳು ತಿಳಿಸಿದರು.

ಅನಂತರ ಸರಕಾರವು ಗ್ಯಾಜೆಟಿನಲ್ಲಿ ಪ್ರಸಿದ್ಧಿಸಿದ ಯಾವದೇ ವಿಶಿಷ್ಟ ಭಾಗದಲ್ಲಿ ಮೇಲಿನ ೫೦ ಹಾಗು ೨೦೦ ಎಕರೆ ಮರ್ಯಾದೆಯನ್ನು ಕೆಳಗಿಳಿಸಬಲ್ಲನೆಂಬ ತಿದ್ದುಪಡಿಯೂ ಮಾನ್ಯ ಮಾಡಲ್ಪಟ್ಟಿತು. ಹೊಲವನ್ನು ವಶಪಡಿಸಿಕೊಂಡ ೧ ವರ್ಷದೊಳಗಾಗಿ ಒಡೆಯನು ಸ್ವತಃ ಅದರ ಸಾಗುವಳಿ ಮಾಡದಿದ್ದರೆ ಹೊಲವು ಪುನಃ ಸಾಗುವಳಿದಾರನಿಗೆ ಹೋಗುವದು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೩೦

ಅಂತರ್‌ರಾಷ್ಟ್ರೀಯ ಪರಿಸ್ಥಿತಿ ಗಂಡಾಂತರಮಯವಾಗಿರುವದರಿಂದಲೂ ಸರಕಾರದವರು ಲಾಭದಲ್ಲಿ ಪಾಲನ್ನು ಕೂಲಿಕಾರರಿಗೆ ಕೊಡಬೇಕೆಂಬ ಸೂಚನೆಯನ್ನು ಸ್ವೀಕರಿಸಬಹುದೆಂಬಿತ್ಯಾದಿ ಭಯಗಳಿಂದಲೂ ಪಾಲುಗಳು, ಮುಖ್ಯವಾಗಿ ಟಾಟಾ ಪಾಲುಗಳು ಇಳಿಮುಖವಾದವು. ಇಂದಿನ ದರಗಳು ಇಂತಿದ್ದವು.

ಜವಳಿ

ಅಹಮದಾಬಾದ ಅಡ್ವಾನ್ಸ	೨೭೭—೧೨—೦
ಬಾಂಬೆ ಡಾಯಿಂಗ್	೧೦೩೦—೦—೦
ಸೆಂಟ್ರಲ ಇಂಡಿಯಾ	[illegible]
ಗೋಕಾಕ	[illegible]
ಕೋಹಿನೂರ	[illegible]
ಫಿನಿಕ್ಸ	[illegible]
ಸಿಂಪ್ಲೆಕ್ಸ	[illegible]
ಸ್ವದೇಶಿ	[illegible]

ಇತರ

ಬೇಲಾಪುರ ಸಕ್ಕರೆ	[illegible]
ಬಾಂಬೆ ಬರ್ಮಾ	[illegible]
ಸಿಂಧ್ಯಾ ಸ್ಟೀಮ	[illegible]
ಟಾಟಾ ಸ್ಟೀಲ ಡೆಫರ್ಡ	[illegible]
ಎ.ಸಿ.ಸಿ. ಸಿಮೆಂಟ್ಸ	[illegible]
ಸೆಂಟ್ರಲ ಬ್ಯಾಂಕ	[illegible]
ಇಂಪೀರಿಯಲ ಬ್ಯಾಂಕ ಪೂರ್ಣ	[illegible]
ಇಂಡಿಯನ ಬ್ಯಾಂಕ	[illegible]
ರಿಝರ್ವ ,,	[illegible]

ಚಿನ್ನ—ಬೆಳ್ಳಿ

ಚಿನಿವಾರ ಪೇಟೆಯಲ್ಲಿ ಬೆಲೆಗಳು ಅಷ್ಟೇನೂ ಬದಲಾಗಿಲ್ಲ.

ತಯಾರ ಚಿನ್ನ	೧೧೩—೧೨—೦
ತಯಾರ ಬೆಳ್ಳಿ	[illegible]
ವಾಯದಾ	೧೭೦—೧೨—೦
ಸಾವರಿನ	೭೬—೪—೦

ಅರಳಿ

ಅರಳಿ ಬೆಲೆಗಳಲ್ಲೂ ವಿಶೇಷ ಹೆಚ್ಚುಕಡಿಮೆಯಿಲ್ಲ.

ಮಾರ್ಚ	೫೮೦—೦—೦
ಮೇ	೫೭೦—೦—೦
ಜುಲೈ	೫೭೫—೦—೦
ಸೆಪ್ಟೆಂಬರ	೫೭೬—೦—೦

ಎಣ್ಣೆಕಾಳು

ಶೇಂಗಾ	೧೬೭-೮-೦
ಅಗಸಿ	೨೬—೧೪-೦
,,, ಹೊಸ ಬೆಳೆ	೨೭—೦—೦
ಅಗಸಿ ಎಣ್ಣೆ	೧೬—೨—೦

ಸಾಂಗಲಿ

ಅರಸಿಣ ಹೊಸ (ಹೇರು)	೧೩೨
ಶೇಂಗಾ ಖಂಡಿ	೧೩೦
ಮೆಣಸಿನಕಾಯಿ ಹೊಸ ಹೇರು	೧೭೫
ಬೆಲ್ಲ ,,	೬೦

ಹುಬ್ಬಳ್ಳಿ

ತಾ. ೩೦

ಜ. ಹತ್ತಿ ನಗಳ್ಳೆ	೩೭೫-೪೧೦
,, ಅರಳಿ ,,	೨೬೦-೨೭೬
ಜೋಳ (ಚೀಲಕ್ಕೆ)	೩೮೩—೪೦೩
ಬಿಳಿ ಗೋದಿ ಚೀಲ	೮೦—೯೨
ಕೆಂಪು ,, ,,	೯೮—೧೧೦
ಸಣ್ಣಕ್ಕಿ ,,	೮೫-೯೩
ದೊಡ್ಡಕ್ಕಿ ,,	೬೯—೭೬
ಕುಸುಬಿ ,,	೩೦—೩೧
ಶೇಂಗಾ ಹೇರು	೩೮—೪೩
,, ಹೊಸ	೨೨-೨೮

ಕರ್ಮವೀರ

ಶ್ರೀಸರ್ವಧಾರಿ ಸಂವತ್ಸರ ವಿಕ್ರಮ ವರ್ಷ ೨೦೦೫
ಅಶ್ವಿನ ಶುದ್ಧ ೨ ಸೋಮವಾರ

ಗಾಂಧೀ ಜಯಂತಿ

ಮಹಾತ್ಮಾ ಗಾಂಧಿಯವರ ಜಯಂತಿ ಸಪ್ತಾಹವು ಇಡೀ ದೇಶದಲ್ಲಿ ಮತ್ತು ಭಾರತೀಯರಿರುವ ಕಡೆಗೆಲ್ಲ ಆಚರಿಸಲಾಯಿತು. ಗಾಂಧೀ ಜಯಂತಿಯನ್ನು ಹಲವಾರು ವರುಷಗಳಿಂದ ನಾವು ಆಚರಿಸುತ್ತ ಬಂದಿದ್ದರೂ ಈ ವರ್ಷದ ಅವರ ಜಯಂತಿಯ ಆಚರಣೆಯಲ್ಲಿ ಒಂದು ಮಹತ್ವವಿದೆ. ಇಷ್ಟು ವರುಷಗಳ ವರೆಗೆ ಗಾಂಧೀಜಿ ಸ್ವತಃ ನಮ್ಮ ಮಧ್ಯದಲ್ಲಿದ್ದುಕೊಂಡು ತಮ್ಮ ಜಯಂತಿಗೆ 'ಚರಕ ಜಯಂತಿ' ಎಂದು ಹೆಸರಿಟ್ಟು ವಿಧಾಯಕ ಕಾರ್ಯಕ್ರಮದ ಪ್ರಚಾರಕ್ಕಾಗಿ, ಪ್ರಸಾರಕ್ಕಾಗಿ ಪ್ರಯತ್ನಿಸುತ್ತಿದ್ದರು, ಆದರಿಂದು ಗಾಂಧೀಜಿ ನಮ್ಮನ್ನಗಲಿ ಹೋಗಿರುವರು. ಅವರು ಬಿಟ್ಟುಹೋದ ಆ ಉದಾತ್ತ ತತ್ವಗಳು ಮಾತ್ರ ನಮಗೆ ಮಾರ್ಗದರ್ಶನ ಮಾಡುತಿವೆ. ಪಂಡಿತ ಜವಾಹರಲಾಲರು ಗಾಂಧೀಜಿ ಜಯಂತಿ ನಿಮಿತ್ತ ಕೊಟ್ಟ ಸಂದೇಶದಲ್ಲಿ 'ಗಾಂಧೀಜಿಯ ಆ ಸೂರ್ಯಪ್ರಕಾಶವು ನಮ್ಮ ಮಧ್ಯದಲ್ಲಿ ಇಂದು ಇಲ್ಲ; ಬಹುಶಃ ಅದು ಇದ್ದೇ ಇದ್ದಿರಬೇಕು. ಆದರೆ ನಮ್ಮ ಕಣ್ಣು ಮಾತ್ರ ದೃಷ್ಟಿಹೀನವಾಗಿವೆ. ಔಪಚಾರಿಕವಾಗಿ ನಾವು ಗಾಂಧೀಜಿಯ ಜಯಂತಿಯನ್ನು ಆಚರಿಸಬಹುದು; ಆದರೆ ನಮ್ಮಲ್ಲಿ ಎಷ್ಟು ಜನರು ಆ ಬೆಳಕನ್ನು ಕಾಣಬಲ್ಲರು' ಎಂದು ಹೇಳಿದ ಮಾತು ಸ್ಪಷ್ಟವಿದೆ. ಆದರೂ ಗಾಂಧೀಜಿಯ ಆ ದಿವ್ಯ ತತ್ವಗಳ ಬೆಳಕಿನಲ್ಲಿಯೇ ನಾವು ಕಾರ್ಯ ಮಾಡಿ ಧ್ಯೇಯವನ್ನು ಸಾಧಿಸಬೇಕಾಗಿದೆ. ಅದಕ್ಕಾಗಿಯೇ ನಾವಿಂದು ವೀರಪ್ರತಿಜ್ಞೆ ಮಾಡಬೇಕಾಗಿದೆ.

ಮಹಾತ್ಮರ ದಿವ್ಯ ಮೂರ್ತಿಯು ನಮ್ಮ ಕಣ್ಮರೆಯಾಗಿದ್ದರೂ ಅವರ ಆದರ್ಶ ತತ್ವ, ಆದರ್ಶ ಜೀವನ, ಅವುಗಳ ಜೊತೆಯಲ್ಲಿಯೆ ಹೊಣೆ ಕರ್ತವ್ಯಗಳ ಅಂದು ಪಿತ್ರಾರ್ಜಿತ ಆಸ್ತಿಗಳಾಗಿ ನಮಗೆ ಬಂದಿವೆ. ಹಿಂದುಸ್ತಾನವನ್ನು ಪಾರತಂತ್ರ್ಯದಿಂದ ಮುಕ್ತ ಮಾಡುವುದಕ್ಕಾಗಿ ಅವರು ಪಟ್ಟ ಶ್ರಮಕ್ಕೆ ಯಶಸ್ಸು ಸಿಕ್ಕು ನಾವಿಂದು ಅದರ ಸಿಹಿ ಫಲಗಳನ್ನು ಅನುಭೋಗಿಸುತಿದ್ದೇವೆ. ಆದರೆ ಆ ಸ್ವಾತಂತ್ರ್ಯದ ಜೊತೆಗೆ ಮಹತ್ವದ ಹೊಣೆಯೂ ನಮ್ಮ ಮೇಲೆ ಬಿದ್ದಿದೆ. ಅವರು ಗಳಿಸಿಕೊಟ್ಟ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಮೊದಲನೆಯ ವರುಷದಲ್ಲಿ ನಡೆದ ಅನರ್ಥಪರಂಪರೆಗಳನ್ನು ನೆನೆದರೆ, ನಾವೆಲ್ಲಿ ಸ್ವಾತಂತ್ರ್ಯಕ್ಕೆ ಎರವಾಗುವೆವೋ ಎಂದು ಅನೇಕ ಅಳ್ಳೆದೆಯ ಜನರು ಭಯಭೀತರಾಗಿದ್ದರು. ಆದರೆ ಮಹಾತ್ಮಾ ಗಾಂಧೀಜಿಯ ತಪಃಪ್ರಭಾವದಿಂದ ಮತ್ತು ನಮ್ಮ ದೇಶಧುರೀಣರ ಕರ್ತವ್ಯದಕ್ಷತೆ ಮತ್ತು ಸಮಂಜಸ ಧೋರಣದಿಂದ ಆ ಕಾರ್ಮೋಡಗಳೆಲ್ಲ ಬಯಲಾಗಿ ಇಂದು ನಮ್ಮ ಸ್ವಾತಂತ್ರ್ಯಸೂರ್ಯನು ಪ್ರಕಾಶಿಸುತಿರುವನು. ಹೈದರಾಬಾದದ ಸಮಸ್ಯೆ ಕೆಲಮಟ್ಟಿಗೆ ನಮ್ಮ ತಲೆ ತಿನ್ನುತಿದ್ದಿತು. ಆದರಿಂದು ಅದೂ ಸರಾಗವಾಗಿ ಬಗೆಹರಿದಿದ್ದರಿಂದ ಎಲ್ಲೆಡೆಯಲ್ಲಿ ಸಂಪೂರ್ಣ ಶಾಂತಿ ಪ್ರಸ್ಥಾಪಿತವಾಗಿ ಸರ್ವಾಂಗೀಣ ಉನ್ನತಿಯತ್ತ ದೇಶವನ್ನು ಸಾಗಿಸಲು ಅವಕಾಶವುಂಟಾಗಿದೆ.

ಮಹಾತ್ಮರು ಇಡೀ ಜಗತ್ತಿಗೇ ಬೋಧಿಸಿದ ಅಹಿಂಸೆ, ಶಾಂತಿ, ಸ್ವಾರ್ಥತ್ಯಾಗ, ಐಕ್ಯ ಮೊದಲಾದ ತತ್ವಗಳನ್ನು ಆಚರಣೆಯಲ್ಲಿ ತಾರದ್ದರಿಂದಲೆ ಇಂದು ಜಗತ್ತಿನಲ್ಲಿ ಇಷ್ಟೊಂದು ಅನರ್ಥ ಪರಂಪರೆಗಳು ನಡೆದಿವೆ. ಗಾಂಧೀಜಿಯ ಶಾಂತಿ ಮಾರ್ಗವು ಪಥ್ಯವೆಂದು ಅನೇಕ ರಾಜಕಾರಣಿಗಳು ಬಾಯಿಂದ ಒಪ್ಪುತಿದ್ದರೂ ಕೃತಿಯಲ್ಲಿ ಅದನ್ನು ಇಳಿಸಲು ಸಿದ್ಧರಾಗದ್ದರಿಂದ ಸಣ್ಣ ಸಣ್ಣ ರಾಷ್ಟ್ರಗಳು ಪ್ರಬಲ ರಾಷ್ಟ್ರಗಳ ರಾಕ್ಷಸೀ ಮಹತ್ವಾಕಾಂಕ್ಷೆಗೆ ತುತ್ತಾಗಹತ್ತಿವೆ. ಮಹಾತ್ಮರು ತಮ್ಮ 'ಸ್ವಾತಂತ್ರ್ಯದ ಜನಕ' ಎಂದು ಗೌರವಿಸುತಿರುವ ಭಾರತೀಯರು ಆ 'ಜನಕ' ನ ನೀತಿ ತತ್ವಗಳನ್ನು ಆಚರಣೆಯಲ್ಲಿ ತಂದು ಇಡೀ ಜಗತ್ತಿಗೇ ಮಾರ್ಗದರ್ಶನ ಮಾಡಿ ಕೊಡಬೇಕಾದ ಸಮಯವಿಂದುಬಂದಿದೆ. ಮಹಾತ್ಮರ ಅಹಿಂಸಾ ಮಾರ್ಗದಿಂದ ಪದಚ್ಯುತರಾಗುವ ಪ್ರಸಂಗ ಅನೇಕ ಸಲ ಬರುವದುಂಟು. ಆಯಾ ಕಾಲದಲ್ಲಿ ಅತ್ಯಂತ ಧೈರ್ಯದಿಂದ ವರ್ತಿಸಿ ಶಾಂತಿ ಮಾರ್ಗದಿಂದಲೆ ಹೋಗುವದು ಅತ್ಯವಶ್ಯವಾಗಿದೆ. ಯಾರ ಮೇಲೆಯೂ ನಾವು ಏರಿ ಹೋಗದೆ, ನಮ್ಮ ಸ್ವಾತಂತ್ರ್ಯವನ್ನು ಅಪಹರಿಸಲು ಬಂದವರನ್ನು ಆದಷ್ಟು ಕಡಮೆ ಹಿಂಸಾಚಾರದಿಂದ ನಿಗ್ರಹಿಸುವದು ಕರ್ತವ್ಯವಾಗಿದೆ. ಭಾರತ ಸರಕಾರವು ಈ ಸಂದರ್ಭದಲ್ಲಿ ಎಷ್ಟೊಂದು ತಾಳ್ಮೆಯಿಂದ ವರ್ತಿಸುತಿದೆಯೆಂಬುದು ಹೈದರಾಬಾದ ಪ್ರಕರಣದಲ್ಲಿ ಸುಸ್ಪಷ್ಟವಾಗಿದೆ.

ಗಾಂಧೀಜಿ ಜಯಂತಿಯ ಈ ಪವಿತ್ರ ಪ್ರಸಂಗದಲ್ಲಿ ಭಾರತೀಯರು, ಅವರ ದಿವ್ಯ ತತ್ವಗಳ ಶ್ರವಣ, ಮನನ, ನಿದಿಧ್ಯಾಸ ಮಾಡಿ ಜಗತ್ತಿನ ಶಾಂತಿದೂತರಾಗುವ ಶ್ರೇಯಸ್ಸನ್ನು ಪಡೆಯಲಿ. ಆ ಬಗೆಯ ಸದ್ಬುದ್ಧಿಯನ್ನು ದೇವರು ಅವರಿಗೆ ಅನುಗ್ರಹಿಸಲಿ.

ಹೈದರಾಬಾದಿನಲ್ಲಿ ಹಿಂದೀ ಸೈನಿಕರಿಗೆ ಸ್ವಾಗತ.



ರಜಾಕಾರರಿಂದ ಬಹಳ ಪೀಡೆಗೊಳಗಾಗಿದ್ದ ನಾಲಗೊಂಡಾ ಜಿಲ್ಹೆಯ ಜನರು ಹಿಂದೀ ಸೈನಿಕರನ್ನು ಸ್ವಾಗತಿಸುತ್ತಿರುವರು.

ವಾರದ ಸಿಂಹಾವಲೋಕನ

ಮತ್ತೆ ನಿಯಂತ್ರಣ!

ತಜ್ಞರ ಸಲಹೆಯ ಮೇರೆಗೆ ಹಿಂದುಸ್ತಾನ ಸರಕಾರದವರು ಕ್ರಮಶಃ ಆಹಾರ ಪದಾರ್ಥಗಳ ಮೇಲೆ ನಿಯಂತ್ರಣ ಹಾಕಬೇಕೆಂದು ನಿರ್ಧರಿಸಿರುವರೆಂದು ಆಹಾರ ಮಂತ್ರಿಗಳಾದ ಶ್ರೀ ಜಯರಾಮದಾಸರು ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು. ಆಹಾರ ಪದಾರ್ಥಗಳ ನಿಯಂತ್ರಣ ಯೋಜನೆಯು ಯಶಸ್ವಿಯಾಗಲಿಲ್ಲೆಂದೇ ಮಹಾತ್ಮಾ ಗಾಂಧಿಯವರ ಸಲಹೆಯಂತೆ ಹಿಂದುಸ್ತಾನ ಸರಕಾರವು ವಿನಿಯಂತ್ರಣ ಧೋರಣವನ್ನು ಅನುಸರಿಸಿತು. ಆದರೆ ಆ ಪ್ರಯೋಗ ಪ್ರಾರಂಭವಾಗಿ ಇನ್ನೂ ವರುಷ ಕೂಡ ಆಗಿಲ್ಲ, ಇಷ್ಟರಲ್ಲಿಯೇ ಸರಕಾರದವರಿಗೆ ನಿಯಂತ್ರಣ ಧೋರಣವನ್ನನುಸರಿಸುವ ಪ್ರಸಂಗ ಬಂದುದು ದುರ್ದೈವದ ಸಂಗತಿಯು. ವಿನಿಯಂತ್ರಣ ಧೋರಣವನ್ನು ಸ್ವೀಕರಿಸಿದ್ದರೂ ಧಾನ್ಯ ಎತ್ತುವಳಿ ಯೋಜನೆಯನ್ನು ಎಂದಿನಂತೆ ಕೈಕೊಂಡು ಕಠಿನ ಪ್ರಸಂಗದಲ್ಲಿ ಆಯಾ ಪ್ರದೇಶಗಳಿಗೆ ಒದವಿಸುವ ಏರ್ಪಾಡು ಮಾಡಲು ಸರಕಾರ ಯೋಜಿಸಿದ್ದರೆ ಇಂದು ಧಾರಣಿ ಇಷ್ಟೊಂದು ನಾಗಾಲೋಟದಿಂದ ಏರುತಿರಲಿಲ್ಲೆಂಬುದು ನಿರ್ವಿವಾದ. ಆದರೆ ಸರಕಾರದವರು ಆ ಬಗೆಯ ಮುಂಧೋರಣೆ ವಹಿಸದ್ದರಿಂದ ಆಹಾರ ಪರಿಸ್ಥಿತಿ ಬಿಕ್ಕಟ್ಟಿಗೆ ಬಂದಿದೆ. ಆದರೆ ಈ ಪರಿಸ್ಥಿತಿ ಸುಧಾರಿಸಬೇಕಾದರೆ ಮತ್ತೆ ನಿಯಂತ್ರಣವನ್ನು ಹೇರುವುದೇನು ಯೋಗ್ಯ ಮದ್ದಲ್ಲ. ಅದರಿಂದ ಲಂಚಗುಳಿತನ, ಕಳ್ಳ ವ್ಯಾಪಾರ, ಜನತೆಯ ಬಾಯಲ್ಲಿ ಕೆಟ್ಟ ಕಾಳನ್ನು ತುಂಬುವದು ಮೊದಲಾದ ಅನರ್ಥಗಳು ಪ್ರಾರಂಭವಾಗುವವು. ಕಳೆದ ವರುಷ ವಿನಿಯಂತ್ರಣ ಧೋರಣವನ್ನು ಕೈಕೊಳ್ಳುವಾಗ ಆಹಾರ ಮಂತ್ರಿಗಳು, 'ಜನರು ಆಹಾರವಿಲ್ಲದೆ ಉಪವಾಸ ಸಾಯಹತ್ತಿದರೆ ಮಾತ್ರ ಮತ್ತೆ ನಿಯಂತ್ರಣ ಹೇರಲಾಗುವದು' ಎಂದು ಎಚ್ಚರಿಸಿದ್ದರು. ಆದರೀಗ ಅಂಥ ಕಠಿನ ಪರಿಸ್ಥಿತಿಯೇನೂ ಕಂಡು ಬರುವದಿಲ್ಲ. ಧಾರಣಿಗಳು ಸ್ವಲ್ಪ ಏರಿದ್ದರೂ ಪೇಟೆಯಲ್ಲಿ ಸಿಕ್ಕುವ ಒಳ್ಳೆ ಕಾಳುಗಳಿಂದ ಜನರು ಕೆಲಮಟ್ಟಿಗೆ ಸಂತುಷ್ಟರಿರುವರೆಂದೆ ಹೇಳಬಹುದು. ಅತಿಪ್ರಸರಣವನ್ನು ತಡೆಯುವದಕ್ಕಾಗಿ ನಿಯಂತ್ರಣ ಹೇರಲಾಗುವದೆಂದು ಹೇಳುವದರಲ್ಲಿ ಏನೂ ಅರ್ಥವಿಲ್ಲ. ನಿಯಂತ್ರಣ ಹೇರುವದರಿಂದ ಸರಕಾರದವರ ವೆಚ್ಚ ಮತ್ತೆ ಹೆಚ್ಚುಮತ್ತಷ್ಟು ನೋಟುಗಳನ್ನು ಹೊರಡಿಸುವ ಪ್ರಸಂಗ ಸರಕಾರಕ್ಕೆ ಬಂದು ಅತಿಪ್ರಸರಣಕ್ಕೇ ಅವಕಾಶ ದೊರೆಯುತ್ತದೆ. ಆದುದರಿಂದ ಸರಕಾರದವರು ನಿಯಂತ್ರಣ ಧೋರಣವನ್ನು ವಹಿಸದೆ ಇಂತಿಷ್ಟು ಪ್ರಮಾಣದಲ್ಲಿ ರೈತರು ಈ ವರುಷ ಧಾನ್ಯ ಕೊಡಬೇಕೆಂದು ವಿಧಿಸಿ ಧಾನ್ಯ ಎತ್ತುವಳಿ ಮಾಡಬೇಕು ಮತ್ತು ಗಂಡಾಂತರ ಪ್ರಸಂಗದಲ್ಲಿ ಆಯಾ ಸ್ಥಳಗಳಿಗೆ ಕಳಿಸುವ ಏರ್ಪಾಡು ಮಾಡಬೇಕು; ಅಂದರೆ ಪರಿಸ್ಥಿತಿ ಬಹಳ ಮಟ್ಟಿಗೆ ಸುಧಾರಿಸಬಹುದು. ಒಮ್ಮೆ ಅಯಶಸ್ವಿಯಾದ ನಿಯಂತ್ರಣ ಯೋಜನೆಯನ್ನು ಮತ್ತೆ ಕೈಕೊಳ್ಳುವದರಲ್ಲಿ ಅರ್ಥವೇನೋ ತಿಳಿಯದು!

ಲಾಭದಲ್ಲಿ ಪಾಲು

ಕೆಲಕಾಲದಿಂದ ಬೆಳೆಯುತಿರುವ ಕೆಲಸಗಾರ ಮತ್ತು ಒಡೆಯರಲ್ಲಿಯ ಸಂಘರ್ಷಣೆಯನ್ನು ಕಡಮೆ ಮಾಡುವದಕ್ಕಾಗಿ ಬೇರೆ ಬೇರೆ ಜನರು ತಮಗೆ ಸರಿದೋರಿದ ಸೂಚನೆಗಳನ್ನು ಮಾಡುತಿರುವರು. ಹಿಂದುಸ್ತಾನ ಸರಕಾರದವರು ಕಳೆದ ಮೇ ತಿಂಗಳಿನಲ್ಲಿ ಒಂದು ತಜ್ಞ ಸಮಿತಿಯನ್ನು ಪೂರ್ವೆಕೆ ಶಾಖೆಯ ಕಾರ್ಯದರ್ಶಿ ಶ್ರೀ ಎಸ್. ಎ. ವೆಂಕಟರಾಮನ್‌ರ ಅಧ್ಯಕ್ಷತೆಯಲ್ಲಿ ಆಯಾ ಜನರ ಸಾಕ್ಷಿ ತೆಗೆದುಕೊಂಡು ನೇಮಿಸಿದ್ದರು. ಆ ಸಮಿತಿಯವರು ಈಗ ತಮ್ಮ ವರದಿಯನ್ನು ಒಪ್ಪಿಸಿದ್ದು ಅದರ ಮುಖ್ಯಾಂಶವನ್ನು ಬೇರೆ ಕಡೆ ಕೊಡಲಾಗಿದೆ. ಕೂಲಿಕಾರರಿಗೆ ಲಾಭದಲ್ಲಿ ಪಾಲು ದೊರೆಯಬೇಕೋ ಎಂಬ ವಿಷಯವನ್ನು ಪಾಶ್ಚಾತ್ಯ ದೇಶಗಳು ವಿಚಾರಿಸಿ, ಪ್ರಯೋಗಿಸಿ ಅಯಶಸ್ವಿಯಾಗಿ ಬಿಟ್ಟಿದ್ದುಂಟು ನಮ್ಮ ದೇಶದಲ್ಲಿ ಅದರ ಪ್ರಯೋಗ ಮಾಡಿ ನೋಡಬೇಕೆಂದು ಈ ಸಮಿತಿಯವರು ಸೂಚಿಸಿ ಮುಖ್ಯ ಆರು ಉದ್ಯೋಗಗಳನ್ನೇ ಮೊದಲು ಆಯ್ದುಕೊಳ್ಳಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಲಾಭದಲ್ಲಿ ಕೂಲಿಕಾರರಿಗೆ ಇಂತು ಪಾಲು ದೊರೆತದ್ದಾದರೆ ಹುಟ್ಟುವಳಿಯನ್ನು ಹೆಚ್ಚಿಸಲಿಕ್ಕೆ ಅವರಿಗೆ ಒಂದು ಬಗೆಯ ಹೆಚ್ಚಿನ ಹುರುಪು ಬರುವದೆಂದೂ ಹೇಳಲಾಗುತ್ತದೆ. ಬಂದ ಉತ್ಪನ್ನದಲ್ಲಿ ಯಂತ್ರೋಪಕರಣಗಳ ಸವಕಳಿ ಕರಭಾರ ಮೊದಲಾದ್ದು ಹೋಗಲಾಗಿ ಉಳಿದ ೧೦೦ ಕ್ಕೆ ಹತ್ತರಷ್ಟು ಹಣವನ್ನು ಕಾದಿಟ್ಟ ನಿಧಿಗೆ ಸೇರಿಸಬೇಕೆಂದೂ ಅನಂತರ ನೂರಕ್ಕೆ ೬ ರಷ್ಟು ಬಂಡವಲಿಗೆ ಪ್ರತಿಫಲ ದೊರೆಯುವಂತೆ ಯೋಜಿಸಬೇಕೆಂದೂ ಬಳಿಕ ಉಳಿದದ್ದರಲ್ಲಿ ಕೆಲಸಗಾರರು ಮತ್ತು ಬಂಡವಲುದಾರರು ಸಮವಾಗಿ ಹಂಚಿಕೊಳ್ಳಬೇಕೆಂದೂ ಸೂಚಿಸಲಾಗಿದೆ. ಈಗ ಅನೇಕ ಕಾರಖಾನೆಗಳಲ್ಲಿ ಮೂರು ತಿಂಗಳ ಬೋನಸ್ಸೆಂದು ಕೂಲಿಕಾರರಿಗೆ ಕೊಡಲಾಗುತ್ತದೆ. 'ಲಾಭದಲ್ಲಿ ಪಾಲು ಕೊಡುವ ಯೋಜನೆ ಕಾರ್ಯರೂಪದಲ್ಲಿ ಬಂದ ನಂತರ ಈ ಬೋನಸ್ಸಿಗೆ ಕತ್ತರಿ ಬರಬಹುದು. ಆದರೆ ಆ ಬೋನಸ್ಸಿನ ಹಣದಷ್ಟು ಪಾಲಿನ ಹಣ ಪ್ರತಿಯೊಬ್ಬ ಕೆಲಸಗಾರನಿಗೆ ದೊರೆಯುವದೋ ಇಲ್ಲವೋ ಸಂಶಯ. ಏಕೆಂದರೆ ಹಾಕಿದ ಬಂಡವಲಿಗೆ ಪ್ರತಿಫಲವೆಂದು ಬಹಳಷ್ಟು ಹಣ ಹೋಗುವದು. ಅಲ್ಲದೆ ಬಂಡವಲುಗಾರರು ಮಾಡುವ ವೆಚ್ಚ ಮುಂತಾದದ್ದರಲ್ಲಿಯೂ ಕೂಲಿಕಾರರೊಡನೆ ಘರ್ಷಣೆಯೆದ್ದು ಅಸಂತೋಷ ಮತ್ತಷ್ಟು ಹೆಚ್ಚುವ ಸಂಭವವೂ ಇದೆ. ಪಾಶ್ಚಾತ್ಯ ದೇಶಗಳಲ್ಲಿ ಕೂಲಿಕಾರರೇ ಈ ಯೋಜನೆಯನ್ನು ಹೆಚ್ಚಾಗಿ ವಿರೋಧಿಸಿದ್ದಾರೆಂಬುದನ್ನು ನೆನೆದರೆ ಹಿಂದುಸ್ತಾನದಲ್ಲಿ ಅದೆಂತು ಯಶಸ್ವಿಯಾಗಬಲ್ಲುದೋ ನೋಡಬೇಕಾಗಿದೆ! ಸರಕಾರದವರು ಈ ಯೋಜನೆಯನ್ನು ಸ್ವೀಕರಿಸುವ ಮೊದಲು ಎಲ್ಲ ವಿಷಯಗಳನ್ನೂ ಆಳವಾಗಿ ವಿಚಾರಿಸಿ ಒಳ್ಳೆ ದಕ್ಷತೆಯಿಂದ ಮುನ್ನಡೆಯಬೇಕೆಂದು ಸೂಚಿಸಬಯಸುತ್ತೇವೆ.

ದಿವಂಗತ ಪಾವಂಜೆ ಗುರುರಾಯರು

ನಿರಾಡಂಬರ ಸೇವೆಗೆ ನಮ್ಮ ನಾಡಿನಲ್ಲಿ ದೊರೆಯುವ ಪ್ರಶಂಸೆ ಶೂನ್ಯವೆಂಬ ಮಾತು ಎಂದೋ ಸಿದ್ಧವಾಗಿ ಹೋಗಿದೆ. ಕಳೆದವಾರ ತಮ್ಮ ೮೦ನೇ ವಯಸ್ಸಿನಲ್ಲಿ ಇಹಯಾತ್ರೆಯನ್ನು ಮುಗಿಸಿದ ಉಡುಪಿಯ ಶ್ರೀ ಪಾವಂಜೆ ಗುರುರಾಯರದು ಇದಕ್ಕೆ ಇನ್ನೊಂದು ಉದಾಹರಣೆಯೆಂದಿಷ್ಟೇ ಹೇಳಬಹುದು. ಅವರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಯನ್ನು ಗುಣಗ್ರಾಹಿಗಳಾರೂ ಮರೆಯಲಾರರು. ವೈಷ್ಣವದಾಸರ ಕೀರ್ತನೆಗಳು ಇಂದು ಇಷ್ಟಾದರೂ ಉಳಿದುಕೊಂಡದ್ದರ ಶ್ರೇಯಸ್ಸಿನಲ್ಲಿ ಬಹುಭಾಗ ಶ್ರೀ. ಗುರುರಾಯರಿಗೆ ಸಲ್ಲಬೇಕು. ಅವರ ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯದಿಂದ ಹೊರಟ ದಾಸರ ಕೀರ್ತನೆಗಳ ೧೫ ಹೊತ್ತಿಗೆಗಳು ಕೀರ್ತನೆಗಳ ಶುದ್ಧ ಮುದ್ರಣದ ಮೊಟ್ಟಮೊದಲನೆ ಪ್ರಯತ್ನವಾಗಿದ್ದುವಲ್ಲದೆ ಇಂದಿಗೂ ಆ ಸಂಸ್ಕರಣಕ್ಕಿಂತ ಉತ್ತಮ ಮತ್ತು ಸಂಯೋಜಿತವಾದ ಅಂಕಗಳು ಬೇರೆ ಹೊರಟೇ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗದು. ಇಲ್ಲದೆ ಶ್ರೀ. ಗುರುರಾಯರು ನೂರಾರು ಹೆಂಗಸರ ಹಾಡುಗಳ, ಯಕ್ಷಗಾನ ಪ್ರಬಂಧಗಳ, ಕನ್ನಡ ಸಂಸ್ಕೃತ ಧಾರ್ಮಿಕ ಹಾಗು ಸಾಹಿತ್ಯಕೃತಿಗಳ ಪ್ರಕಟನವನ್ನು ಕೈಕೊಂಡರು. ಎರಡು ಯುದ್ಧಗಳ ಕಾಲದಲ್ಲಿಯೂ ಅವರು ತಮ್ಮ ಪ್ರಯತ್ನಗಳನ್ನು ಸಡಿಲಿಸಲಿಲ್ಲ. ಸಾಕಷ್ಟು ಎಡರ್ಗಳಿದ್ದರೂ ಇದಕ್ಕಿಂತ ಕಡಿಮೆ ಕೆಲಸ ಮಾಡಿ ಹೆಚ್ಚು ಗೌರವವನ್ನು ಪಡೆದವರೂ ಇದ್ದಾರೆ. ಆದರೆ ಶ್ರೀ. ಗುರುರಾಯರು ಅದಕ್ಕೆ ಕೈಯೊಡ್ಡಲಿಲ್ಲ. ಅದಾಗಿ ಅವರಿಗೆ ಬರಲೂ ಇಲ್ಲ. ನಮ್ಮ ಪ್ರಮುಖ ಸಾಹಿತ್ಯ ಸಂಸ್ಥೆಗಳು ಇನ್ನಾದರೂ ಅವರ ಸೇವೆಯ ಹಿರಿಮೆಯನ್ನು ಗಮನಕ್ಕೆ ತಂದುಕೊಂಡು ಅವರ ಹೆಸರಿಗೆ ಗೌರವವನ್ನು ಅರ್ಪಿಸುವ ವಿಚಾರ ಮಾಡುವವೆ?

ಜಿನ್ನಾರ ಜೀವನ ಕಲಿಸುವ ಪಾಠ

ಶ್ರೀ ಮಹಮ್ಮದ ಅಲಿ ಜಿನ್ನಾರ ಜೀವನ ಮತ್ತು ಕೃತಿ ಹಿಂದುಗಳಿಗೊಂದು ಪಾಠ ಕಲಿಸುತ್ತದೆ— ಅದರಲ್ಲೂ ವಿಶೇಷತಃ ಸವರ್ಣ ಹಿಂದೂಗಳಿಗೆ ವಿಚಾರ ಮಾಡಲು ತಕ್ಕ ಪಾಠ ಅದಾಗಿದೆ.

ಅವರು ಕಾಠೇವಾಡದ ಖೋಜಾ ಜಾತಿಯಲ್ಲಿ ಹುಟ್ಟಿದರು. ಅದು ಹಿಂದುಸ್ತಾನದಲ್ಲಿ ಹಿಂದು ಧರ್ಮ ಮತ್ತು ಇಸ್ಲಾಂಗಳನ್ನು ಜನುಸ್ಮಾರಕವಾಗಿ ಬೆರಕೆ ಮಾಡಿದ ಒಂದು ಧಾರ್ಮಿಕ ಮತ್ತು ಸಾಮಾಜಿಕ ಬಣ. ಪಾಠ ಪರಂಪರೆಯ ಅಧಿಕಾರಕ್ಕೆ ಸಂಬಂಧಿಸಿದ ಕಾಯದೆ ಮೊಕದ್ದಮೆಗಳೊಂದು ಹಲವಾರು ಸಾಮಾಜಿಕ ಪದ್ಧತಿಗಳು ಮತ್ತು ಧಾರ್ಮಿಕ ಆಚಾರಗಳು ಹಿಂದೂಗಳಲ್ಲಿರುವಂತೆಯೇ ಅವರಲ್ಲಿ ಇವೆ. ಆ ಜನಾಂಗದವರಲ್ಲಿ ಬಹಳ ಜನರಿಗೆ ಝೀನ (ಈಗ ಜಿನ್ನಾ ಆಗಿದೆ), ವಾಲ್ಜಿ, ಭಗವಾನ್ಜಿ, ಧರಮ್ಸೀ, ಪುರುಷೋತ್ತಂ, ಲಾಲ್ಜಿ, ಮೋತೀಲಾಲ್, ಕರ್ಸಿ, ಮುಂತಾದ ಹಿಂದು ಹೆಸರುಗಳಿವೆ. ಮನೆವಾರ್ತೆಯ ವ್ಯವಹಾರದಲ್ಲಿ, ವಿಚಾರದಲ್ಲಿ ಮತ್ತು ದೃಷ್ಟಿಯಲ್ಲಿ ಬಹಳವಾಗಿ ಅವರು ಸವರ್ಣ ಹಿಂದೂಗಳಂತೆಯೇ ಇದ್ದಾರೆ. ನಿಜವಾಗಿ ನೋಡಿದರೆ, ಅವರನ್ನು ಹಿಂದುಗಳಲ್ಲೇ ಒಂದು ಜಾತಿಗೆ ಸೇರಿದವರೆಂದು ಗಣಿಸಬಹುದು. ಏಕೆಂದರೆ, ಒಂದು ಹಿಂದು ಪಂಗಡವು ಹಳೆಯ ನಂಬಿಗೆಗಳನ್ನು ಬಿಟ್ಟು ಸರ್ವಗ್ರಾಹ್ಯವಲ್ಲದ ಹೊಸವನ್ನು ಆಶ್ರಯಿಸಿದಾಗ ಸಾಮಾನ್ಯವಾಗಿ ಹೀಗೆ ಸಾಮಾಜಿಕವಾಗಿ ಮಿಕ್ಕವರಿಂದ ಬೇರಾಗಿ ಹೋಗುವುದು ರೂಢಿಯಲ್ಲಿ ಇದ್ದದ್ದೇ ಆಗಿದೆ. ಕಾಲ ಕಳೆದ ಹಾಗೆ ಇದು ಒಂದು ಅಹಿತಕರವಾದ ನಿಲುಮೆಯೆನಿಸಿರಬಹುದು. ೧೮ ಮತ್ತು ೧೯ ನೆಯ ಶತಕಗಳಲ್ಲಿ ಶಾಸ್ತ್ರೀಯವಾಗಿ ಹಿಂದು ಧರ್ಮಕ್ಕೆ ಮರಳಿ ಬರುವುದು ಸಾಗಿತು. ಆದರದು ಸಾಮಾಜಿಕವಾಗಿ ಪುನಃ ಸ್ವಧರ್ಮಕ್ಕೆ ಹಿಂದಿರುಗಿದವರಿಗೆ ಸಹಾಯಕವೆನಿಸಲಿಲ್ಲ. ಹಿಂದುಗಳಲ್ಲಿ ಜಾತಿಭ್ರಷ್ಟರನ್ನು ಪುನಃ ಜಾತಿಯೊಳಗೆ ಸೇರಿಸಿಕೊಳ್ಳುವುದು ಅತ್ಯಂತ ವಿರಳ; ಮತ್ತು ವೈಷ್ಣವ ಖೋಜಾರನ್ನು ಕೂಡ ಯಾರೂ ತಮ್ಮ ಸಾಮಾಜಿಕ ವೃತ್ತದಲ್ಲಿ ಸೇರಿಸಿಕೊಳ್ಳಲಿಲ್ಲ. ಆ ಕಾರಣದಿಂದ ಅವಶ್ಯಕತೆಗನುಸಾರವಾಗಿ ಸಾಧ್ಯವಿದ್ದಷ್ಟು ಪೂರ್ಣ ಮುಸಲ್ಮಾನರಾಗಿ, ಹಿಂದು ಆಚಾರ, ವ್ಯವಹಾರ, ರೀತಿ, ನೀತಿಗಳೆಲ್ಲವನ್ನೂ ತ್ಯಜಿಸಿ ಬಿಡುವ ವಿರುದ್ಧ ಚಳವಳಿ ಎದ್ದಿತು. ಆದರೆ ಹಾಗೆ ಮಾಡುವುದು ಸುಲಭವಾಗಲಿಲ್ಲ; ಏಕೆಂದರೆ, ಖೋಜಾರ ತಲೆಯಲ್ಲಿ ಸವರ್ಣ ಭಾವ ಮತ್ತು ಸರಿಯುಕ್ತವಾದ ಒಂದು ಕುಟುಂಬ ಪದ್ಧತಿಗಳು ಉಳಿದಿದ್ದವು. ಆದರೆ ರೂಢಿಯಂತೆ ಹಿಂದುಗಳು ತಮ್ಮವರೆಂದು ಅವರನ್ನು ಹಿಂದಕ್ಕೆ ಪಡೆಯುವ ಗೋಜಿಗೆ ಹೋಗಲಿಲ್ಲ. ಅದರ ಫಲವಾಗಿ ಕಾಲ ಹೋದ ಹಾಗೆ ಹಿಂದು ಸಮಾಜದಿಂದ ಇನ್ನೂ ದೂರ ಹೋಗಬೇಕೆಂಬ ಚಳವಳಿ ಗಟ್ಟಿಯಾಯಿತು.

ಶ್ರೀ ಮಹಮ್ಮದ ಅಲಿ ಜಿನ್ನಾರ ಜೀವನ ಮತ್ತು ಕೃತಿಗಳನ್ನು ಈ ಚಳವಳಿಯ ಒಂದು ಬರೆದಿಟ್ಟ ದಫ್ತರವೆಂದು ಹೇಳಬಹುದು. ಅವರಿಗೆ ಮುಸಲ್ಮಾನ ಹೆಸರನ್ನು ಇಟ್ಟದ್ದೇ ಆಗಲೇ ಆ ಚಳವಳಿ ಹುಟ್ಟಿಬಿಟ್ಟಿತ್ತೆಂಬುದನ್ನು ತೋರಿಸುತ್ತದೆ. ಅವರು ತಮ್ಮ ಜೀವಿತ ಕಾಲದ ಅರ್ಧಕ್ಕಿಂತ ಹೆಚ್ಚು ಅಂಶದಲ್ಲಿ ಹಿಂದು ಮುಸಲ್ಮಾನರ ಐಕ್ಯವನ್ನು ಸಾಧಿಸಲು ಸೊಂಟ ಕಟ್ಟಿ ನಿಂತ ವೀರರಾಗಿಯೂ ರಾಷ್ಟ್ರೀಯರಾಗಿಯೂ ಪ್ರಾಮಾಣಿಕವಾಗಿ, ಆತ್ಮಸಾಕ್ಷಿಯಾಗಿ ದುಡಿದದ್ದು ಜಾತೀಯ ಸೌಹಾರ್ದದ ಬಗ್ಗೆ ಖೋಜಾ ಜನರಿಗಿರುವ ಸಾಧಾರಣ ದೃಷ್ಟಿ ಅವರಿಗೆ ರಕ್ತಗತವಾಗಿ ಬಂದಿರುವದನ್ನು ತೋರಿಸುತ್ತದೆ.

ಆದರೆ ೪೫ ಕ್ಕಿಂತ ಹೆಚ್ಚು ವರ್ಷಗಳನ್ನು ರಾಷ್ಟ್ರೀಯತೆ ಮತ್ತು ಐಕ್ಯಗಳಿಗಾಗಿ ದುಡಿಯುವುದರಲ್ಲಿ ಕಳೆದು ಅನಂತರ ಜಿನ್ನಾರು ಬುದ್ಧಿಪರಿವರ್ತನ ಹೊಂದಿದ್ದಲ್ಲದೆ ಪಾಕಿಸ್ತಾನ ಚಳವಳದ ನೇತೃವೇ ಆಗಿಬಿಟ್ಟರು— ಅಂದರೆ, ಹಿಂದುತ್ವದ ವಾಸನೆ ಬರುವ ಪ್ರತಿಯೊಂದನ್ನೂ ಸಂಪೂರ್ಣವಾಗಿ ತ್ಯಜಿಸಿ ದೂರ ಹೋದರು. ಅವರಲ್ಲಿ ಅಂಥ ಬದಲಾವಣೆ ಏಕಾಯಿತು? ಅವರ ಅತಿ ದುಷ್ಟ ಶತ್ರುಗಳು ಕೂಡ ಅವರಲ್ಲಿ ಪಣ್ಯತೆಯಿಲ್ಲ, ಅಸ್ಥಿರತೆಯಿಲ್ಲ ಎಂದು ಮೆಚ್ಚಿದ್ದಾರೆ. ಹಾಗಿದ್ದಾಗ, ಕೆಲವು ಸಂಗತಿಗಳಲ್ಲಿ ಅವರಿಗೆ ರಾಷ್ಟ್ರೀಯತೆ ಮತ್ತು ಜಾತೀಯ ಐಕ್ಯ ಇವುಗಳ ಬಗ್ಗೆ ಭ್ರಮೋತ್ಪಾದಕವಾದುದಾವ ಪರಿಣಾಮವೇ ಆಗಿರಬೇಕು. ಅವರಿಗೆ ಅವರ ಹೊಸ ರಾಷ್ಟ್ರೀಯತೆಯನ್ನು [illegible] ಗಳಿಲ್ಲ— " ಕಾಂಗ್ರೆಸ್ಸಿಗರೊಬ್ಬ ತಮ್ಮ (ಹಿಂದು) ಸ್ವಲ್ಪ ಕುರಿಸಿ ನೋಡಿ, ಅವನು ಸವರ್ಣ ಹಿಂದು ಎಂಬುದು ಆಗ ತಿಳಿಯುತ್ತದೆ— ಎಂದು ಹೇಳುತ್ತಿದ್ದರಂತೆ. ಒಮ್ಮೆ ನಾವು ರಾಷ್ಟ್ರೀಯ ಕಾಂಗ್ರೆಸ್ಸಿಗೆ ಸೇರಿ ಇದ್ದಿಟ್ಟಾಗ ಈಗ, ಆದರೆ ಒಮ್ಮೆ ಪ್ರಾಥಮಿಕ ಶಾಲೆಗೂ ನಾವು ಸೇರಿದ್ದುಂಟು! ಎನ್ನುವುದು ಅವರ ರೂಢಿಯಾಗಿತ್ತು.

ಶ್ರೀ. ಜಿನ್ನಾರಲ್ಲಿ ಮೂಲಭೂತ ಬದಲಾವಣೆಯನ್ನು ಮಾಡಿದ ಭ್ರಾಂತಿ, ನಿರಾಶ ಅಥವಾ ನಿರಾಶೆ ಯಾವುದಿರಬಹುದೆಂಬುದು ನಾನು ಅನೇಕ ವೇಳೆ ಕಂಡುಹಿಡಿಯಲು ಪ್ರಯತ್ನಿಸಿದ್ದುಂಟು. ಅಂಥ ಭ್ರಾಂತಿಯ ಪಾಡಿದ್ದಕ್ಕೆ ಅವರನ್ನು ಮಾತ್ರ ದೂರಬೇಕೋ ಅಥವಾ ಅದರಲ್ಲಿ ಕಾಂಗ್ರೆಸ್ಸಿನ ಮತ್ತು ಜಾತೀಯತಾವಾದಿಗಳಾದ ಹಿಂದುಗಳ ಹೊಣೆಯೇನಾದರೂ ಇರುವುದೇ? ಜಾತಿಪದ್ಧತಿ ಮತ್ತು ಹಿಂದು ಸಂಘಟನ ಚಳವಳಿಗಳೇನು ಪಾಕಿಸ್ತಾನದ ಕಲ್ಪನೆ ಯಾವ ಅರ್ಥವನ್ನು ಸೂಚಿಸುತ್ತದೆ? ಪಾಕಿಸ್ತಾನದ ಕಲ್ಪನೆ ಮತ್ತು ಅದರ ಸಿದ್ಧಿಯು ವಂಶಪಾರಂಪರ್ಯದಿಂದ ಬಂದ ಜಾತ್ಯಭ್ಯಾಸ, ಸಹಕುಟುಂಬಪದ್ಧತಿ, ಮತ್ತು ಹಿಂದುಗಳಿಗೂ ಜಿನ್ನಾರು ಹುಟ್ಟಿದ ಜಾತಿಯವರಿಗೂ ಸಾಧಾರಣವೆನಿಸುವ ಸಾಮಾಜಿಕ ರಚನೆಯ ಕಲ್ಪನೆ, ಇವುಗಳ ಸಂಪೂರ್ಣವಾದ ತರ್ಕಶುದ್ಧ ಪರಿಣಾಮವಲ್ಲವೇನು?

ಆ ಅರ್ಥದಲ್ಲಿ ಪಾಕಿಸ್ತಾನವು, ಹಿಂದುಸ್ತಾನದಲ್ಲಿ ಧರ್ಮ ಅಥವಾ ಧಾರ್ಮಿಕ ಭಾವದಿಂದ ಮಾಡುವ ಆಚಾರಗಳೊಂದಿಗೆ ಸಂಬಂಧಿಸಿರುವ ವರ್ಣಪದ್ಧತಿ ಸಾಧಿಸಿದ ಅತಿದೊಡ್ಡ ಸಿದ್ಧಿ ಎಂದು ಹೇಳಬಹುದು. ತಮ್ಮ ನೇತೃವಿನ ಪ್ರಭಾವದಲ್ಲಿ ಹಿಂದೀ ಮುಸಲ್ಮಾನರು ವರ್ಣತಿರಸ್ಕಾರಬುದ್ಧಿಯನ್ನು ಬಿಟ್ಟು ವರ್ಣಪುರಸ್ಕಾರ ಬುದ್ಧಿಯನ್ನು ಹಿಡಿದರು. ಅವರು ಹಿಂದು ಸಹಕುಟುಂಬ ಪದ್ಧತಿಯ ಮುಖ್ಯ ತತ್ವವನ್ನು ಅಂದರೆ ಕುಟುಂಬದ ಯಾವನೊಬ್ಬ ದಾಯಾದನಾದರೂ ಆಹಾರ, ಪೂಜೆ ಪುರಸ್ಕಾರ ಮತ್ತು ಆಸ್ತಿಗಳಲ್ಲಿ ಸಂಪೂರ್ಣ ವಿಭಜನೆಯನ್ನು ಕಾಯದೆಯಿಂದ ಅಮಲಿನಲ್ಲಿ ತರಬಹುದು ಎಂಬುದನ್ನು ಸ್ವೀಕರಿಸಿದರು, ಅಲ್ಲದೆ, ಅವರ ಅಭಿಪ್ರಾಯದಲ್ಲಿ ತಮಗಿಂತ ಹೆಚ್ಚು ಪವಿತ್ರರಿದ್ದು, ತಮ್ಮನ್ನು ಸಮಾನಸ್ಕಂಧರೆಂದು ನಡೆಸಿಕೊಳ್ಳಲೊಪ್ಪದೆ ಅವರೆಣಿಕೆಯಲ್ಲಿ ಕೀಳಾದವರತ್ತ ದರ್ಪ ತಿರಸ್ಕಾರಗಳನ್ನು ತೋರುವ ಜನರಿಂದ ಸಂಪೂರ್ಣವಾಗಿ ದೂರ ಉಳಿವ ತತ್ವವನ್ನೂ ಅವರು ಪರಿಗ್ರಹಿಸಿದರು.

ಹಿಂದು ಹಳ್ಳಿ ಮತ್ತು ನಗರರಚನೆ ಬೇರೆ ಬೇರೆ ವರ್ಣದವರಿಗೆ ಬೇರೆ ಬೇರೆ ಓಣಿಗಳನ್ನು ವಿಭಾಗಗಳನ್ನು ಇಲ್ಲವೆ ಪ್ರತ್ಯೇಕವಾದ ಇಡಿ ಹಳ್ಳಿಗಳನ್ನು ಬೇರ್ಪಡಿಸಿಕೊಡುತ್ತದೆ. ಪ್ರತ್ಯೇಕತೆ, ವಿಭಜನೆ, ಆಹಾರ ಪಾನೀಯಗಳಲ್ಲಿ ಹೆಚ್ಚಾಗಿ ಅನ್ಯಜಾತಿಯವರೊಡನೆ ಸೇರದಿರುವುದು, ಇವು ಹಿಂದುಧರ್ಮದ ನಾಗರಿಕ ಜೀವನದ ಲಕ್ಷಣಗಳು. ರಾಷ್ಟ್ರೀಯತೆ, ಜಾತ್ಯತೀತತೆ, ಮತ್ತು ಪ್ರಜಾಸತ್ತಾತ್ಮಕ ಧರ್ಮಾತೀತ ರಾಜ್ಯದ ಧ್ಯೇಯಗಳ ಬಗ್ಗೆ ಕಾಂಗ್ರೆಸ್ಸು ಎಷ್ಟು ಘಂಟಾಘೋಷಗಳನ್ನು ಮಾಡಿದರೂ ಹಿಂದುಗಳದು ಎಂದಿಗೇ ಆಗಲಿ, ವರ್ಣಗ್ರಹ ಹಿಡಿದ ಸಮಾಜವಾಗಿಯೇ ಉಳಿಯುವುದು, ಅಲ್ಲದೆ, ಮೇಲುಕೀಳೆಂಬ ಭಾವನೆಗಳ ಮತ್ತು ಪ್ರತ್ಯೇಕತೆಯ ಮೇಲೆ ಅದು ನಿಂತಿರುವ ವರೆಗೆ ರಾಜ್ಯವು ವ್ಯವಹಾರದಲ್ಲಿ ಅಪ್ರಜಾಸತ್ತಾತ್ಮಕ, ಜಾತಿಶಾಸಿತ ಎನಿಸುವುದು ಎಂಬ ನಿರಾಶಾವಾದದ ತೀರ್ಪಿಗೆ ಜಿನ್ನಾರು ಬಂದು ಮುಟ್ಟಿದರು. ಅವರು ಪದೇಪದೇ ರಾಷ್ಟ್ರೀಯ ಮತ್ತು ಪ್ರಜಾಸತ್ತಾತ್ಮಕ ಧ್ಯೇಯಗಳು ಭಾರತದಲ್ಲಿ ಆಚರಣೆಗೆ ಬರುವ ಪ್ರಮೇಯಗಳೆಂದೂ ಆಗಲಾರವು, ಎಂಬ ಅಪನಂಬಿಗೆಯನ್ನು ಹೇಳುತ್ತಿದ್ದರು.

ಹಿಂದು ಸಂಘಟನ ಚಳವಳಿ, ಅದರ ಪಂಥ ಮತ್ತು ಅತ್ಯಂತಿಕ ಗುರಿಗಳ ಒಳಮರ್ಮವನ್ನು ಅವರು ಕಂಡರು. ಜಾತಿ ಇಲ್ಲವೆ ಅಸ್ಪೃಶ್ಯತೆಯ ವಿರುದ್ಧ ಅದು ಮುಸುಕುಕೊಟ್ಟು ನಿಲ್ಲದಿರುವುದರಲ್ಲಿ ಅದರ [illegible]. ಅದು ಒಳಗಿಂದ ಹಿಂದುಗಳೆಲ್ಲರನ್ನು ಕೂಡ ನಿಜವಾಗಿ ಒಂದುಗೂಡಿಸಲು ಅಶಕ್ತವಾಗಿತ್ತು; ಮತ್ತು ಅವರ ಅಂತ್ಯದ ಧ್ಯೇಯವೆಂದರೆ [illegible] ಆಗಿತ್ತು.

ಅವರ [illegible] ಹಿಂದೂಗಳ [illegible] [ಅವರ ಪ್ರಕಾರ] ಅವರ ನಾಗರಿಕತೆಯ ಕಟ್ಟಡದ ಮೂಲಭೂತ ಭಾವನೆಗಳು ಮತ್ತು [illegible] ಕಾಣವನ್ನು ಕಂಡುಕೊಂಡರು. [illegible] ಮುಸಲ್ಮಾನ [illegible] ಹಿಂದು [illegible] ಮುಸಲ್ಮಾನರನ್ನು ಒಟ್ಟುಗೂಡಿಸಲು [illegible] ಕೊಂಡರು. ಇಸ್ಲಾಮಿನ ಪ್ರತ್ಯೇಕತೆಯನ್ನು [illegible] ಮುಸಲ್ಮಾನ [illegible] ಹಿಂದು [illegible] ಅವರು ಕೊಂಡಿದರು. ಧರ್ಮವೊಂದನ್ನು ಬಿಟ್ಟು [illegible] ಒಂದಾಗಿ ಮುಸಲ್ಮಾನರು ಹಿಂದುಗಳ [illegible] ದಿಂದಲೇ ಅವರಿಗೆ [illegible] ಸಾಧ್ಯವಾಯಿತು. ಈ ಪ್ರಕಾರ ಅವರು ಪ್ರತ್ಯೇಕ ಜಾತೀಯ ಪ್ರಾತಿನಿಧ್ಯವನ್ನು, ಭಾರತದ ಸಂಪೂರ್ಣ ವಿಭಜನೆ, ಹಿಂದು ಮತ್ತು ಮುಸಲ್ಮಾನ ಜನರ ಸಂಪೂರ್ಣ ಪ್ರತ್ಯೇಕೀಕರಣ, ಇವನ್ನು ಕೇಳಿದರು. ಈ ಅಂಶಗಳಲ್ಲಿ ಪ್ರತಿಯೊಂದೂ ಹಿಂದು ಜಾತ್ಯಭ್ಯಾಸವನ್ನು ಬಯಲಿಗೆಳೆಯುತ್ತವೆ. ಇದು ಅ. ಬ ಕ. ಗುಂಪುಗಳ ಸೂತ್ರ ನಿಶ್ಚಿತವಾದ ಮೇಲೆ ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ಹಿಂದುಗಳು ಮತ್ತು ಸೀಖರು ಪಂಜಾಬು ಬಂಗಾಲಗಳ ವಿಭಜನೆಯನ್ನು ಕೇಳಿದ್ದರಿಂದ ಒಪ್ಪಿಟ್ಟಿತು. ಶ್ರೀ ಜಿನ್ನಾರು ಪಾಕಿಸ್ತಾನ ಕಲ್ಪನೆಗೆ ಧಾರ್ಮಿಕ ಬಣ್ಣವನ್ನೂ ಕೊಟ್ಟು ಹಿಂದು ಮುಖಂಡರು ತಮ್ಮ ಜನತೆಗೆ ಬಿನ್ನವಿಸಿಕೊಂಡಂತೆಯೇ ನಾವು ಮುಸಲ್ಮಾನರಿಗೆ ಬಿನ್ನವಿಸಿಕೊಂಡರು ಮುಸಲ್ಮಾನರು ಹಿಂದುಗಳಂತೆ ಸಾಮಾಜಿಕವಾಗಿ ಅಷ್ಟು ವಿಭಕ್ತರಾಗಿದ್ದಿಲ್ಲವಾದದರಿಂದ ಹಿಂದುಗಳಿಗಿಂತ ಸ್ವಾಭಾವಿಕವಾಗಿ ಮುಸಲ್ಮಾನರನ್ನು ಒಂದುಗೂಡಿಸುವುದರಲ್ಲಿ ಜಿನ್ನಾರು ಹೆಚ್ಚು ಜಯಶೀಲರಾದರು.

ಅವರಿಗೂ ಮುಖಂಡರಾದ ಹಿಂದುಗಳಿಗೂ ಒಂದು ಅಂಶದಲ್ಲಿ ಸಾಮ್ಯವಿದೆ. ಅವರೆಲ್ಲರೂ ಸೂಕ್ಷ್ಮಮತಿಗಳಾದ ವಕೀಲರು. ಅವರು ತಮ್ಮ ಸೂಕ್ಷ್ಮಜ್ಞತೆಯನ್ನು ಪತ್ರಿಕೆಯ ಹರಿಗೆ ಬೆಳೆಸಿಕೊಂಡಿದ್ದಾರೆ. ಅವರು ಒಂದು ಸೂತ್ರವನ್ನು ಸ್ವೀಕರಿಸಿ, ಅದರ ಅರ್ಥ ನಿಷ್ಪತ್ತಿಯ ಬಗ್ಗೆ ಅನಂತರ ಜಗಳ ಮಾಡುತ್ತ ಅದರ ಅನನುಕೂಲ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವಂಥವರು. ಆ ಬಳಿಕ ಆರೋಪ ಪ್ರತ್ಯಾರೋಪಗಳದೊಂದು ದಾಳಿಕೆ ನಿಲುವುದು ಮತ್ತು ಅದನ್ನು ಕಾಯದೆಯ ವಾದ ಪ್ರತಿವಾದ ಅನುಸರಿಸುವುದರಿಂದ ಅದರಿಂದ ಆ ಸೂತ್ರದಷ್ಟೇ ಸ್ಪಷ್ಟ ಬಿಡಬೇಕಾಗಿ ಬರುತ್ತದೆ. ನಿಪುಣಮತಿಯಾದ ವಕೀಲರೆನಿಸಿದ ಮತ್ತು ಆ ಕಲೆಯಲ್ಲಿ ಕೋವಿದರೆನಿಸಿದ ಶ್ರೀ ಜಿನ್ನಾರು ಅದೇ ದಂಡದಿಂದ ಹಿಂದು ಮುಖಂಡರನ್ನು ಬಡಿದರು. ಎಲ್ಲ ಸಮಯದಲ್ಲೂ ಹಿಂದುಗಳನ್ನು ಅಪರಾಧಿಸ್ಥಾನದಲ್ಲಿ ನಿಲ್ಲಿಸಲಾಗದಿದ್ದರೆ ಅವರು ಕಡೆಯ ಪಕ್ಷ ಪ್ರಯತ್ನದಲ್ಲಿ ಹಿಂದುಗಳ ನ್ಯಾಯದೃಷ್ಟಿಯ ಬಗ್ಗೆ ಸಂಶಯವನ್ನಾದರೂ ಹುಟ್ಟಿಸಬಲ್ಲವರಾದರು.

ಹೀಗೆ, ಜಿನ್ನಾ ಮತ್ತು ಪಾಕಿಸ್ತಾನ ಹಿಂದು ಸಮಾಜದ ಫಲ ಮತ್ತು ಉದ್ದೇಶಸಾಫಲ್ಯಗಳೆಂದು ನನಗೆನಿಸಿದೆ. ಗೆಳೆಯನಾಗಿ ಇಲ್ಲವೆ ಸಹೋದರನಾಗಿ ಪಾಕಿಸ್ತಾನ ಭಾರತಕ್ಕೆ ಪುನರಾಗಮನ ಮಾಡಬೇಕೆಂದು ನಾವು ಬಯಸಲಿ, ಬಯಸದಿರಲಿ ಪಾಕಿಸ್ತಾನದ ಉದಯಕ್ಕೆ ಕಾರಣವಾದ ನಮ್ಮ ಜೀವನದ ನ್ಯೂನತೆಗಳನ್ನು ತಿದ್ದಲೇಬೇಕು. ಏಕೆಂದರೆ, ಆ ಕೇಡು ಇನ್ನೂ ನಿಂತಿಲ್ಲ ಮತ್ತು ಈ ಒಂದು ದೇಶವಿಭಜನೆಯಿಂದ ಅದು ನಿಲ್ಲುವುದೂ ಇಲ್ಲ. ಕಾಲ ಹೋದ ಹಾಗೆ ಜಿನ್ನಾ ಸಾಹೇಬರು ಹೇಳಿದಂತೆ ಪ್ರತಿಯೊಂದು ಮನೆ, ಬೀದಿ, ವಿಭಾಗ, ಪಟ್ಟಣ ಇಲ್ಲವೆ ತಾಲೂಕಿನ ವಿಭಜನೆಯನ್ನು ಅದು ತರಬಹುದು; ಕೇವಲ ಹಿಂದು ಮುಸಲ್ಮಾನರಲ್ಲಷ್ಟೇ ಅಲ್ಲ, ಭಾರತದ ಎಲ್ಲ ಸಾಮಾಜಿಕ ಇಲ್ಲವೆ ಪ್ರಾದೇಶಿಕ ಗುಂಪುಗಳಲ್ಲೆಲ್ಲ ವಿಭಜನೆಯನ್ನು ಅದು ತರುವುದು. ಸಂಯುಕ್ತವಾದ ಒಂದು ರಾಷ್ಟ್ರವಾಗಿ ಬೆಳೆಯಬೇಕಿದ್ದರೆ ನಾವು ನಮ್ಮ ಸಂಕುಚಿತ ಸಾಮಾಜಿಕ ದೃಷ್ಟಿಯನ್ನು ನಾಶ ಮಾಡಲೇಬೇಕು.

ಮುಂಬಯಿ —ಕಿ. ಘ. ಮಶ್ರುವಾಲಾ
೧೯—೯—೪೮

ಟಿಪ್ಪಣಿಗಳು

ಕನ್ನಡ ಭಾರತ

ಈ [illegible] [illegible] ... —ಕೆ. ಸಿ. [illegible]

«ಮೊಂಡ್ಯಕ್ಕೆ ಮದ್ದು»

ಈ [illegible] ... ಮರಣದಂಡನೆಯನ್ನು [illegible] ... ಕೊಡಬೇಕಾದುದು ಅವಶ್ಯ.

—ಜಿ. ಸಿ. [illegible]

[ಟಿಪ್ಪಣಿ— [illegible] ...]

ಧಾರವಾಡ —ಕ. ಶ್ರೀ. [illegible]
೩೧—೮—೪೮

ಗಾಂಧೀವಾದಿಗಳು

[illegible] ...

—[illegible]

ಗಾಂಧೀಜಿ ಮತ್ತು ಅವರ ತಂತ್ರಗಳು

ಗಾಂಧೀಜಿಯವರಲ್ಲಿ ಅವರವೇ ಆದ ಶಾಸ್ತ್ರಗಳು ಅಥವಾ ಪ್ರಕ್ರಿಯೆಗಳು ಇದ್ದವು. ಅವರು ಬದುಕಿದ್ದಷ್ಟು ಕಾಲ, ಯಾವುದಾದರೊಂದು ಹೊಸ ತಂತ್ರವನ್ನು ಇಲ್ಲವೆ ಹಳೆಯ ತಂತ್ರದ ಹೊಸ ಪ್ರಕಾರ ವಿಶೇಷವನ್ನು ಅವರು ರೂಪಿಸುವರೋ ಇಲ್ಲವೊ ಎಂದು ಹೇಳುವದು ಸುಲಭವಾಗಿದ್ದಿಲ್ಲ. ಆದರೆ ಅವರೀಗ ಕಣ್ಮರೆಯಾಗಿರುವುದರಿಂದ ಅವರು ಜೀವಿಸುತ್ತಿದ್ದ ಮತ್ತು ಕೆಲಸ ಮಾಡುತ್ತಿದ್ದ ರೀತಿಗಳ ಸ್ಥೂಲ ಲಕ್ಷಣಗಳನ್ನೂ ಅವರು ಸಾಧಿಸಿದ ಫಲಗಳನ್ನೂ ಸಿಂಹಾವಲೋಕನ ಮಾಡುವದು ಸಾಧ್ಯವಿದೆ.

೧ ಕ್ರಾಂತಿಕಾರಿ ತತ್ವಗಳು

ಅವರವು ಕ್ರಾಂತಿಕಾರಿ ತತ್ವಗಳು. ಸಾಧಾರಣವಾಗಿ ಸಂಧಾನಪರ ಮನೋವೃತ್ತಿಯವರಾದರೂ ಅವರು ಮೂಲ ತತ್ವಗಳ ವಿಷಯದಲ್ಲಿ ಮಾತ್ರ ಎಳ್ಳಷ್ಟು ಸಂಧಾನಕ್ಕೆಡೆಗೊಡುತ್ತಿರಲಿಲ್ಲ; ಗೌಣ ವಿವರಗಳಲ್ಲಿ ಮಾತ್ರ ಅವರು ಅಷ್ಟಿಷ್ಟು ಸಡಿಲುಬಿಡಲು ಸಿದ್ಧರಾಗುತ್ತಿದ್ದರು. ಅವರು ಸತ್ಯವನ್ನೇ ನೆಚ್ಚಿದವರು; ಅವರ ಪಾಲಿಗೆ ಸಾಧ್ಯದ ಘನತೆಗೆಷ್ಟೋ ಅಷ್ಟೇ ಸಾಧನದ ಪರಿಶುದ್ಧತೆಗೂ ಮಹತ್ವವಿತ್ತು. ಪ್ರಾಮಾಣಿಕತೆಯೆಂಬದು ಅವರಿಗೆ ಸುಯೋಗ್ಯ ಧ್ಯೇಯ ಮಾತ್ರವಲ್ಲ; ರಾಜಕಾರಣದಂಥ ಹೊಲಸು ಆಟದಲ್ಲಿ ಕೂಡ ಅದು ಅತ್ಯಂತ ಅನುಕೂಲ ಸಾಧನವೆಂದು ಅವರು ಪರಿಗಣಿಸಿದ್ದರು.

ಮನುಷ್ಯನು ಆತ್ಮಮಯನೆಂದು, ಸಾಮಾಜಿಕ, ಆರ್ಥಿಕ, ಅಥವಾ ಭೌತಿಕ ಪ್ರತಿರೋಧಗಳೆಷ್ಟೇ ಇದ್ದರೂ ಗೆದ್ದು ತನ್ನತನವನ್ನು ಪ್ರತಿಷ್ಠಾಪಿಸಿ ತೋರಬಲ್ಲ ಸತ್ವವೆಂದು ಅವರು ತಿಳಿದಿದ್ದರು. ಅವರಿಗೆ ಮನುಷ್ಯಜಾತಿಯ ಮೂಲ ಸಾತ್ವಿಕತೆಯಲ್ಲಿ ವಿಶ್ವಾಸವಿದ್ದಿತು; ಯಾರಲ್ಲಿಯೂ ಅವರು ಮೊದಲೇ ಅವಿಶ್ವಾಸ ವಿಡುತ್ತಿದ್ದಿಲ್ಲ, ಒಬ್ಬನ ಮನ ಒಲಿಸುವ ಪ್ರಯತ್ನದಲ್ಲಿ ಅವರೆಂದೂ ನಿರಾಶರಾಗುತ್ತಿದ್ದಿಲ್ಲ. ಅವರ ಪಾಲಿಗೆ ಮನುಷ್ಯನು ತನ್ನ ಆರ್ಥಿಕ ರಾಜಕೀಯ ಸೌಕರ್ಯಕ್ಕಾಗಿ ನಿರ್ಮಿಸಿಕೊಂಡ ಸಂಸ್ಥೆಗಳಿಗಿಂತ ಶ್ರೇಷ್ಠ. ಅವು ಅವನಿಗಾಗಿ ಹೊರತು ಅವನೇ ಅವುಗಳಿಗಾಗಿ ಅಲ್ಲ. ಆತ್ಮ ಒಂದೇ; ಮನುಷ್ಯರೊಳಗಿನ ವರ್ಗಾದಿ ಭೇದಗಳು ಬರಿ ಸಂಪ್ರದಾಯಮೂಲವಾದವುಗಳು; ಅವನ್ನು ಅಭೇದ್ಯ ಅಥವಾ ಸ್ಥಿರವೆಂದು ನಂಬಿದ್ದು ದೊಡ್ಡ ತಪ್ಪು.

೨ ದ್ವಂದ್ವ ಶಕ್ತಿಗಳ ಸಮೀಕರಣ

ನೋಡಲು ಪರಸ್ಪರ ವಿರುದ್ಧವೆಂದು ತೋರುವ ಶಕ್ತಿಗಳಲ್ಲಿ ಅವರು ಸಾಮರಸ್ಯವನ್ನು ತಂದೊದ್ದಿದರು— ಧರ್ಮ (ಅಥವಾ ಯೋಗ) ಮತ್ತು ರಾಜಕಾರಣ, ದಯೆ ಮತ್ತು ಘರ್ಷಣೆ ಈ ಬದ್ಧವೈರಿಗಳೆನಿಸಬಹುದಾದ ತತ್ವಗಳನ್ನು ಅವರು ಎರಕಗೊಳಿಸಿದರು. ಈ ದ್ವಂದ್ವಗಳಲ್ಲಿ ಪ್ರತಿಯೊಂದೂ ಮೂಲ ಆಧ್ಯಾತ್ಮಿಕ ಹಿನ್ನೆಲೆಯಿಂದ ಚ್ಯುತವಾಗಿ ಇನ್ನೊಂದರಿಂದ ದೂರ ದೂರ ಸರಿಯುತ್ತಲೆ ಇರುತ್ತದೆ. ಅವರಲ್ಲಿದ್ದ ಸಾಮರಸ್ಯ ಎರಡನ್ನೂ ಪರಿಶುದ್ಧಗೊಳಿಸುತ್ತಿತ್ತು. ಅವರ ಅಹಿಂಸೆಯ ಫಲವಾಗಿ, ಘರ್ಷಣೆಗಳೊಂದಿಗೆ ಸಹಜವಾಗಿ ಬರುವ ಕಹಿ ನೆನಪುಗಳು ಇಲ್ಲದಂತಾದವು. ಅದು ದಯೆಯಲ್ಲಿದ್ದ ಆತ್ಮಘಾತದ ಭಾಗವನ್ನು ಬದಲಿಸಿ ಅದನ್ನು ಸಮಾಜೋಪಕಾರಿಯಾದ ಚೈತನ್ಯಪೂರ್ಣ ಶಕ್ತಿಯನ್ನಾಗಿ ಮಾಡಿತು. ಅವರು ರಾಜಕಾರಣವನ್ನು ಪರಿಶುದ್ಧಗೊಳಿಸಿ ಧರ್ಮವನ್ನು ಅದರೊಂದಿಗೆ ಬೆರಸಿ ಸಮಾಜದ ಮುಂದೆ ಧಾರ್ಮಿಕತೆಯನ್ನೆತ್ತಿ ನಿಲ್ಲಿಸಿದರು.

ಅವರ ಧರ್ಮ ಅಥವಾ ಯೋಗ ಜ್ಞಾನಯೋಗವಾಗಿರಲಿಲ್ಲ; ಜ್ಞಾನಯೋಗ ಕೇವಲ ತರ್ಕವಾದವಾಗಿ ಬಿಡುವದುಂಟು. ಸಾಮಾನ್ಯವಾಗಿ ಕೊನೆಗೆ ಭಾವ ಮತ್ತು ಅಂಧಶ್ರದ್ಧೆಗಳ ರಾಶಿಯಾಗುವ ಭಕ್ತಿಯೋಗವೂ ಅವರದಲ್ಲ. ಆತ್ಮವನ್ನು ಕಡೆಗಣಿಸಿ ಶಾರೀರಿಕ ಕ್ರಿಯೆಗೇ ಹಿರಿಮೆ ಕೊಡುವ ಹಠಯೋಗವನ್ನೂ ಅವರು ನೆಮ್ಮಲಿಲ್ಲ. ಮೇಲಿನ ಮೂರರಿಂದಲೂ ಸ್ವಲ್ಪ ಸ್ವಲ್ಪವನ್ನು ಅವರು ಅಂಗೀಕರಿಸಿದ್ದರೂ ಕರ್ಮಯೋಗ ಅಥವಾ ಭಗವದ್ಗೀತೆಯಲ್ಲಿ ಉಪದೇಶಿಸಲ್ಪಟ್ಟ ಯೋಗವನ್ನೇ ಅವರು ಅನುಸರಿಸಿದ್ದರು. ಧರ್ಮವನ್ನೂ ಕ್ರಿಯಾಜೀವನವನ್ನೂ ಅದು ಒಂದುಗೂಡಿಸುತ್ತದೆ. ಜ್ಞಾನ, ಭಕ್ತಿ, ಹಠಮಾರ್ಗಗಳ ಯೋಗಸಾಧನೆಗಳು ಶುದ್ಧ, ಪರಿಪೂರ್ಣ, ಸೂಕ್ಷ್ಮ ಜೀವನಕ್ಕೆ ಸಾಧನಗಳು ಮಾತ್ರವಲ್ಲದೆ ಸ್ವತಃ ಅವೇ ಸಾಧ್ಯಗಳಲ್ಲವೆಂದು ಆ ಯೋಗ ಬೋಧಿಸುತ್ತದೆ. ಅವರು ವ್ಯವಹಾರಿಕ ಧ್ಯೇಯವಾದಿ. ಅವರು ಪ್ರಯೋಗಗಳನ್ನು ಮಾಡಿ ಕಲಿಯಲೆಂದೇ ಬಾಳುತ್ತಿದ್ದರು. ತಮ್ಮ ಕೆಲ ಮೂಲಭೂತ ತತ್ವಗಳ ವಿಷಯದಲ್ಲಿ ನಿಷ್ಠುರರಾಗಿದ್ದರೂ ಅವರು ಶ್ರದ್ಧಾಂಧರೂ ಅಲ್ಲ, ಸಂಪ್ರದಾಯಶರಣರೂ ಅಲ್ಲ. ಭಾವೀ ಪರಿವರ್ತನೆ ಇಂಥ ದಾರಿ ಹಿಡಿಯಬಹುದು, ಎಂಬ ಅನುಮಾನದ ಬಲದಿಂದ ಅವರು ಆ ತತ್ವಗಳ ಬೆಂಬತ್ತಿ ಹೋಗುತ್ತಿದ್ದರಲ್ಲದೆ, ಇತರ ಅವಸ್ಥೆಗಳಲ್ಲಿ ಅವರೆಷ್ಟೋ ಬಾರಿ ತಮ್ಮ ಪ್ರಮಾದಗಳನ್ನೊಪ್ಪಿಕೊಂಡು ತಟ್ಟನೆ ಅವನ್ನು ತಿದ್ದಿಕೊಳ್ಳುತ್ತಿದ್ದುದುಂಟು.

ಸತ್ಯ ಅಹಿಂಸೆಗಳು ಯಮದ ಪ್ರಥಮ ಭಾಗಗಳು; ಯಮವೇ ಯೋಗದ ಪ್ರಥಮ ಸೋಪಾನವೆಂದು ಸೂತ್ರಕಾರ ಪತಂಜಲಿಯ ಮತ. ರಾಮಧುನಿ ಎಂಬದು ಭಕ್ತರು ಅನುಸರಿಸುವ ಕೀರ್ತನ ಪ್ರಕ್ರಿಯೆಯ ಒಂದು ಅಂಗ. ಮನುಷ್ಯನು ಆತ್ಮಮಯ ಅಥವಾ ಬ್ರಹ್ಮಮಯನೆಂಬದು ಜ್ಞಾನದ ತಳಹದಿ. ಗಾಂಧೀಜಿಯಲ್ಲಿ ಇವೆಲ್ಲವೂ ಸಮರಸವಾಗಿ ಎರಕಗೊಂಡಿದ್ದವು.

೩ ಅನುಪಮ ಕಾರ್ಯಕ್ರಮ

ವಿಕೇಂದ್ರೀಕೃತ ಉದ್ಯಮಗಳು, ಸ್ವಯಂಪೂರ್ಣ ಅಥವಾ ಸ್ವಾವಲಂಬಿ ಅರ್ಥಪದ್ಧತಿ, ಅಹಿಂಸಾತ್ಮಕ ಪರಿಶುದ್ಧ ರಾಜಕಾರಣ, ಹಳ್ಳಿಗಳ ಪುನರುದ್ಧಾರ, ಕೈಗಾರಿಕೆಗಳಿಗೂ ಸಾಮಾಜಿಕ ಜೀವನಕ್ಕೂ ಹೊಂದಿಕೆಯಾಗುವ ಶಿಕ್ಷಣಕ್ರಮ— ಇವುಗಳಿಂದೊಡಗೂಡಿದ ಅನುಪಮ ಕಾರ್ಯಕ್ರಮವನ್ನು ಅವರು ಸಿದ್ಧಗೊಳಿಸಿದ್ದರು. ಪ್ರಬಲವಾದ ಕಾಯಿದೆಗಳನ್ನಾಗಲಿ ಘಟನೆಗಳನ್ನಾಗಲಿ ಆಡಳಿತದ ಉಕ್ಕಿನ ಪಂಜರಗಳನ್ನಾಗಲಿ ನಿರ್ಮಿಸುವದಕ್ಕಿಂತ ತಮ್ಮ ಆಶ್ರಮದಲ್ಲಿ "ಪ್ರಬಲ" ಮನುಷ್ಯರನ್ನು ನಿರ್ಮಿಸಲು ಅವರು ಮಹತ್ವ ಕೊಟ್ಟಿದ್ದರು.

೪ ಸಾಮಾಜಿಕ ಯೋಗ ಮತ್ತು ಜಾತ್ಯತೀತ ರಾಜಕಾರಣ

ಅವರ ಯೋಗ ಸಾಮಾಜಿಕ, ಅವರ ರಾಜಕಾರಣ ಜಾತ್ಯತೀತ. ಯೋಗವೂ ಧರ್ಮವೂ ಜಗತ್ತಿನಲ್ಲೆಲ್ಲ ವೈಯಕ್ತಿಕ ಸ್ವರೂಪವನ್ನು ತಳೆಯುತ್ತಿವೆ. ಅನೇಕ ಧರ್ಮಗಳು ಸಮಾಜಸೇವೆಯನ್ನು ಮಾಡಲು ಸ್ವಾತಂತ್ರ್ಯ ಕೊಟ್ಟರೂ ರಾಜಕಾರಣಕ್ಕೆ ಮಾತ್ರ ಹೆಚ್ಚು ಕಡಿಮೆ ಎಲ್ಲ ಧರ್ಮಗಳೂ ಬಹಿಷ್ಕಾರಹಾಕಿವೆ. ತಾನು ಜೀವಿಸುವ ಸಮಾಜದಮೇಲೆ ನೈತಿಕ ಕುಬ್ಬರು ಅಧಿಕಾರ ನಡೆಸಿದರೂ ಧಾರ್ಮಿಕಜೀವಿ ಸಹಿಸುತ್ತಾನೆ. ಗಾಂಧೀಯೋಗ ಮಾತ್ರ ಮನುಷ್ಯನನ್ನು ಸಮಾಜದಲ್ಲಿಯೇ ಉದ್ಧಾರ ಮಾಡಲೆಳಸಿತು; ಅವನನ್ನು ಸಮಾಜದಿಂದ ವಿಮುಖನನ್ನಾಗಿ ಮಾಡಲಿಲ್ಲ. ಇಷ್ಟೇ ಅಲ್ಲ, ಅದು ಸಮಾಜ ಸೇವೆಯಲ್ಲಿ ತೊಡಗಿಸಿ ಅವನನ್ನು ಉದ್ಧರಿಸಿತು. ಅದರ ಕಾಲಸ್ಥಿತಿಯೆ ಗಾಂಧೀಜಿಗೆ ತಮ್ಮ ಧ್ಯೇಯವನ್ನು ಇನ್ನೊಂದು ಮೆಟ್ಟಿಲು ಎತ್ತರಕ್ಕೆ ಒಯ್ಯಲು ಸಹಾಯ ಮಾಡಿತು. ಅವರ ರಾಜಕಾರಣದಲ್ಲಿ ನೀತಿ ಮತ್ತು ಧರ್ಮದ ಸಂಯೋಜನೆಯಿದ್ದರೂ ಅದು ಜಾತ್ಯತೀತವಾಗಿತ್ತು. ಸ್ವಾತಂತ್ರ್ಯ ಸಂಪಾದನೆಗಾಗಿ ಅವರು ಜಾತೀಯ ದ್ವೇಷವನ್ನಾಗಲಿ ಅಂಥ ಅಸಹನೆಯನ್ನಾಗಲಿ ಕಲಕಲು ಸಿದ್ಧರಿರಲಿಲ್ಲ; ಸಾಧನಗಳೂ ಸಾಧ್ಯದಷ್ಟೇ ನಿರ್ಮಲವಾಗಿರಬೇಕೆಂದರವರು. ಅವರ ಮಾನವಧರ್ಮ ಎಲ್ಲ ಸಂಘಟಿತ ಧರ್ಮಗಳಲ್ಲಿರುವ ಅನವಶ್ಯಕ ಮತ್ತು ಸದೋಷ ಅಂಶಗಳನ್ನು ತಿರಸ್ಕರಿಸಿದರೂ ಎಲ್ಲ ಧರ್ಮಗಳ ಗುಣಗಳನ್ನೂ ಪರಿಗ್ರಹಿಸಿತು.

೫ ಆಶ್ಚರ್ಯತಂತ್ರ

ಅವರು ತಮಗೆ ಅನುಕೂಲವೆನಿಸಿದಾಗ "ಆಶ್ಚರ್ಯ ತಂತ್ರ"ವನ್ನು ಉಪಯೋಗಿಸುತ್ತಿದ್ದರು. ಅವರು ಮೂಲತಃ ರಚನಾಚತುರರು, ಪ್ರಚಂಡ ಸಂಘಟಕರು, ಸಂಸ್ಥೆಗಳನ್ನೂ ಸಂಪ್ರದಾಯಗಳನ್ನೂ ಕಟ್ಟುವದಕ್ಕಾಗಿ ದೀರ್ಘಕಾಲದ ವರೆಗೆ ದುಡಿಯುವ ಸೈರಣೆಯುಳ್ಳವರು. ಅದರೂ ಒಮ್ಮೊಮ್ಮೆ ಅವರು ಅಗಾಧ ಶಕ್ತಿಪ್ರದರ್ಶನಕ್ಕೋ ಎದುರಾಳಿಯನ್ನು ಬೆಚ್ಚಿಸುವ ಉಪಾಯಗಳಿಗೋ ಶರಣು ಹೋಗುತ್ತಿದ್ದರು. ಕ್ರಾಂತಿಕಾರಕರಾಗಿದ್ದ ಅವರು ಒಂದೊಂದು ವೇಳೆ ಘಟನೆಗಳು ಸಾವಕಾಶವಾಗಿ ಸಾಗುವದನ್ನು ಕಂಡು ಅಸಂತುಷ್ಟರಾಗುತ್ತಿದ್ದರು, ಪ್ರತಿಗಾಮಿತ್ವದ ಒಲಿತಗಳನ್ನು ನೋಡಿ ಸೈರಣೆಗೆಡುತ್ತಿದ್ದರು. ಒಮ್ಮೊಮ್ಮೆ ತಮ್ಮ ಮೂಲ ತತ್ವಗಳು ಮೆಲ್ಲಮೆಲ್ಲಗೆ ಉಲ್ಲಂಘಿಸಲ್ಪಡುವದನ್ನೂ ವಿರೋಧಿಸಲ್ಪಡುವದನ್ನೂ ಅವರು ಕಾಣುತ್ತಿದ್ದರು. ಅಂಥ ಪ್ರಸಂಗಗಳಲ್ಲಿ ಅವರು ಈ ಆಹ್ವಾನಗಳನ್ನು ಸ್ವೀಕರಿಸಿ, ಸಮಾಜದ ಅತ್ಯಂತ ಪ್ರಬಲ ಶಕ್ತಿಗಳ ವಿರುದ್ಧ ತಮ್ಮ ಆತ್ಮತೇಜಸ್ಸನ್ನು ಮುಖಾಮುಖಿ ನಿಲ್ಲಿಸುತ್ತಿದ್ದರು. "ಮಾಡು ಇಲ್ಲವೆ ಮಡಿ" "ಕೋಟ್ಯಂತರ ಜನರ ವಿರುದ್ಧ ಏಕಾಕಿಯ ಎದುರಾಟ'' ಈ ಬತ್ತಲೆ ಬೈರಾಗಿ ಜಗತ್ತಿನ ಅತ್ಯಂತ ಪ್ರಬಲ ಸಾಮ್ರಾಜ್ಯದ ವಿರುದ್ಧ ಸಡ್ಡು ಹೊಡೆದು ನಿಂತ. ಅವರ ರಾಜಕೀಯ ಚಳವಳಿಗಳು, ಅವರ ಉಪವಾಸಗಳು, ಅವರ ಅಸ್ಪೃಶ್ಯತಾ ವಿರೋಧಿ ಅಥವಾ ಜಾತೀಯ ಐಕ್ಯದ ಸತ್ರಗಳು, ಎಲ್ಲವೂ ಈ ಬಗೆಯ "ಆಶ್ಚರ್ಯ ತಂತ್ರ"ಗಳೇ. ಅಂಥ ಪ್ರಸಂಗಗಳಲ್ಲಿ ಅವರು ಇಚ್ಛಿತ ಫಲಪ್ರಾಪ್ತಿಗಾಗಿ ತಮ್ಮ ಸರ್ವಸ್ವವನ್ನೂ ಪಣಕ್ಕೆ ಹಚ್ಚುತ್ತಿದ್ದರು.

೬ ಜನಸಾಮಾನ್ಯರೊಡನೆ ಸಂಪರ್ಕ

ಅವರು ಜನಸಾಮಾನ್ಯರೊಡನೆ ನಿಕಟದ ಸಂಪರ್ಕವಿಟ್ಟುಕೊಳ್ಳುವದರಲ್ಲಿ ಹೆಚ್ಚು ವಿಶ್ವಾಸವಿಟ್ಟಿದ್ದರಲ್ಲದೆ ಅವರ ಬಗ್ಗೆ ಓದುವದರಲ್ಲಿ ಅಲ್ಲ. ಸಂಪರ್ಕ ಮೂಲಕ ಸ್ವತಃ ವಿಷಯ ಗ್ರಹಣ ಮಾಡಬಹುದು. ಸಮಾಜ ಶಾಸ್ತ್ರವು ಮಾನವನ ಇತಿಹಾಸವನ್ನು ಚರ್ಚಿಸಿ ಭಾವೀ ಘಟನೆಗಳನ್ನು ಊಹಿಸಿಕೊಳ್ಳಲು ಪ್ರಯತ್ನಿಸುವದು. ರಾಷ್ಟ್ರಗಳಿಗೂ ಮತಗಳಿಗೂ ಸಂಬಂಧಪಟ್ಟ ಈ ಭೂರಾಜನೀತಿಯು ಒಂದು ಜಡ ಪದಾರ್ಥವೆ. ಇದರಲ್ಲಿ ಊಹೆಗೆ ಅವಕಾಶ ಕೊಡುವ ವಿಚಿತ್ರಾಂಶಗಳು ಮಾತ್ರ ಸಾಕಷ್ಟು ದೊರಕುತ್ತವೆ. ಗಾಂಧೀಜಿಗೆ ಮಾನವ ಸತ್ವದಲ್ಲಿ ಪ್ರಗತಿಶೀಲ ಮತ್ತು ಪರಿವರ್ತನಪರ ಜೀವವೇ ಕಂಡು ಬರುತ್ತಿತ್ತು. ಅವರ ಅಭಿಪ್ರಾಯದಂತೆ ಮನುಷ್ಯನಿಗೇ ಪ್ರಾಮುಖ್ಯವಲ್ಲದೆ, ಅವನ ಅರ್ಥಶಾಸ್ತ್ರಕ್ಕಾಗಲೀ ರಾಜನೀತಿಗಾಗಲೀ ಅಲ್ಲ ಅದ್ದರಿಂದ ಗಾಂಧೀಜಿ ತಮ್ಮ ಸುತ್ತಲಿನ ಮಾನವ ಸಮಾಜದ ಅಭ್ಯಾಸವನ್ನೇ ಪ್ರಾಮುಖ್ಯವಾಗಿ ಮಾಡುತ್ತಿದ್ದರು. ಜನರೊಡನೆ ಅವರ ಪರಿಚಯ ಅತ್ಯಂತ ನಿಕಟವಾದದ್ದು ಮತ್ತು ವೈಯಕ್ತಿಕವಾದದ್ದು. ಗಾಂಧೀಜಿಯಂತಹ ಸರ್ವತೋಮುಖ ಕಾರ್ಯವ್ಯಾಪವಿರುವ ರಾಜಕೀಯ ಧುರೀಣರಿಗೆ ಹಿಂದುಸ್ತಾನದಲ್ಲಿಯೂ ವಿದೇಶದಲ್ಲಿಯೂ ಇಷ್ಟು ಪ್ರೀತ್ಯಾಸ್ಪದ ಪರಿಚಿತರೂ ಸಂಪರ್ಕಗಳೂ ಇರುವದು ಕನಸಿನಲ್ಲಿಯೂ ದುರ್ಮಿಳವೆನ್ನಬಹುದು. ಅವರ ಜೀವನದಲ್ಲಿಯ ಅತ್ಯಂತ ಸೂಕ್ಷ್ಮ ನಿರ್ಣಯಗಳಾವೂ ಅವರ ಅಭ್ಯಾಸ ಬಲದಿಂದ ನಿರ್ಣಯಿಸಲ್ಪಟ್ಟಿಲ್ಲ. ಅವಕ್ಕೆಲ್ಲ ಅವರ ಅಂತರ್ವಾಣಿಯೇ ಆಧಾರ. ಮಾನವ್ಯದೊಡನಿಟ್ಟ ನಿಕಟ ಸಂಪರ್ಕದ ಫಲವೇ ಅವರ ಈ ಅಂತರ್ವಾಣಿ.

೭ ಅವರ ಪರಿಪೂರ್ಣತೆಯ ಧ್ಯೇಯ

ಅವರು ತಮ್ಮ ನಿತ್ಯ ನಡೆವಳಿಕೆಯ ಬಗ್ಗೆಯೂ ತಮ್ಮದೇ ಒಂದು ಹಾದಿಯನ್ನು ಹಾಕಿಕೊಂಡಿದ್ದರು. ಅದು ಗೀತೆಯ ಸ್ಥಿತಪ್ರಜ್ಞನ ಹಾದಿ— ಕೇಂದ್ರೀಕೃತವಾದರೂ ನಿರ್ಲಿಪ್ತ; ಅತಿ ಪ್ರಬಲವಾದರೂ ನಿರ್ವಿಕಾರ ಮತ್ತು ದ್ವಂದ್ವಾತೀತವಾದದ್ದು. ಅವರು ಬಹುಬೇಗ ನಿರ್ಣಯ ಕೈಕೊಳ್ಳುತ್ತಿದ್ದರು ಮತ್ತು ಅವೆಲ್ಲ ಸಮರ್ಪಕವಾಗಿಯೇ ಇರುತ್ತಿದ್ದವು. ಅವರು ಅತ್ಯಲ್ಪ ಅವಕಾಶದಲ್ಲಿಯೇ ಸಂಪೂರ್ಣ ವಿರಾಮವನ್ನು ಹೊಂದುತ್ತಿದ್ದರು. ಅವರು ಅನೇಕಾನೇಕ ಕಾರ್ಯಕ್ರಮಗಳಿಗೆ ಹೋಗುತ್ತಿದ್ದರು. ಇವನ್ನೆಲ್ಲ ಸಂಪೂರ್ಣವಾಗಿ ಪರಿತೃಪ್ತ ಮಾನಸರಾಗಿಯೇ ನೆರವೇರಿಸುತ್ತಿದ್ದರು. ಇದನ್ನು ಅವರೊಡನೆ ನಿಕಟದ ಸಂಬಂಧ ಬಂದವರು ದಿನವೂ ಕಂಡಿದ್ದುಂಟು. ಅವರ ನಿಯಮಿತತನವಂತೂ ಅದ್ಭುತವಾದದ್ದು ಇವೆಲ್ಲ ಗುಣಗಳು ಭಗವದ್ಗೀತೆ ವರ್ಣಿಸುವ ಸ್ಥಿತಪ್ರಜ್ಞನ ವೈಶಿಷ್ಟ್ಯಗಳೇ.

೮ ತಾತ್ಪೂರ್ತಿಕ ಏಕಾಂತವಾಸ

ತಮ್ಮನ್ನು ಇನ್ನೂ ಹೆಚ್ಚು ಹೆಚ್ಚಾಗಿ ವಿಕಾಸಗೊಳಿಸಿಕೊಳ್ಳಲು ಅವರು ಕಾಲಕಾಲಕ್ಕೆ ತಾತ್ಪೂರ್ತಿಕ ಏಕಾಂತವಾಸವನ್ನು ಕೈಕೊಳ್ಳುತ್ತಿದ್ದರು. ಅವರನ್ನು ಕಾರಾವಾಸದಲ್ಲಿಟ್ಟು ಅವರನ್ನೂ ಅವರ ರಾಜಕೀಯ ಆಂದೋಲನವನ್ನೂ ಬಗ್ಗುಬಡಿದವೆಂದು ಬ್ರಿಟಿರ ರಾಜಸತ್ತಾವಾದಿಗಳು ಭಾವಿಸಿದರು. ಅವರೇ ಕೆಲಕಾಲ ರಾಜಕಾರಣದಿಂದ ನಿವೃತ್ತರಾಗುತ್ತಿದ್ದರು. ಹರಿಜನೋದ್ಧಾರ, ಜಾತೀಯ ಐಕ್ಯ, ರಚನಾತ್ಮಕ ಕಾರ್ಯ ಅಥವಾ ತಮ್ಮ ಆಶ್ರಮದಲ್ಲಿದ್ದ ಕೆಲಸಗಾರರ ಶಿಕ್ಷಣ ಕಾರ್ಯ ಇವೇ ಮೊದಲಾದ ಕಾರ್ಯಗಳಲ್ಲಿ ಆಗ ಅವರು ತೊಡಗಿರುತ್ತಿದ್ದರು. ಅವರು ಕಾಂಗ್ರೆಸ ಸದಸ್ಯತ್ವದಿಂದ ಕೂಡ ನಿವೃತ್ತರಾಗಿದ್ದರು. ಹೀಗೆ ಅವರು ನಿವೃತ್ತರಾದಾಗೆಲ್ಲ ಇನ್ನಷ್ಟು ಬಲಶಾಲಿಗಳಾಗಿಯೇ ಹೊರಬರುತ್ತಿದ್ದರು. ನೆಲದಲ್ಲಿ ಹುಗಿದ ಬೀಜದಂತೆ ಇವರೂ ಪ್ರತಿ ಸಲ ಹೆಚ್ಚು ಹೆಚ್ಚಾಗಿ ಕುಡಿಯೊಡೆದು ಎಂದಿಗಿಂತ ಪ್ರಬಲವಾಗಿ ಬೆಳೆಯುತ್ತಿದ್ದರು. ಯಾರಿಗೆ ಗೊತ್ತು, ಅವರ ಮರಣವು ಕೂಡ ಇಂತಹ ಒಂದು ನಿವೃತ್ತಿಯೇ ಏಕಾಗಿರಬಾರದು? ಇಷ್ಟೇ ಈ ನಿವೃತ್ತಿ ಅತ್ಯಂತ ಅತಿರೇಕದ್ದು. ಗಾಂಧೀಜಿ ಜಾತ್ಯತೀತರಾಗಿ ಜಾತ್ಯಂಧ ಶಕ್ತಿಗಳನ್ನು ಎದುರಿಸಿದರು. ಕೊನೆಗೆ ಅದಕ್ಕೇ ಬಲಿಯಾದರು. ತೋರಿಕೆಗೆ ಅವರ ಈ ಹೋರಾಟ ಬಹಳ ಅವಸರದ್ದಾಯಿತೆಂದೂ ಹಿಂದುಸ್ತಾನಕ್ಕೆ ಶಿವಾಜಿಯ ಅಥವಾ ಗುರುಗೋವಿಂದರ ರಾಜಕಾರಣಕ್ಕಿಂತ ಹೆಚ್ಚಿನದೇನೂ ಬೇಕಿರಲಿಲ್ಲವೆಂದೂ ಗಾಂಧೀಜಿ ಅವಸರದ ಹೆಜ್ಜೆ ಹಾಕಹೋಗಿ ಪ್ರಾಣಕ್ಕೆರವಾದರೆಂದೂ ತೋರಬಹುದು. ಆದರೆ ಇತಿಹಾಸವು ತನ್ನ ತೀರ್ಪನ್ನು ಇಷ್ಟು ಅವಸರದಲ್ಲಿ ಹೇಳುವದಿಲ್ಲ. ಇತಿಹಾಸದ ತೀರ್ಪಿಗೆ ಶತಮಾನಗಳು ಸಹ ಉರುಳಬೇಕಾಗುತ್ತವೆ. ಮಹಾತ್ಮರ ಕೊಲೆಯ ಮೂಲಕ ಹಿಂದುಸ್ತಾನದ ಜಾತೀಯತೆಯು ತನ್ನ ವಾಟರಲೂವನ್ನು ಇಲ್ಲಿಯೂ ಸೃಷ್ಟಿಸಿಕೊಳ್ಳದಿರಲಿಲ್ಲ. ಯಾರಿಗೆ ಗೊತ್ತು? ಮಹಾತ್ಮರು ಬದುಕಿದ್ದಾಗ ಸಾಧಿಸದಿದ್ದದ್ದು ಅವರು ಅದಕ್ಕಾಗಿ ಪ್ರಾಣ ಕೊಟ್ಟಾಗ ಸಾಧಿಸಿದರೂ ಸಾಧಿಸಬಹುದು.

ಸಮಾರೋಪ

ಮಹಾತ್ಮರು ಸ್ವತಃ ವ್ಯಾವಹಾರಿಕ ಆದರ್ಶವಾದಿಗಳಾಗಿದ್ದರಲ್ಲದೆ ಹಟಮಾರಿ ಮಡಿವಂತರಾಗಿರಲಿಲ್ಲ. ಅವರು ತೋರಿದ ಪದ್ಧತಿಗಳು ಮುಂದಿನ ಕಾಲದಲ್ಲಿ ಎಷ್ಟರ ಮಟ್ಟಿಗೆ ಫಲಪ್ರದವೆಂಬುದನ್ನು ಇತಿಹಾಸವೇ ನಿಷ್ಕರ್ಷಿಸಲಿ. ಅವರೇನೋ ತಮ್ಮ ರಾಜಕೀಯ ತತ್ವಗಳನ್ನೆಲ್ಲ ಪ್ರಯೋಗಿಸಿಯೇ ಬಳಕೆಗೆ ತಂದರು. ಬ್ರಿಟಿಶರು ಒಂದಿಲ್ಲೊಂದು ದಿನ ತಳ ಕೀಳುತ್ತಿದ್ದರು. ಆದರೆ ಅವರು ಹೋಗುವಾಗ ದೇಶವನ್ನು ಪಾಳೆಯಗಾರರ, ಬಂಡವಳಗಾರರ, ಜಾತ್ಯಂಧರ ಇಲ್ಲವೆ ಲಂಚಗುಳಿಗಳ ಕೈಯಲ್ಲಿ ಕೊಟ್ಟು ಹೋಗಬಹುದಿತ್ತು. ಆದರೆ ಗಾಂಧೀಜಿಯು ತಮ್ಮ ಅಂತರ್ವಾಣಿಯ ನಿರ್ದೇಶದಂತೆ ದೇಶದ ನಾಯಕತ್ವವು ಯೋಗ್ಯ ಸಂಸ್ಥೆಯ ಸ್ವಾಧೀನದಲ್ಲುಳಿವಂತೆ ಮಾಡಿದರು. ಅವರ ಶಿಷ್ಯರಲ್ಲೊಬ್ಬರಾದ ಪಟೇಲರು ಸಂಸ್ಥಾನಗಳ ಸಮಸ್ಯೆಯನ್ನು ಎಷ್ಟು ಸುಲಭವಾಗಿ ಬಿಡಿಸಿದರೆಂಬುದು ಲೋಕಕ್ಕೇ ಗೊತ್ತು. ಅವರು ಅವುಗಳನ್ನು ನಾಶ ಮಾಡಲೂ ಇಲ್ಲ ಚದರಿಸಿಯೂ ಬಿಡಲಿಲ್ಲ. ಬಳ್ಳೇ ಜಾಣತನದಿಂದ ೧೨ ತಿಂಗಳಲ್ಲಿಯೇ ಹಿಂದೀ ಒಕ್ಕೂಟದಲ್ಲಿ ಅವನ್ನೆಲ್ಲ ಲೀನಗೊಳಿಸಿಕೊಂಡು ಬಿಟ್ಟರು. ಹಾದಿ ತಪ್ಪಿದ ಜಗಕ್ಕೆ ಮಹಾತ್ಮರು ಹೊಸ ಜ್ಯೋತಿಯನ್ನೇ ಕೊಟ್ಟಿದ್ದಾರೆ. ಅವರ ತತ್ವಗಳ ರಹಸ್ಯವನ್ನರಿತ ಭಾರತೀಯರು ಅವುಗಳನ್ನು ಆಚರಿಸಲು ಎಂದಿಗಿಂತ ಹೆಚ್ಚು ಉತ್ಸುಕರಾಗುವದು ಯುಕ್ತವಾಗಿದೆ. ಈ ಮೂಲಕ ಜಗಕ್ಕೇ ನಾವು ಮಹಾತ್ಮರು ತೋರಿದ ತತ್ವಗಳ ಮಹತ್ವವನ್ನು ಮನಗಾಣಿಸಿಕೊಡಬಹುದು.

—ಯು. ಎ. ಅಸ್ರಾಣಿ

(೯ ನೆಯ ಪುಟದಿಂದ)

ಬಹಳ ದಿನಗಳಿಂದ ಪ್ರತ್ಯಕ್ಷ ಸಂಭಾಷಣೆಗಳಲ್ಲಿ ಮತ್ತು ಪತ್ರಗಳಲ್ಲಿ ಮಾಡಲ್ಪಟ್ಟ ಉಲ್ಲೇಖಗಳ ಸಾರವನ್ನು ನಾನು ಇಲ್ಲಿ ನನ್ನ ಭಾಷೆಯಲ್ಲಿ ಕೊಟ್ಟಿದ್ದೇನೆ. ಕೆಲ ಸಂದರ್ಭಗಳಲ್ಲಿ ವಿಶಿಷ್ಟ ಉದಾಹರಣೆಗಳನ್ನೂ ಕೊಟ್ಟು ತೋರಿಸಲಾಗಿವೆ. ಇಂಥದೊಂದೇ 'ಪ್ರಾಂತ'ದಲ್ಲಿ ಈ ಬಗೆಯ ದೂರು ಇವೆಯೆಂದಲ್ಲ. ಎಲ್ಲೆಂದರೂ ಮೂರು ಕಾಂಗ್ರೆಸ ಸರಕಾರಗಳ ಮಂತ್ರಿಗಳ [illegible] ಈ ಬಗೆಯ ನೂರು ನನ್ನೆಡೆಗೆ ಬಂದಿವೆ.

ಗಾಂಧೀವಾದಿಗಳು ಆತ್ಮನಿರೀಕ್ಷಣೆ ಮಾಡಿಕೊಳ್ಳಲಿ.

—ಶಿ. ಘ. ಮ.

ಮುಂಬಯಿ

೩೦-೯-೪೮

ರೂಪರಂಗ

ವಾಸ್ತವಿಕ ಚಿತ್ರಗಳು

[illegible] ಸಾಮಾಜಿಕ [illegible]. [illegible] ಜ್ಞಾನವನ್ನು [illegible], [illegible] ವಾಸ್ತವಿಕ ಚಿತ್ರಗಳ [illegible] ಭಾರತದಲ್ಲಿ [illegible]. [illegible] ಈ ವಿಶಾಲ ಭಾರತದ ಅಸಂಖ್ಯ ಪ್ರಜಾವರ್ಗದ [illegible] ಶ್ರವಣ [illegible] ಮೂಲಕ ವಿಷಯವನ್ನು ವಿವರಿಸಬಲ್ಲ ಸಿನೆಮ ಸಮಾಜದ ವಿದ್ಯೆ, ಬುದ್ಧಿ, ಶೀಲಗಳನ್ನು ಉನ್ನತಿಗೊಳಿಸುವ ಮತ್ತು ಜ್ಞಾನವನ್ನು ಹೆಚ್ಚಿಸುವ ಕೆಲಸದಲ್ಲಿ ಅತ್ಯಂತ ಉಪಯುಕ್ತವಾಗಬಲ್ಲುದೆಂದು ಶ್ರೀ. ಪಸ್ಸಾ ಶಪ ಅವರು "ಭಾರತ ಜ್ಯೋತಿ"ಯಲ್ಲಿ ಬರೆದಿರುವುದು ಸತ್ಯವಾದ ಮಾತು. ಅವರು ಸರಕಾರವೂ ಉದ್ದಿಮೆದಾರರೂ ಈ ಕಾರ್ಯಕ್ಕೆ ಕೈಹಾಕಬೇಕೆಂದಿರುವುದಲ್ಲದೆ ಚಿತ್ರಭಂಡಾರವೊಂದನ್ನು ಸ್ಥಾಪಿಸಿ ಅದರಲ್ಲಿ ಭಾರತೀಯ ಮತ್ತು ಪರಕೀಯ ಚಿತ್ರಗಳನ್ನು ಅಗತ್ಯವಿರುವ ಸಂಸ್ಥೆಗಳು ಒಯ್ದು ಪ್ರದರ್ಶಿಸಿ ತಿರುಗಿ ತಂದುಕೊಡಲು ಅನುಕೂಲವಾಗುವಂತೆ ಸಂಗ್ರಹಿಸಿ ಇಡಬೇಕೆಂದು ಕೂಡ ಸಲಹೆ ಮಾಡಿದ್ದಾರೆ.

ಯುಕ್ತಾಯುಕ್ತ ವಿಷಯ ವಿವೇಕಕ್ಕೆ ಅಗತ್ಯವಾದ ಸಾಮಾನ್ಯ ಸಾಮಾಜಿಕ ರಾಜಕೀಯ, ನೈತಿಕ, ಶರೀರ ಮತ್ತು ಮನಃಶಾಸ್ತ್ರೀಯ ವಿಚಾರಗಳಲ್ಲದೆ ಸಿನೆಮಗಳಲ್ಲೇ ಉತ್ತಮಾಧಮ ನಿರ್ಣಯಕ ಬುದ್ಧಿ ಲಭ್ಯವಾಗಲು ಕಾರಣವಾದ ರಸವಿಮರ್ಶೆ, ಅಭಿನಯ ವಿಮರ್ಶೆಗಳ ಪುಸ್ತಕಗಳು ಕೂಡ ಮೇಲೆ ಹೇಳಿದಂತೆ ಚಿತ್ರಭಂಡಾರಗಳಲ್ಲಿ ಇಟ್ಟಿರುವುದು ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾಗುವುದು. ಪ್ರವಾಸ ಹೊರಡುವ ಚಿತ್ರಪ್ರದರ್ಶನ ಕಂಪನಿಗಳು ಹಳ್ಳಿ ಹಳ್ಳಿಗಳಲ್ಲಿ ವಾಚನಾಲಯ ಮಾಡುವುದಕ್ಕಿಂತ ಹೆಚ್ಚು ಸುಧಾರಣೆ ಕಾರ್ಯವನ್ನು ಕಡಿಮೆ ಕಾಲದಲ್ಲಿ ಮಾಡಬಲ್ಲವು. ಸಿನೆಮವೆಂದರೆ ನಾಟಕದ ಆಭಾಸ. ಆದ್ದರಿಂದ ಅದು ಕಲೆಗಳಲ್ಲಿ ಉಳಿದವುಗಳಿಗಿಂತ ಹೆಚ್ಚು ಸರ್ವಪ್ರಿಯವಾಗಬಲ್ಲುದು. ಇಂಥ ಸರ್ವಪ್ರಿಯ ಸಾಧನದ ಮೂಲಕ ರಸಾಭಾಸ ಪ್ರಕರಣಗಳನ್ನು ಪ್ರದರ್ಶಿಸಿ ಸಮಾಜದ ರಸ, ರುಚಿ, ರೀತಿ, ನೀತಿಗಳನ್ನು ಕೆಳ ಮಟ್ಟಕ್ಕಿಳಿಸುವ ಪ್ರಯತ್ನವನ್ನು ನಿಲ್ಲಿಸಿ ಅವರು ಗಂಭೀರವಾದ ನಾಗರಿಕ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಹೃದಯಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಅನುವಾಗುವ ಆರೋಗ್ಯಕರವೂ ತಿಳಿವಳಿಕೆ ಕೊಡುವಂಥವೂ ಆದ ವಾಸ್ತವಿಕ ಚಿತ್ರಗಳ ನಿರ್ಮಿತಿಯ ಅವಶ್ಯಕತೆ ಎಂದಿಗಿಂತ ಇಂದು ಹೆಚ್ಚು.

— ರೂಪಸುಂದರ

ಮಕ್ಕಳಿಗಾಗಿ ಚಿತ್ರ

ಕಲ್ಕತ್ತದ ಅರೋರಾ ಫಿಲ್ಮ್ ಕಾರ್ಪೊರೇಶನ್ನಿನವರು ಮಕ್ಕಳಿಗಾಗಿ ಇತ್ತೀಚೆಗೆ "ಜಯತು ನೇತಾಜಿ" ಮತ್ತು "ರವೀಂದ್ರನಾಥ" ಎಂಬ ಎರಡು ಐತಿಹಾಸಿಕ ಚಿತ್ರಗಳನ್ನು ತಯಾರಿಸಿದ್ದಾರೆಂದು ತಿಳಿಯುತ್ತದೆ. ಇದು ಬಹಳ ಸ್ತುತ್ಯವಾದ ಕೆಲಸ. ಇಂಥ ಚಿತ್ರಗಳನ್ನು ಮಕ್ಕಳಿಗಾಗಿ ತಯಾರಿಸಲು ಇತರ ಕಂಪನಿಯವರೂ ಉತ್ಸಾಹ ವಹಿಸುವುದು ರಾಷ್ಟ್ರದ ಭಾವೀ ಜನಾಂಗವೆನಿಸುವ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಅತ್ಯಂತ ಅಗತ್ಯವಾದುದು. "ಜಾತೀರ್ ಭವಿಷ್ಯತ್" (ರಾಷ್ಟ್ರದ ಭವಿಷ್ಯ) ಎಂಬ ಹೊಸ ಚಿತ್ರವನ್ನು ತಯಾರಿಸಿದ್ದು ಅದೂ ಬಹಳ ಸೊಗಸಾಗಿದೆಯೆಂದು ಹೇಳಲಾಗಿದೆ. ಇವು ರಾಷ್ಟ್ರ ಕಟ್ಟಲು ನೆರವಾಗುವ ಮಹತ್ವವುಳ್ಳವೆಂದು ಅವನ್ನು ನೋಡಿದ ಪಶ್ಚಿಮ ಬಂಗಾಲದ ಗವರ್ನರರಾದ ಡಾ. ಕೆ. ಎನ್. ಕಟ್ಜು ಪ್ರಶಂಸಿಸಿದರೆಂದು ತಿಳಿಯುತ್ತದೆ. ಇಂಥ ಚಿತ್ರಗಳನ್ನು ಕನ್ನಡ ಕಂಪನಿಗಳು ತಯಾರಿಸುವ ದಿನವನ್ನು ನಾವು ನೋಡುವುದು "ಕರಿಯಮಾಸೆ"ಯ ದಿನವೇ ಸೈ ಎಂದು ಈಗಿನ ಸ್ಥಿತಿಯನ್ನು ಕಂಡ ಯಾರಾದರೂ ಹೇಳದೆ ಗತ್ಯಂತರವಿಲ್ಲ.

"ನೆಹರು ಭಾರತವನ್ನು ಕಾಯುತ್ತಾರೆ"

ಮೊನ್ನೆ ಮುಂಬಯಿಯ ಚೌಪಾಟಿಯಲ್ಲಿ 'ದಿಲ್ಲಿ' ಎಂಬ ನಮ್ಮ ಪ್ರಥಮ ಯುದ್ಧ ನೌಕೆ [illegible] ಮಾಡಿದ ಇತಿಹಾಸಪ್ರಸಿದ್ಧ ಭಾಷಣವನ್ನೊಳಗೊಂಡ ಒಂದು ಸಿನೆಮವನ್ನು ಮೋತಿವಾನೆ [illegible] ಮತ್ತು ಸಿನೆಮ ಫಿಲ್ಮ್ ಸರ್ವಿಸಿನ ಶ್ರೀ ದಿವಾಕರರು ಸೇರಿ ತಯಾರಿಸಿದ್ದಾರೆಂದು ಸುದ್ದಿ. ಇದನ್ನು ಮುಂಬಯಿಯ ಮುಖ್ಯ ಮುಖ್ಯ ರೂಪರಂಗಗಳಲ್ಲಿ ಪ್ರದರ್ಶಿಸಲಾಗುತ್ತಿದೆ.



ಅಂಬಿಕಾ ಫಿಲ್ಮ್‌ಸ್‌ನವರ "ದಿಲ್ ಕಿ ಅವಾಜ್" ಎಂಬ ಚಿತ್ರಪಟದಲ್ಲಿ ದಿಲೀಪಕುಮಾರ ಮತ್ತು ನಲಿನೀ ಜಯವಂತ

ಸಿನೆಮ ಕಾರ್ಯಾಲಯದಲ್ಲಿ ಸಂಬಳ

ಮದ್ರಾಸಿನ ಲೇಬರ ಕಮಿಶನರರು ಸಿನೆಮದ ಕೆಲಸಗಾರರಿಗೆ ಈ ರೀತಿ ಕನಿಷ್ಠ ಸಂಬಳವನ್ನು ನಿರ್ಧರಿಸಿದ್ದಾರೆ:

ಪ್ರತಿಯೊಂದೆಡೆಯೂ ಮುಖ್ಯ ನೇಪಥ್ಯವಿಶಾರದನಿಗೆ (Make-up man) ೧೦೦–೫–೨೦೦ ಪರಮಾವಧಿ ಸಂಬಳ. ಪ್ರಯೋಗ ಶಾಲೆಯ ಮುಖ್ಯಸ್ಥನಿಗೂ ಇಷ್ಟೇ ಸಂಬಳ. ಕನಿಷ್ಠವೆಂದರೆ ೨೦–೧–೨೫ ರೂಪಾಯಿಗಳು; ಕಸಬಿಲ್ಲದವರಿಗೆ ಈ ಸಂಬಳ. ಕ್ಯಾಮರಾಧಾರಿ ಮತ್ತು ರಿಕಾರ್ಡುಗಾರರಿಗೆ ೬೦. ಕಾರ್ಯಾಲಯದ ಮುಖ್ಯ ಕಾರಕೂನನಿಗೆ ೪೦; ಬಡಗಿಗೆ ತಿಂಗಳಿಗೆ ೯೦. ೨೦ ರೂಪಾಯಿ ತುಟ್ಟಿಭತ್ತೆ ಎಲ್ಲರಿಗೂ ಕೊಡಲಾಗುತ್ತದೆ. ಇದು ತಿಂಗಳಿಗೆ ೪೦ ಕ್ಕಿಂತ ಕಡಿಮೆ ಬರುವವರಿಗೆ. ಹೆಚ್ಚಿನವರಿಗೆ ತಿಂಗಳಿಗೆ [illegible]

ಮುಂಬಯಿಯ ಸ್ಟುಡಿಯೋಗಳಲ್ಲಿ ಕೆಲವು ಕ್ಯಾಮರಾಧಾರಿಗಳು ತಿಂಗಳಿಗೆ ೪೦೦ ದುಡಿಯುತ್ತಾರೆ. ಕೆಲವರಂತೂ ೧–೧॥ ಸಾವಿರ ಗಳಿಸುತ್ತಾರೆ; ರಿಕಾರ್ಡಿಸ್ಟರೂ ಹಾಗೇ. ಸಾಮಾನ್ಯ ಪ್ರಯೋಗಶಾಲಾ ಮುಖ್ಯಸ್ಥ ೪೦೦–೫೦೦ ನ್ನು ತಿಂಗಳೊಂದಕ್ಕೆ ಸಂಪಾದಿಸುತ್ತಾನೆ. ಮುಖ್ಯ ನೇಪಥ್ಯವಿಶಾರದ ೩೦೦. ಅವನ ಕೈಕೆಳಗಿನವರು ೧೦೦–೧೫೦. ಕೂಲಿಗಳು ೬೦–೧೦೦ ಮತ್ತು ಕಸಬಿಲ್ಲದವರು ೬೦ ನ್ನು ಗಳಿಸುತ್ತಾರೆ. ಇದನ್ನು ನೋಡಿದರೆ ಮದ್ರಾಸ್ ಗವರ್ನರರ ಸಲಹೆ ಬಹಳ ಅಧೋಗತಿಯದಾಗಿ ತೋರುವುದೆಂದು "ಫಿಲ್ಮಿಂಡಿಯಾ" ಅಭಿಪ್ರಾಯ ಪಡುತ್ತದೆ.

ನಮ್ಮ ರಾಷ್ಟ್ರದ ಜನನ

"ನಮ್ಮ ರಾಷ್ಟ್ರದ ಜನನ" ಎಂಬ ಚಿತ್ರವನ್ನು ಹಿಮಾಂಶು ಕೇಸರಕೊಡಿ ಎಂಬ ಕಲಾವಿದೆ ನಿರ್ಮಿಸಿದ್ದಾಳೆ. ಇದರಲ್ಲಿ ನೃತ್ಯದ ಮೂಲಕ ಅಮರರಾದ ಮಹಾತ್ಮರ ಜೀವನ ಮತ್ತು ಕಾರ್ಯವನ್ನು ಚಿತ್ರಿಸುವ ಪ್ರಯತ್ನ ನಡೆದಿದೆ. ಅದರಲ್ಲಿಯ ಸಾಹಿತ್ಯಭಾಗ ಬಹಳ ಹೃದಯಸ್ಪರ್ಶಿಯಾಗಿದೆ ಎಂದು ಹೇಳಲಾಗಿದೆ.

× × ×

ಮುಂಬಯಿಯ ಇಂಪೀರಿಯಲ್ ಟಾಕೀಸಿನಲ್ಲಿ "ಸ್ಟಾರ್ ಕೀ ಜೇಬ್" ಎಂಬ [illegible] ಚಿತ್ರ ಪ್ರದರ್ಶಿಸಲ್ಪಡುತ್ತಿದೆ.

ಬೋರ್ಡುಗಳು

[illegible] ಬೋರ್ಡನ್ನು ನೋಡಿ, ಹಳೆ, ಅದನ್ನು [illegible] ರಸ್ತೆಯಲ್ಲೇ ನಡೆಯುತ್ತಿದ್ದವು ಮೊನ್ನೆ ನಾನು ಕೈಲು ಸ್ಟೇಶನ್ನಿಗೆ ಹೋದಾಗ! ಎಡಮಗ್ಗುಲಲ್ಲೇ ಹೋಗಿರಿ ಎಂಬ ಬೋರ್ಡನ್ನು ನೋಡಿದಾಗಲೂ ಅವರು [illegible] ಭಾವಿಸಿದರು. ಹೊರಕ್ಕೆ ಈ ಜನ ಹೊತ್ತ ಕನ್ನಡವನ್ನು ಓದುವ ಪಿರಿಗನ್ನರ ಪಾಡಲ್ಲಿ ಬೋರ್ಡುಗಳಿಂದಾಗುವ ಅನಾನುಕೂಲ ತಪ್ಪಿಲ್ಲ ಎಂದುಕೊಳುತ್ತ ನಾನು ಜರುಬಿದಲ್ಲಿ ಕಾಲು ಹಾಕಿದೆ. ದಾರಿಯಲ್ಲಿ ಬಿ. ಆರ್. ಪಿ ಬೋರ್ಡೊಂದು ಕಣ್ಣಿಗೆ ಬಿತ್ತು. ಯುದ್ಧಕಾಲದಲ್ಲಿ ಗಡಂಗುಗಳನ್ನು ತೋಡಿ ಅವುಗಳ ಮಗ್ಗುಲಲ್ಲಿ ಯಾವುದೋ ಕಾಂಕ್ರೀಟ ಕಂಪನಿಯವರ ಸಹಾಯದಿಂದ ಮುನಸಿಪಾಲಿಟಿಯವರು ನಿಲ್ಲಿಸಿದ ಸೂಚನಸ್ತಂಭ, ಅದು. ಮತ್ತೊಂದು ಯುದ್ಧಕ್ಕಾಗಿ ಕಾದಿದೆ; ಇನ್ನೂ ಅಲ್ಲಿಂದ ಹತ್ತು ಮಾರು ದೂರ ಸಾಗುತ್ತಲೂ "ಶೀಪನ್ನ ಉದ್ಯಾನವನ" ಎಂಬ ಬೋರ್ಡನ್ನು ನೋಡಿದೆ. ಕಾಲುಗೋಡೆ, ನಾಲ್ಕೈದು ಗಾರ್ಡಭಗಳು, ಮುರಿದು ಬಿದ್ದ ಮೂರು ಶಿಲಾಸನ, ನೇತಾಡುತ್ತಿದ್ದ ಮುಳ್ಳುಬೇಲಿ, ಇದೇ ಉದ್ಯಾನ, ಅದರ ಎದುರು ಭಾಗದಲ್ಲೇ "ಧರ್ಮರಾಯನ ಕೆರೆ ರೋಡ್" ಎಂಬ ಬೋರ್ಡು. ಧರ್ಮರಾಯನ ಕೆರೆಯನ್ನು ಬತ್ತಿಸಿ, ಅದರ ತಳದಲ್ಲಿ ಆಟದ ಮೈದಾನ ರಚಿಸಿ ಆರು ವರ್ಷಗಳಾದವು. ಅಲ್ಲದೆ ಗಾಂಧಿ ಚಳವಳಿ ಪ್ರಾರಂಭವಾದಾಗಿನಿಂದ ಆ ಸ್ಥಳಕ್ಕೆ ನರಿಮನ್ ಪಾರ್ಕ್ ಎಂದೂ ನರಿಮನ್ನರ ಅಧಃಪತನವಾದ ನಂತರ, ಸುಭಾಷ್ ಪಾರ್ಕ್ ಎಂತಲೂ ಸುಭಾಷ್‌ರವರ ಬಹಿಷ್ಕಾರದನಂತರ ನೆಹರೂ ಪಾರ್ಕ್ ಎಂದೂ, ಈಚೆಗೆ ಆಜಾದ್ (ಎರಡರ್ಥದಲ್ಲಿ) ಮೈದಾನವೆಂದೂ ಹೆಸರು ಹಸುರಿಸಿ ಲಿಖಿಸಿ ಮುಸ್ಸಿಪದೆ. ಮುನಸಿಪಲ್ ಸದಸ್ಯರೂ ಕೂಡ ತಮ್ಮ ಭಾಷಣಗಳ ಪ್ರಾರಂಭದಲ್ಲಿ 'ಆಜಾದ ಮೈದಾನ'ದ ಪ್ರಚಂಡ ಪ್ರಜಾಸ್ತೋಮಗಳೇ' ಎಂದು ಸಂಬೋಧಿಸಹತ್ತಿ ಆಗಲೇ ಎರಡು ಸಂವತ್ಸರಗಳಾದವು. ಆದರೂ 'ಧರ್ಮರಾಯನ ಕೆರೆ ರೋಡ್' ಎಂಬ ಬೋರ್ಡ ಮಾತ್ರ ಇತಿಹಾಸವನ್ನೆಲ್ಲ ಮೂದಲಿಸಿ ಕೆರೆಯ ನೀರನ್ನು ಕೆರೆಗೆ ಚೆಲ್ಲಿ, ಇಂದಿಗೂ ರಾರಾಜಿಸುತ್ತಿದೆ.

"ಹೊರಕ್ಕೆ ದಾರಿ" ಎಂಬ ಬೋರ್ಡು ತೂಗಾಡುತ್ತಿದ್ದ ಕಮಾನಿನೊಳಗಿಂದ ನಾನು ಸ್ಟೇಶನ್ನಿನೊಳಕ್ಕೆ ನುಗ್ಗಿದೆ. ಅಲ್ಲೇ ಪಕ್ಕದಲ್ಲಿ ಅಭ್ಯರ್ಥಿಗಳ ಮೈಭಾರವೆಷ್ಟೆಂದು ತೂಗಿ ಹೇಳುವ ಯಂತ್ರವೊಂದಿತ್ತು. "[illegible] ತೂಕ!" ಎಂಬ ಒಂದು ಪ್ರಶ್ನೆಯನ್ನು ಅದರ ಹಣೆಯ ಮೇಲೆ ಬರೆದಿತ್ತಾದರೂ ಅದರ ಮುಖಕ್ಕೆದುರಾಗಿ ಯಾರೋ ಒಂದು ಕಾಗದವನ್ನಂಟಿಸಿ "ಕೆಟ್ಟುಹೋಗಿದೆ" ಎಂದು ಬರೆದಿದ್ದರು. "ಬೆಳಿಗ್ಗೆ ೩ ರಿಂದ ರಾತ್ರಿ ೧೧ ರ ವರೆಗೆ ಬುಕಿಂಗ್ ಆಫೀಸು ತೆರೆದಿರುತ್ತದೆ" ಎಂಬ ಬೋರ್ಡ್ [illegible] ಮುಚ್ಚಿ, ಗುಮಾಸ್ತರು ಒಳಗೆ ಹರಟೆ ಹೊಡೆಯುತ್ತಿದ್ದರು. ರೈಲು ಹೊರಡುವ [illegible] ಕಾಲುಗಂಟೆ ಮುಂಚಿತವಾಗಿ ಅವನ್ನು ತೆರೆದರೆ ಸಾಕೆಂದು ಅವರು ಅನುಭವದಿಂದ ಕಂಡುಕೊಂಡಿದ್ದರಂತೆ.

ಸ್ಟೇಶನ್ನಿನಲ್ಲಿ [illegible]

[illegible]

ಮಹಿಳಾ ಲೋಕ

ಮದುವೆ

ಮದುವೆಯು ಒಂದು [illegible] ಅಜ್ಞಾನ [illegible] ನವ ಎನ್ನುವ [illegible] ಮದುವೆಯು [illegible] ಮೂರ್ಖರಿಗೆ [illegible] ಬೀರುವುದಿಲ್ಲ. ವಿಷಯದ ಅಜ್ಞಾನ [illegible] ನಾವು ಹೊಸ ಸಂಗಾತಿಯ [illegible] ಮತ್ತು ಅದಕ್ಕಿಂತ ಮಹತ್ವದ್ದೆನಿಸುವ [illegible] ಬಾಳುವೆ ಮಾಡುವ ಅಂಶವನ್ನು [illegible] ಮದುವೆಯಾದ ಮೇಲೆ ಪ್ರಥಮ [illegible] ವೈರಸ್ಯ ಉಂಟಾಗುವಂತೆ [illegible] ತಮ್ಮ [illegible] ಧರ್ಮ [illegible] ಸಹಾಯವಿಲ್ಲದೆ ನಾವು ಅಸ್ಪ [illegible] ಉದ್ಘಾಟನದಲ್ಲಿ ಇಷ್ಟು ಸರ್ವರಿಗೂ [illegible] ತರುತ್ತೇವೆ ಎಂಬುದನ್ನು ಅಮೇ [illegible] ವೈಜ್ಞಾನಿಕವಾಗಿ ಶೋಧಿಸಿ [illegible].

ಮದುವೆಯ ಪಾವಿತ್ರ್ಯ, ನೈತಿಕಹಿತ, [illegible] ನಾಗರಿಕ ಮಾರ್ಗ, ರಸಿಕತೆ ಮತ್ತು ಅರಸಿಕತೆಗಳಲ್ಲಿಯ ಭೇದ, [illegible] ಸ್ಥಾನಾಸ್ಥಾನವಿವೇಕ ಇವೆಲ್ಲವರ [illegible] ಸಮ್ಮಂತಿಯೇ ಹೊಸಬ [illegible] ತನ್ನಮುಟ್ಟಿಗೆ. ಅವನು ವರ್ತಿ [illegible] ಅದು ಸಾಲದೆಂದು ನಮಗೂ [illegible] ಸ್ಥಿತಿಯಲ್ಲಿ ನಾವು ಇಂದಿನ ವರೆಗೆ ಇರುವುದು ಹಾಸ್ಯಾಸ್ಪದವಾಗಿದೆ. ಇಂಥ [illegible] ಹುಟ್ಟಿ ನಮ್ಮ [illegible] ದುರಾಚಾರಿಗಳು ಇಲ್ಲವೆ ಸನ್ಯಾಸಿ [illegible] ಆಗುವುದನ್ನು ಮತ್ತು ನಾವು ಗುಪ್ತ ಪಾಪಾ [illegible] ಇಲ್ಲವೆ ವ್ಯಕ್ತನರಕಾನುಭವಿಗಳೂ ಎನಿ [illegible] ಹಲವಾರು ಕಡೆ ಕಾಣುತ್ತೇವೆ. ಈ ದೋಷವನ್ನು ಪರಿಹರಿಸಲು ಡಾಕ್ಟರ್ [illegible] ಮೊದಲು ಕೆಲವಂಶವನ್ನೂ [illegible] ಕೆಲವಂಶವನ್ನೂ ನಮ್ಮ [illegible].

ಮೊದಲನೆಯದಾಗಿ, Lack of initiative [illegible] ನಡತೆಯಲ್ಲಿ ಸಮಾನ ಭಾಗಿ [illegible] ನಾವು ರಸಿಕತೆಯಲ್ಲಿ ಮುಂದು [illegible] ಇದಲು ಅಂಜುವುದೇ ಕಾರಣ. ರಸಿಕತೆ ಮತ್ತು ಅಶ್ಲೀಲ ವ್ಯವಹಾರದ ಬಗ್ಗೆ [illegible] ಭೇದಜ್ಞಾನವಿಲ್ಲದೆ, ಒಂದೇ ಎಲ್ಲ ಅಶ್ಲೀಲವೆಂದು ಇಲ್ಲವೆ ಎಲ್ಲ ರಸಿಕತೆಯೆಂದು [illegible] ಇಲ್ಲವೆ ಅಪರೂಪ [illegible] ಪ್ರವೃತ್ತಿಯನ್ನು ಅಯಸ್ಕಾಂತ ಪಡೆಯುತ್ತೇವೆ [illegible] ಗೊಂಜೆ [illegible] (ಪರಸ್ಪರರಲ್ಲಿರುವ ಪ್ರೇಮ ವ್ಯವಹಾರ [illegible]) [illegible] ತಣ್ಣಗೆ [illegible] ಸಮರ್ಪಣವಾದುದು [illegible] ಪ್ರೇಮವು ಕೊಡುವ [illegible] ಅದಕ್ಕೆ ಬದಲಾಗಿ ತೆಗೆದು [illegible] ಪ್ರೇಮವನ್ನೇ ಎಂಬ [illegible] ನಮ್ಮಲ್ಲಿ ಬಹಳ ಜನ ಸಹೋದರಿಯ [illegible]. [illegible] ಹೇಗೆ?

ವಿಶೇಷ: ನಮ್ಮ ಹಿಟ್ಟಿನಿಗರು ಸ್ವಚ್ಛಂದ [illegible] ತಮ್ಮ ಮೇಲಿನ [illegible] ಶಾರೀರಿಕವಾಗಿ [illegible] ಆಧಾರವಾಗಿ [illegible] ಅವರಿಬ್ಬರೂ [illegible] ಜವಾಬ್ದಾರಿ [illegible] ಆಡುವುದಲ್ಲಿ [illegible] ವಿಧಾನವನ್ನೇ [illegible] ಸಮಾಜಕ್ಕೂ [illegible] ಅನರ್ಥಕ [illegible].

[illegible] ಪ್ರೇಮ ಹುಟ್ಟುವುದು ಪರಸ್ಪರರ [illegible] ಪರಸ್ಪರರಲ್ಲಿ [illegible] ರಸಿಕತೆ ಮತ್ತು ಅಭಿರುಚಿಗಳ [illegible] ಅವನ್ನೇ ಬೆಳೆಸಿಕೊಳ್ಳುವುದು ಅತ್ಯವಶ್ಯಕ. ಇದು ಸಾಧ್ಯ ವಾಯಿತೆಂದರೆ ಎರಡು ವ್ಯಕ್ತಿಗಳೂ ಪರಸ್ಪರರ ಅನೇಕ ವ್ಯವಹಾರಗಳಲ್ಲಿ ಸಮವಾಗಿ ಭಾಗಿ ಗಳಾಗಿ ಪರಸ್ಪರ ಪ್ರೋತ್ಸಾಹಕರಾಗಿ ಹರ್ಷ ದಿಂದ ಬಾಳಬಲ್ಲರು. ಮೂರನೆಯದು ಈ ಮೈತ್ರಿಯನ್ನು ಸ್ಥಿರೀಕರಿಸಿಕೊಳ್ಳುವ ದೃಢ ಬುದ್ಧಿ. ಸ್ಥಿರತೆಯಲ್ಲಿರುವ ಸ್ಥಿರಾನಂದ ಅಸ್ಥಿರ ತೆಯಲ್ಲೆಲ್ಲಿ ಬಂತು? ಇದಕ್ಕೆ ನಾವು ದೇವ, ಧರ್ಮ, ಪಾತಿವ್ರತ್ಯಗಳ ಆಧಾರ ಕೊಡಬೇಕಾ ಗಿಲ್ಲ ಕೇವಲ ನಮ್ಮ ಲಾಭ ನಷ್ಟ ಬುದ್ಧಿ ಯನ್ನು ಬಳಸಿದರೇ ಸಾಕು. ನಮಗೆ ಸ್ಥಿರಮೈ ತ್ರಿಯಿಂದ ಆಗುವ ನಿಜಸುಖ ಸಂಚಾರಿ ಸ್ನೇಹ ದಿಂದ ಆಗದು ಎಂಬುದರಿಯಬಹುದು. ನಾಲ್ಕನೆಯದಾಗಿ ಪ್ರೇಮವು ಶಕ್ತವಾಗಲು ಪರಸ್ಪರರು ಅನ್ಯೋನ್ಯ ಸುಖಕ್ಕಾಗಿ ತಮ್ಮ ಆಯುಷ್ಯವನ್ನೇ ಮೀಸ ಲಿಡುವ ಸದಿಚ್ಛೆಯನ್ನು ಬಲಪಡಿಸಿಕೊಂಡು ಆ ಕರ್ತವ್ಯವನ್ನು ತಮಗಾಗಿ ತಾವೇ ನಡೆ ಸಲು ಪಣತೊಡಬೇಕು. ಪರಸ್ಪರರ ದೋಷ ಗಳನ್ನು ಒಪ್ಪಿಕೊಂಡರಷ್ಟೇ ಸಾಲದು ಅವನ್ನು ಕಾರ್ಯತಃ ಸುಧಾರಿಸಿಕೊಳ್ಳಲು ಕಲಿಯ ಬೇಕು. ದೇಹಹಿಂಸೆಗಿಂತ ಮಾನಸಿಕ ಹಿಂಸೆ ಕ್ರೂರತರವಾದುದು. ಗಂಡನು ಹೊಡೆದರೆ ಆವ ನನ್ನು ಕ್ರೂರಿ ಎಂದು ಕೀಳುಗಳೆವವರು ನಮ್ಮಲ್ಲಿ ಬಹಳ ಜನ ಸಿಗುವರು; ಆದರೆ ಅಂಥ ಶಾರೀ ರಿಕ ಶಿಕ್ಷೆ ಕೊಡುವ ಪ್ರವೃತ್ತಿ ಅವನಲ್ಲಿ ಉಂಟಾ ಗುವಷ್ಟು ಅರಸಿಕ, ಅಜ್ಞಾನಜನ್ಯ ಮತ್ತು ಮೂರ್ಖತೆಯ ನಡತೆಯನ್ನು ಪ್ರದರ್ಶಿಸಿ ಅವನಿಗೆ ಶತ ಗುಣ ಹೆಚ್ಚೆನಿಸುವ ಮಾನಸಿಕ ಹಿಂಸೆಯನ್ನು ತಾವು ಕೊಟ್ಟಿದ್ದನ್ನು ಯಾವಳೂ ತಿಳಿದುಕೊಳ್ಳುವುದೇ ಇಲ್ಲ.

ಈ ದೃಷ್ಟಿಯಿಂದ ನಮ್ಮ ತಾಯಂದಿರು ವಿಚಾರ ಮಾಡಿ ಮದುವೆಗೆ ಬೆಳೆದು ನಿಂತ ಹೆಣ್ಣು ಮಕ್ಕಳಿಗೆ ಮದುವೆಯ ಪಾಲಿನ ಮಹ ತ್ವವನ್ನೂ ಪ್ರೇಮದ ನಡಾವಳಿಕೆಯ ವಿವರ ವನ್ನೂ ಪತ್ನಿಯ ಹೊಣೆ ಮತ್ತು ಕರ್ತವ್ಯಗಳ ಅನುಭವವನ್ನೂ ಪ್ರತಿ ದಿನ ಅರ್ಧ ತಾಸಾದರೂ ಕುಳಿತು ಹೇಳಿ ಕೊಡುವುದು (ಮಧ್ಯಮ ವರ್ಗ ದವರಲ್ಲಿ ವಿಶೇಷತಃ) ಅತ್ಯಗತ್ಯ. ಅವರು ತಮ್ಮ ಗಂಡು ಮಕ್ಕಳಿಗಾದರೂ ಅಷ್ಟೇ; ತಮ್ಮ ಅನುಭವದಿಂದ ತಿಳಿದ ಸತ್ಯಾಂಶವನ್ನು ಅರುಹಿ ಅತನಲ್ಲಿಯೂ ಮಾನವೀಯ ಜೀವನದಲ್ಲಿ ಅವನ ಬುದ್ಧಿ, ಭಾವ, ನಡತೆ, ಕರ್ತವ್ಯಗಳನ್ನು ರೂಪಿಸಲು ಪ್ರಯತ್ನಿಸುವುದು ಅನಿವಾರ್ಯ ವಾದುದು. ಇವರ ಹೊಣೆ ತಂದೆಗಿಂತ ಹೆಚ್ಚಾಗಿ ಮಕ್ಕಳಲ್ಲಿ ಸಲಿಗೆಯಿರುವ ತಾಯಿ ಯದೇ ಎಂಬುದನ್ನು ಇಲ್ಲಿ ಒತ್ತಿ ಹೇಳಬೇಕಾ ಗಿದೆ. ಮಹಿಳಾ ಸಮಾಜದ ಕಾರ್ಯಗಳಲ್ಲಿ ಭಾಗವಹಿಸುವ ನಮ್ಮ ಅಕ್ಕತಂಗಿಯರು ಇತ್ತ ಗಮನಿಸುವುದು ಸ್ತ್ರೀ ಯೋಗಾಭಿವೃದ್ಧಿಗೂ ನಾಡಿನ ಒಳಿತಿಗೂ ಬಹಳ ಪ್ರಯೋಜನಕಾರಿ ಯಾದುದು. —ಓರಿಯಕ್ಕ



ಡಾಕ್‌ಲೆಂಡ್ ಸಮಾರಂಭದಲ್ಲಿ ಆಂಗ್ಲ ರಾಜಕುಮಾರಿ ಮಾರ್ಗರೆಟ್

ಸ್ತ್ರೀಯರ ಸಾತ್ವಿಕ ಸಂತಾಪ

ಪಾಶ್ಚಾತ್ಯರ [illegible] ಹೆಂಗಸಿಗೆ [illegible] ನೋಡಿದರೂ ಹೆಂಗಸಿಗೆ [illegible] ಭಾವ ವನ್ನು ಬೋಧಿಸುವ, ಪೋಷಿಸುವ ಮತ್ತು ತನ್ಮೂಲಕ ವ್ಯವಹಾರ ಪ್ರಪಂಚದ ಗಂಡಸರ ಮನವನ್ನು ಸೆಳೆವ ದುರ್ಮಾರ್ಗಕ್ಕೆ ಹೇಸಿ [illegible] ಗಿಬ್ಬನ್ (ನ್ಯೂಯಾರ್ಕಿನ [illegible] ಜಾಹೀರಾತಿನ ನಿರ್ದೇಶ ಕರು) ಆಂಗ್ಲ ಲೇಖಕಿ ಡೊರೊತಿ ಸೇಯರ್ಸ್ಸಳ ಲೇಖನದ ಸಾರವನ್ನು ಕೆಳಗಿನಂತೆ ಬರೆಯು ತ್ತಾರೆ:

“ಪ್ರತಿಕ್ಷಣವೂ ಗಂಡುತನವನ್ನೆತ್ತಿ ಉಪ ದೇಶಿಸಲು ತೊಡಗಿದರೆ ತನಗೆ ಹೇಗಾಗುತ್ತದೆ ಎಂಬುದನ್ನು ಬಹುಶಃ ಯಾವ ಗಂಡಸೂ ಕಲ್ಪಿಸಿರಲಿಕ್ಕಿಲ್ಲ. ಅವನ ಮಾತುಕತೆ, ನಡೆ ನುಡಿ, ವಿಚಾರ, ವ್ಯವಹಾರ ಎಲ್ಲವನ್ನೂ ಗಂಡು ತನದ ಹಿನ್ನೆಲೆಯಲ್ಲೇ ದೆಲೆ ಕಟ್ಟುತ್ತ ಹೋದರೆ ತನ್ನ ಮನಃಸ್ಥಿತಿ ಯಾವರೀತಿಯ ದಾಗಬಹುದೆಂಬುದನ್ನು ಗಂಡಸು ಯೋಚಿ ಸಿರಲಿಕ್ಕಿಲ್ಲ. ತನ್ನ ಸರ್ವವೂ ಹೆಣ್ಣಿನ ಒಪ್ಪಿಗೆ ಯನ್ನು ಪಡೆದಲ್ಲದೆ ಸಾರ್ಥಕವಾಗಲಾರದು ಎಂಬ ತಿಳುವಳಿಕೆಯನ್ನು ತಲೆಯೊಳಗೆ ಹೇರಿ ತುಂಬಿದರೆ ತನಗೆ ಹೇಗೆನಿಸಬಹುದೆಂಬುದನ್ನು ತರ್ಕಿಸಿರಲಿಕ್ಕಿಲ್ಲ. ಹಾಗೆ ತರ್ಕಿಸಿದ್ದರೆ ಬಹು ಸಂಖ್ಯೆ ಜಾಹೀರಾತುದಾರರಾದ [illegible] ಪ್ರತಿಯೊಂದರಲ್ಲೂ ಹೆಣ್ಣಿನ ಚಂದ ಹೆಚ್ಚ ಬೇಕಾದರೆ ಹೀಗೆ ಮಾಡಬೇಕು, ಗಂಡನನ್ನು ಆಕರ್ಷಿಸಲು ಇಂಥ ದ್ರವ್ಯಗಳಿಂದ ಚರ್ಮ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಬೇಕು, ಇಂಥಿಂಥ ಉಡಿಗೆತೊಡಿಗೆಗಳಿಂದ ಇಂಥಿಂಥ ಬಗೆಯಲ್ಲಿ ದೇಹ ಭಾಗಗಳನ್ನು ಬೆಳಕಿಗೊಡ್ಡ ಬೇಕು ಎಂದು ಸ್ಪಷ್ಟಾಸ್ಪಷ್ಟವಾಗಿ ಹೊಳೆವ ವಾಕ್ಯ, ಚಿತ್ರ, ತರ್ಕಗಳಿಂದ ವಿದ್ಯಾವತಿಯ ರಿಗೆ ಬೇಸರ ಹುಟ್ಟಿಸುವಂತೆ ಮಾಡುತ್ತಿದ್ದಿಲ್ಲ.

ಹಗಲೂ ರಾತ್ರಿಯೂ ಒಬ್ಬನಿಗೆ ನೀನು ನಿನ್ನ ವಳನ್ನು ಹೀಗೆ ಅತ್ಯುತ್ಸಾಹದ ಪ್ರೇಮಪ್ರದ ರ್ಶನದಿಂದ ಒಲಿಸಿಕೊಳ್ಳಬೇಕು, ಅತಿ ಸೌಮ್ಯ ಸ್ವಭಾವದ ತಂದೆಯಾಗಿ ಬಾಳಬೇಕು ಎಂದು ಹೇಳುತ್ತ ಹೋದರೆ ಹೇಗಾದೀತು? ಅಕ್ಷರ ಬರೆವಾಗ ಅದಕ್ಕೆ ಗಂಡಿನ ಗಟ್ಟಿತನದ ತಲೆ ಕಟ್ಟನ್ನು ಕೊಡುವುದು ಹೇಗೆ, ಪಂಡಿತ ನಾದರೂ ಗಂಡುತನದ ಲೈಂಗಿಕ ಆಕರ್ಷಕತೆ ಯನ್ನು ಕಳೆದುಕೊಳ್ಳದಿರುವುದು ಹೇಗೆ, ರಸಾಯನಶಾಸ್ತ್ರದ ಸಂಶೋಧದಲ್ಲಿ ಕಾವು ಪ್ರಚೋದಕತೆಯನ್ನು ಬೆರಸುವುದು ಹೇಗೆ, ಇಸ್ಪೀಟಾಡುತ್ತಿರುವಾಗ ನಿರ್ವೀರ್ಯತೆಯ ಸಂಶಯ ಯಾರಿಗೂ ತಲೆದೋರದಂತೆ ನಡೆದು ಕೊಳ್ಳುವುದು ಹೇಗೆ, ಎಂದು ಮುಂತಾಗಿ ಬೋಧನೆಯ ಮೇಲೆ ಬೋಧನೆ ಬಂದರೆ ಅವನ ಮನಸ್ಸಿಗೇನೆನಿಸೀತು? “ಸಂಪೂರ್ಣತೆಗೆ ಮುಟ್ಟಿದ ರಾಜ್ಯದಲ್ಲಿ ಗಂಡಸಿನ ಸ್ಥಾನ” ಎಂಬ ಅಧ್ಯಾಯ ಒಂದು ಪುಸ್ತಕದಲ್ಲಿದ್ದರೆ, ಪತ್ರಿಕೆಯಲ್ಲಿ “ಗಂಡಸರ ಮೂಲೆ” ಎಂದು ಒಂದು ವಿಭಾಗ ಪ್ರತ್ಯೇಕವಿದ್ದರೆ, “ಗಂಡಸಿನ ಸಾಹಸ” ಎಂಬ ಶೀರ್ಷಿಕೆಯ ಕೆಳಗೆ ಸಾಮಾನ್ಯ ವಾದೊಂದು ಜಯಾಂಶವನ್ನು ಪ್ರಕಟಿಸಿದ್ದರೆ ಗಂಡಸಿಗೆ ಎಷ್ಟು ಅವಮಾನಕರವೆನಿಸೀತು? ಹಾಗೇ ಹೆಂಗಸಿಗೂ ಆಗುವದೆಂಬುದನ್ನು ಗಂಡ ಸಿಗಿಂತ ಹೊಡೆಯಲು ಹೆಂಗಸು ಕಲೆತೆಳೆದು ತಿಳಿದು ಕೊಳ್ಳಬೇಕು.”

ಹೆಂಗಸು ಹೊಗಳಿಕೆಗೆ ಮರುಳಾಗುವ ದೌರ್ಬಲ್ಯದಿಂದ ಮುಕ್ತಳಾದಾಗ ಅವಳಿಗೆ ತನ್ನನ್ನು ವ್ಯಾಪಾರ ವ್ಯವಹಾರದ ಗಂಡು ಜಗತ್ತು ಸುಬೋಧದ ಮುಸುಕಿನಲ್ಲಿ ಹೇಗೆ ಗುರ್ಬೋಧ ಕೊಟ್ಟು ಕಾಮಿನೀತ್ವವನ್ನು ಹೇಗೆ ದುರುಪಯೋಗ ಮಾಡಿಕೊಳ್ಳಲು ಕಲಿಸುವದಲ್ಲದೆ ತನ್ಮೂಲಕ ತನ್ನ ವಸ್ತು [illegible] ಎಂಬುದು ಹೊಳೆಯುತ್ತದೆ. ಇಂಥ ಅವಮಾನಕರವಾದ, ಅಸಸ್ಯವೆನಿಸುವ ಸ್ತ್ರೀ ಕಾಮುಕಾಭಾಸ್ಯ ತೋರುವ ಜಾಹೀರಾತುಗಳ ರೀತಿಗಳ ಪಾಶ್ಚಾತ್ಯ ಲೋಕದಿಂದ ನಮ್ಮ ಲ್ಲಿಗೂ ತಲೆಹಾಕುತ್ತಿವೆ ಎಂಬುದನ್ನು ಭಾರತೀಯಳು ನಾವು ಗಮನಿಸಬೇಕು ಮತ್ತು ಈಗಲೆ ಇಂಥ ಪ್ರವೃತ್ತಿಯನ್ನು ಪ್ರತಿಭಟಿಸಿ ಮರ್ಯಾ ದೆಯನ್ನು ಕಾಯ್ದುಕೊಳ್ಳಬೇಕು. ಸಿನೆಮ ತಾರೆಯರಾಗುವ ಹೆಣ್ಣುಗಳು ಹೊಗಳಿಕೆಗೆ ಬಾಯ್ದೆರೆದು ಬಿಡುವ ದೌರ್ಬಲ್ಯದಿಂದ, ತಮ್ಮ ಅಂದಚೆಂದ ಪ್ರದರ್ಶನವನ್ನು ಕಾಮುಕರು ಮೆಚ್ಚುವರೆಂಬ ಅಸದಭಿಮಾನದಿಂದ ತಮ್ಮ ಭಾವಚಿತ್ರಗಳನ್ನು ಅಶ್ಲೀಲ ರೀತಿಯಿಂದ ಪ್ರಕಟಿಸಲು ಜಾಹಿರಾತುದಾರರಿಗೆ ಅವಕಾಶ ಕೊಡುವುದು ಸ್ತ್ರೀಲೋಕಕ್ಕಷ್ಟೇ ಅಲ್ಲ, ನಾಗ ರಿಕ ಪುರುಷರಿಗೂ ಅವಮಾನಕರ ಮತ್ತು ಅಶ್ಲೀಲ ಪ್ರವೃತ್ತಿ ಪ್ರಚೋದಕ ಎನಿಸುತ್ತದೆ. “ಮುದಿಯ ಕಾಮಾನಂದಗುಟಿ!” “ನಪುಂಸಕತ್ವ ಹಾರಿ ಗುಳಿಗೆ,” “ವೀರ್ಯಸ್ತಂಭನ” ಮುಂತಾದ ಜಾಹಿರಾತುಗಳು ಕನ್ನಡ ದೊಡ್ಡ ದಾದ ದೇಶೀಯ ಪತ್ರಿಕೆಗಳಲ್ಲಿ ಪ್ರಕಟವಾಗು ವುದು ಮೇಲಿನದಕ್ಕೆ ಎದುರಾದ ಮತ್ತೊಂದು ಹುಚ್ಚಟದ ಉದಾಹರಣೆ. ಇಂಥ ದುರ್ಮಾರ್ಗ ದಿಂದ ಇಡೀ ಜನಾಂಗದ ವ್ಯಕ್ತಿತ್ವ ಹಾಳಾ ಗುವುದೆಂಬುದನ್ನು ಗಮನಿಸಿದರೆ ಯಾವ ನಾಗರಿಕ ಮಹಿಳೆ ಅಥವಾ ಮಹಾಶಯ ನಾದರೂ ಗಾಬರಿಗೊಳ್ಳದಿರನು. ಆದುದರಿಂದ ನಮ್ಮ ಸಹೋದರ ಸಹೋದರಿಯರು ಈ ಬಗ್ಗೆ ಚಳವಳ ನಡೆಸಿ ಸರಕಾರವೊಂದು ಪ್ರತಿ ಬಂಧಕ ಕಾಯಿದೆಯನ್ನು ಹೊರಡಿಸುವಂತೆ ಮಾಡಬೇಕೆಂದು ನನ್ನ ಗಂಭೀರವಾದ ಬೇಡಿಕೆ.

—ಸುಭದ್ರೆ

ಬೋರ್ಡುಗಳು

(೧೧ ನೆಯ ಪುಟದಿಂದ)

ರಿಪೋರ್ಟು ಮಾಡಿರುವದಾಗಿಯೂ ಮೇಲಿನ ಕಚೇರಿಯಿಂದ ಉತ್ತರ ಬಂದ ಕೂಡಲೇ ನನಗೆ ತಿಳಿಸುವದಾಗಿಯೂ ಹೇಳಿದರು.!

೧೦-೩೦ ರ ಗಾಡಿಗೆ ಗೆಳೆಯರೊಬ್ಬರು ಬರು ವರೆಂದೂ ಅವರನ್ನು ನಾನು ಸ್ವಾಗತಿಸಬೇಕಾ ಗಿದೆ ಎಂದೂ ನಾನು ಎ. ಎಸ್. ಎಮ್. ಗೆ ಹೇಳಿದೆ. ೧೦-೩೦ ರ ಗಾಡಿಯನ್ನು ೧೧-೪೫ಕ್ಕೆ ಬದಲಾಯಿಸಿ ಎರಡು ವಾರಗಳಾದವಲ್ಲಾ ಎಂದು ಅವರು ಬಾಯಿಬಿಟ್ಟು ಕಣ್ಣರಳಿಸಿದರು. “ಹೊರಗಿನ ಬೋರ್ಡು ನೋಡಿ” ಎಂದರು ನೋಡಿದೆ ೧೦-೪೫ ಎಂದಿತ್ತು. “ಮಡೆಯ ಮಿನಿಟ್ಟುಗಳನ್ನು ಮಾತ್ರ ಬದಲಾಯಿಸಿ! ಗಂಟೆ ಅಂಕೆಯನ್ನು ಹಾಗೆಯೇ ಬಿಟ್ಟ!” ಎಂದು ಅವರು ನಕ್ಕರು. ನನಗೆ ನಗು ಬರ ಲಿಲ್ಲ.

ಕಿಸೆಗೆ ಕರವಸ್ತ್ರಕ್ಕೋಸ್ಕರ ಕೈ ಇಳಿಸಿದೆ. ಕರವಸ್ತ್ರ ಯಾರಿಗೋ ಕರಗತವಾಗಿತ್ತು. ಜೊತೆಗೆ, ಐದು ರೂಪಾಯಿ ನೋಟೊಂದೂ ಸ್ವಾಹಾ! ಪರಮಾತ್ಮಾ ಎಂದು ಆಕಾಶದ ಕಡೆ ಮುಖವನ್ನೆತ್ತಿದೆ. ಅಲ್ಲೊಂದು ಬೋರ್ಡಿತ್ತು. “ಕಿಸೆ ಕಳ್ಳರಿದ್ದಾರೆ ಎಚ್ಚರಿಕೆ” ಎಂದು ಇಂಗ್ಲೀಷಿನಲ್ಲಿ ಬರೆದಿತ್ತು “ದೊಂಗ ಲುನ್ನಾರು, ಜಾಗ್ರತ” ಎಂದೂ ಸೇರಿಸಿತ್ತು. ಕಳ್ಳರು! ಎಚ್ಚರಿಕೆ” ಎಂಬದನ್ನೂ ಬರೆದಿ ದ್ದರು.” “ತಿರುಡ ರುಕ್ಕಳ್ ಜಾಗ್ರತೆ” ಎಂದೂ ಬರೆದಿತ್ತು.

ಎಚ್ಚರಿಕೆಯಿಂದಲೇ ಕೆಲಸಮಾಡಿದ್ದ ಕಳ್ಳ!

ರಾಮರಾಯರ ಮನೆಯಲ್ಲಿ ಯಾರೋ ಕಣ್ಣು ಮುಚ್ಚಿದರಂತೆ ಅದಕ್ಕೆ ಈಗ ಅವರ ಮನೆಯಲ್ಲಿ ಕ್ರಂದನ ಸ್ವರದಿಂದ ತುಂಬಿದ್ದಿತು ಅದನ್ನು ತಿಳಿಯದ ಒಬ್ಬ ಬಾಲಕ ಅಲ್ಲಿಗೆ ಬಂದು ಅವರಲ್ಲಿ ಹೊರಕುಳಿತ ಒಬ್ಬನನ್ನ ಕೇಳಿದ. ಅದಕ್ಕೆ ರಾಮಣ್ಣನವರ ಅಣ್ಣನ ಮಗನ ಹೆಂಡತಿಯ ತಮ್ಮನ ಅಣ್ಣ ಕಣ್ಣು ಮುಚ್ಚಿದನಂತ. ಆಗ ಆ ಬಾಲಕ ಇದನ್ನು ಕೇಳಿ “ಎಂಥಾ ಹುಚ್ಚರು ಇವರು ಅಂತೀನಿ ಅಲ್ಲಾ ಅವಾ ಕಣ್ಣು ಮುಚ್ಚಿದರ ಇವರು ಯಾಕ ಅಳಬೇಕು. ಇನ್ನೊಂದು ಕ್ಷಣಕ್ಕಲಾ ದರೂ ಮುಚ್ಚಿದ ಕಣ್ಣನ್ನು ತೆರೆಯಬಹು ದಲಾ' ಎಂದು ಅವನೆದುರಿನಲ್ಲಿ ಗಹಗಹಿಸಿ ನಗುತ್ತ ಮುಂದೆಸಾಗಿದ.

ಕರ್ನಾಟಕ

ಧಾರವಾಡ

೨೭ ನೇ ತಾರೀಖು ಸಾಯಂಕಾಲ ಹುಬ್ಬಳ್ಳಿಯ ಸ್ಪೇಶಲ್ ಮ್ಯಾಜಿಸ್ಟ್ರೇಟ ಕೋರ್ಟಿನ ಕೀಲಿ ಮುರಿದು ಒಳಗಿದ್ದ ಕರೆನ್ಸಿ ನೋಟು ಮತ್ತು ಕೆಲವು ಆಭರಣ ಕೂಡಿ ಸುಮಾರು ೧೩೦೦ ರೂ. ಬೆಲೆಯ ಮುದ್ದೇ ಮಾಲನ್ನು ಆಶ್ಚರ್ಯಕಾರಕ ರೀತಿಯಲ್ಲಿ ಕಳವು ಮಾಡಿ ಕೊಂಡು ಹೋಗಿದ್ದಾರೆ. ಲಂಚ ನಿರ್ಮೂಲನ ಖಟ್ಲೆಯಲ್ಲಿ ಗುರ್ತು ಮಾಡಲ್ಪಟ್ಟ ನೋಟುಗಳು ಈ ಮುದ್ದೇ ಮಾಲಿನಲ್ಲಿ ಇದ್ದವಂತೆ. ಒಟ್ಟು ೫೦ ಖಟ್ಲೆಗಳಲ್ಲಿಯ ಮುದ್ದೇ ಮಾಲು ಕಳವಾಗಿ ಹೋಗಿದೆಯೆಂದು ತಿಳಿಯುತ್ತದೆ.

ಕರ್ನಾಟಕ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿಗೆ ಶ್ರೀ. ವಿ. ಎಸ್. ಬಸವನಾಳ, ಶಾಂತಪ್ಪಣ್ಣಾ ಎಳಮಲಿ, ಮುರಿಗೆಪ್ಪ ಮೋಟಗಿ ಬ್ಯಾಡಗಿ, ಗುರುಸಿದ್ದಪ್ಪ ಮಂಟೂರ ಶೆಟ್ಟರ ಇವರು ಡಾಯರೆಕ್ಟರರಾಗಿ ಆರಿಸಿ ಬಂದರು. ಒಟ್ಟು ಏಳು ಜನ ಹುರಿಯಾಳುಗಳಿದ್ದರು.

ಗಜೇಂದ್ರಗಡದ ತಂಬಾಕು ವ್ಯಾಪಾರಿಗಳಾದ ಶಂಕರಲಾಲ ಮೋಹನಲಾಲಶೇಠರವರು ಪುನಃ ಮುದ್ರೆಯಾಗದ ಕಾಟಾ ಕಲ್ಲುಗಳನ್ನು ಅಂಗಡಿಯಲ್ಲಿ ವ್ಯಾಪಾರದ ಉದ್ದೇಶ ಇಟ್ಟ ಬಗ್ಗೆ ಗದಗ ಭಾಗದ ತೂಕ ಅಳತೆಗಳ ಇನಸ್ಪೆಕ್ಟರರು ಹಾಕಿದ ಖಟ್ಲೆಯಲ್ಲಿ ಅವರಿಗೆ ೫೦ ರೂ. ದಂಡ ಇಲ್ಲವೆ ಒಂದು ತಿಂಗಳು ಸಾದಾ ಶಿಕ್ಷೆ ವಿಧಿಸಲಾಯಿತು.

ಉತ್ತರ ಕನ್ನಡ

ಇಡೀ ಉತ್ತರ ಕನ್ನಡ ಜಿಲ್ಲೆಯನ್ನು ಕರ್ನಾಟಕದಲ್ಲಿಯೇ ಸೇರಿಸಬೇಕು, ಅದನ್ನು ಒಡೆದದ್ದಾದರೆ ಅದು ರಾಜಕೀಯ ಆರ್ಥಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಸಂಪೂರ್ಣ ವಿನಾಶಹೊಂದುವದು ನಿಶ್ಚಿತವೆಂದು ಕಾರವಾರ ಜಿಲ್ಲಾ ಕರ್ನಾಟಕ ಸಂಘದ ಪ್ರಚಾರ ಸಮಿತಿ ಅಧ್ಯಕ್ಷ ಎಸ್. ವಿ ಗೋಕರ್ಣ ಇವರು ಅಭಿಪ್ರಾಯ ಪಟ್ಟಿದ್ದಾರೆ. ಭೌಗೋಲಿಕ ದೃಷ್ಟಿಯಿಂದಲೂ ಉ. ಕ ಕರ್ನಾಟಕಕ್ಕೆ ಕೊಡುವದು ಉಚಿತವೆಂದು ಅವರು ಹೇಳಿದ್ದಾರೆ.

ಕಾರವಾರ ತಾಲೂಕ ಬಿಣಗೆಯ ಪೋಲೀಸ ಪಟೀಲರಾದ ಶ್ರೀ ಶಾಂತಾರಾಮ ಶಂಕರ ಹಬ್ಬೂ ಇವರು ಲಂಚದ ಸಂಬಂಧದಲ್ಲಿ ಲಂಚ ನಿರ್ಮೂಲನ ಶಾಖೆಯವರು ಮಾಡಿದ ವಿಚಾರಣೆ ಪರಿಣಾಮವಾಗಿ ಸಸ್ಪೆಂಡ ಮಾಡಲ್ಪಟ್ಟಿದ್ದು ಹೆಚ್ಚಿನ ತಪಾಸಣೆ ನಡೆದಿದೆ.

ಜಿಲ್ಲೆಯ ಬೀಳಗಿಯಲ್ಲಿ ಪ್ರತಿ ಗುರುವಾರ ದಿವಸ ಸಂತೆ ಕೂಡಿಸಲು ಮಂಜೂರಿ ಸಿಕ್ಕಿದ್ದು ಅಕ್ಟೋಬರ ೭ ನೆಯ ತಾರೀಕಿನಿಂದ ಆ ಸಂತೆಯನ್ನು ಪ್ರಾರಂಭ ಮಾಡಬೇಕೆಂದು ನಿರ್ಧರಿಸಿದ್ದಾರೆ. ಅದರ ಬಗ್ಗೆ ಪೂರ್ವಸಿದ್ಧತೆಯೂ ನಡೆದಿದೆ.

ವಿಜಾಪುರ

ಅಥರಗಾ ಶಾಲೆಯಲ್ಲಿ ೧೭ ನೇ ದಿನ ಅ. ಡೆ. ಎ. ಇ. ಶ್ರೀ ಗಾವಕರರ ಹಿರಿಯತನದಲ್ಲಿ ಗ್ರಾಮ ಶಿಕ್ಷಕರ ಶಿಕ್ಷಣ ಪ್ರಗತಿಯ ಚರ್ಚಾ ಕೂಟವನ್ನು ಸ್ಥಾಪಿಸಲಾಯಿತು. ಶ್ರೀ ಅಗರಖೇಡ ಇವರು ಚೇಅರಮನ್‌ರು ಮತ್ತು ಕಾರ್ಯದರ್ಶಿಗಳ ಸ್ಥಳಕ್ಕೆ ಶ್ರೀ ಶಿ. ಶಿ. ಇಂಗಳೇಶ್ವರ ಇವರನ್ನು ಆರಿಸಲಾಯಿತು.

ಬಳ್ಳಾರಿ

ಹೈದರಾಬಾದ ಸಂಸ್ಥಾನದಲ್ಲಿ ಕಾಯಂ ಶಾಂತತೆ ನೆಲಗೊಳ್ಳುವ ವರೆಗೆ ಅಲ್ಲಿ ಸೈನಿಕ ಆಡಳಿತವಿರಬೇಕೆಂದೂ ಅಪರಿಮಿತ ವಿತ್ತ ಜೀವಿತಗಳ ಹಾನಿಗೆ ಕಾರಣವಾದ ಅಸಫಜಾಹಿ ವಂಶದ ನಿಜಾಮರನ್ನು ಪಟ್ಟದಿಂದ ತಳ್ಳಬೇಕೆಂದೂ ತಮ್ಮ್ರಹಳ್ಳಿಯ ಸಭೆಯಲ್ಲಿ ಗೊತ್ತುವಳಿ ಸ್ವೀಕೃತವಾಯಿತು.

ಶ್ರೀ ಮಂತ್ರಾಲಯ ಮಠದ ಶ್ರೀ ರಾಘವೇಂದ್ರಸ್ವಾಮಿಗಳ ಪೀಠಸ್ಥರಾದ ಶ್ರೀ ಸುಯಮೀಂದ್ರ ಸ್ವಾಮಿಗಳು, ನಿಜಾಮರು ಭಾರತ ಸರಕಾರಕ್ಕೆ ಶರಣಾಗತರಾದುದನ್ನು ಕೇಳಿ ತುಂಬ ಸಂತೋಷ ವ್ಯಕ್ತಪಡಿಸಿದರು. ಕಳೆದ ೫—೬ ತಿಂಗಳುಗಳಿಂದ ಶ್ರೀಗಳವರು ಹೈದರಾಬಾದ ನಿರಾಶ್ರಿತರಿಗೆ ಮಠದಲ್ಲಿ ಅನ್ನ ಹಾಕುತ್ತಿದ್ದರು.

ತೆಕ್ಕಲಕೋಟೆಯಲ್ಲಿ ೨೬ ಕ್ಕೆ ಹೈದರಾಬಾದ ವಿಜಯ ದಿನ ಬಳ್ಳಿ ಉತ್ಸಾಹದಿಂದ ಆಚರಿಸಲಾಯಿತು. ೨೭ ನೆಯ ತಾರೀಕು ಪ್ರಭಾತ ಫೇರಿ, ಧ್ವಜವಂದನೆ, ಭಜನೆಗಳಾದವು. ಹಾಯರ ಎಲಿಮೆಂಟರಿ ಶಾಲೆಯಲ್ಲಿ ಸಾರ್ವಜನಿಕ ಸಭೆ ನೆರವೇರಿತು. ಹಲವರು ಹೈದರಾಬಾದದ ಬಗ್ಗೆ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣವಾಗಿ ಸಭೆ ಕೊನೆಗಂಡಿತು.

ಬೆಳಗಾವಿ

ಬೆಳಗಾವಿಯಲ್ಲಿ ಗಾಂಧೀ ಸ್ಮಾರಕನಿಧಿಗೆ ಮೋಟರ ಜನರಲ್ ಮ್ಯೂಚಿಯಲ್ ಇನಸುರನ್ಸ ಕಂಪನಿಯವರು ೧೧೧೧ ರೂ ಶ್ರೀ ವಾಮನರಾವ ದೇಸಾಯಿ ನಾಗರ್ಪುರಿ ೧೦೦ ರೂ ಕೊಟ್ಟಿರುವರು. ಗೋಕಾಕ ತಾಲೂಕಿನಲ್ಲಿಯೂ ನಿಧಿ ಎತ್ತುವ ಕೆಲಸ ನಡೆದಿದೆ.

ಬೆಳಗಾವಿ ಗೋಂಧಳಿಗಲ್ಲಿಯಲ್ಲಿಯ ಆರ್. ಎಸ್. ಎಸ್. ಕಾರ್ಯಕರ್ತರಾದ ಶ್ರೀ ಗೋವಿಂದ ಮುಕಬಳ ಮಳವೆಯವರನ್ನು ಸುರಕ್ಷಿತತೆ ಕಾಯದೆಯನ್ವಯ ಬಂಧಿಸಿ ಸ್ಥಾನಬದ್ಧರನ್ನಾಗಿಡಲಾಗಿದೆ.

ನಾವಲಗಟ್ಟಿ ಪೋಲೀಸ ಪಾಟೀಲರು ತಿಗಡಿ ಕಾಂಗ್ರೆಸ ಸಮಿತಿಯ ಜನರು ಬೈಲಹೊಂಗಲ ಸಬ್ ಇನಸ್ಪೆಕ್ಟರ ಶ್ರೀ ಕುಲಕರ್ಣಿ ಇವರು ಮತ್ತು ಊರ ಜನರ ಸಭೆ ಸೇರಿ ನಗರ ಸಂರಕ್ಷಣೆಯ ಬಗೆಗೆ ಭಾಷಣಗಳಾದವು ನಗರ ಸಂರಕ್ಷಣೆಯ ಬಗ್ಗೆ ಒಂದು ಸಮಿತಿಯೂ ಸ್ಥಾಪಿತವಾಯಿತು. ಆಭಾರಮನ್ನಣೆಯಾಗಿ ಸಭೆ ಕೊನೆಗಂಡಿತು.

ಕನ್ನಡ ಸಂಸ್ಥಾನ

ಶಿವಮೊಗ್ಗ ನಗರ ಸಭೆಯ ವೆಚ್ಚ ಉತ್ಪನ್ನಕ್ಕಿಂತ ಮಿಕ್ಕಿದ್ದರಿಂದ ಸರಕಾರದವರು ಉತ್ಪನ್ನ ಹೆಚ್ಚಿಸಿಕೊಳ್ಳುವ ಮಾರ್ಗ ಹುಡುಕಬೇಕೆಂದು ಸೂಚಿಸಿದ್ದಾರೆ. ಮುಂಗಡ ಪತ್ರಿಕೆಯಂತೆ ಈ ಸಲದ ಉತ್ಪನ್ನವು ೧೮೫೬೭೧ ರೂ. ಪ್ರಾರಂಭದ ಶಿಲ್ಕು ಹಿಡಿದು ೭೦೧೮೯೮ ರೂ. ಇದ್ದು ವೆಚ್ಚವು ೬೦೧೯೧ ರೂ. ಇರುವದು.

ಕೃಷ್ಣರಾಜಪುರದಲ್ಲಿ ಪ್ರಾರಂಭವಾಗುವ ಹಿಂದುಸ್ತಾನದ ಹೊಸ ಟೆಲಫೋನ ಕಾರಖಾನೆಯ ಕಟ್ಟಡದ ಅಡಿಗಲ್ಲನ್ನು ಸಂಪರ್ಕ ಶಾಖೆಯ ಮಂತ್ರಿಗಳಾದ ಶ್ರೀ ರಫೀ ಅಹಮ್ಮದ ಕಿಡ್ವಾಯಿ ಇವರು ಅಕ್ಟೋಬರ ೧೨ ಕ್ಕೆ ಇರಿಸುವರು.

ಸಂಯುಕ್ತ ಮತದಾರ ಸಂಘ, ಹರಿಜನರು, ಮುಸಲ್ಮಾನರು, ಕ್ರಿಶ್ಚನ್‌ರು ಮೊದಲಾದ ಅಲ್ಪಸಂಖ್ಯರ ಬಗ್ಗೆ ೧೦ ವರ್ಷಗಳ ವರೆಗೆ ಶಾಸನ ಸಭೆಗಳಲ್ಲಿ ಸ್ಥಳ ಕಾದಿರಿಸುವದು ಮೊದಲಾದ ಸೂಚನೆಗಳನ್ನು ಮೈಸೂರು ಘಟನಾ ಸಮಿತಿಯ ಉಪಸಮಿತಿಯವರು ಅಭಿಪ್ರಾಯ ಪಟ್ಟಿದ್ದಾರೆ.

ಮೈಸೂರು ಸಾರ್ವಜನಿಕ ಭದ್ರತಾ ಕಾನೂನಿನನ್ವಯ ಮೈಸೂರು ಬೆಂಗಳೂರಿನಲ್ಲಿ ಸ್ಥಾನಬದ್ಧತೆಯಲ್ಲಿಡಲ್ಪಟ್ಟ ೪೫ ಕಮ್ಯುನಿಸ್ಟರು ಸಪ್ಟಂಬರ ೨೫ ರಿಂದ ಅನ್ನ ಸತ್ಯಾಗ್ರಹ ಹೂಡಿದ್ದಾರೆ. ತಮ್ಮ ಕುಟುಂಬದವರಿಗೆ ಭತ್ತೆ ದೊರೆಯಬೇಕು ತಮಗೆ ವಿಶೇಷ ಸೌಕರ್ಯಗಳನ್ನು ಕೊಡಬೇಕು ಎಂದು ಅವರ ಬೇಡಿಕೆಯಿದೆ.

ಆರ್. ಎಸ್ ಎಸ್. ಸಂಘವು ಅಕ್ರಮವಾದ ಬಳಿಕ ವಿನಾಯಕ ಸೇವಾ ಮಂಡಳಿ ಎಂಬ ಹೆಸರಿಟ್ಟುಕೊಂಡು ಸಂಘದ ಚಟುವಟಿಕೆ ನಡೆಸುತಿದ್ದ ಆರೋಪದಿಂದ ಸಾಗರದಲ್ಲಿ

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ ಸಮಿತಿಯ ಸಭೆಯು ದಿನಾಂಕ ೧೯ ರಂದು ಮಂಗಳೂರಲ್ಲಿ ಜರಗಿದಾಗ ರೈತರ ಸಾಲ ನಿವಾರಣ ಮಸೂದೆಯು ತಿದ್ದುಪಡಿಯಾದಂತೆ ಸಂಪೂರ್ಣವಾಗಿ ದಕ್ಷಿಣ ಕನ್ನಡ ಜಿಲ್ಲೆಗೂ ಅನ್ವಯಿಸುವಂತೆ ಮಾಡಬೇಕು. ಮಂಗಳೂರಲ್ಲಿ ಸ್ಥಾಪಿಸುವುದೆಂದು ನಿರ್ಣಯಿಸಿದ ಮೀನಿನ ವ್ಯವಸಾಯದಲ್ಲಿ ಉಪಯೋಗಿಸುವ ಕೋಲ್ಡ ಸ್ಟೋರೇಜ್ ಪ್ಲಾಂಟಿನ ಕುರಿತು ಪುನರಾಲೋಚಿಸಬೇಕು. ಸರಕಾರವು ಜಿಲ್ಲಾ ಕಾಂಗ್ರೆಸ ಸಮಿತಿಯನ್ನು ಕೇಳಿಕೊಂಡೇ ಯಾವುದಾದರೂ ಸಾರ್ವಜನಿಕ ಕಾರ್ಯ ಪ್ರಾರಂಭಿಸಬೇಕು–ಇತ್ಯಾದಿ ನಿರ್ಣಯಗಳಾದವು.

ಮಂಗಳೂರಿಗೆ ಬಂದಿದ್ದ ಮುಂಬಯಿ ಕ್ರಾನಿಕಲ್ ಪತ್ರಿಕೆಯ ಉಪ ಸಂಪಾದಕ ಶ್ರೀ. ಆರ್. ಕೆ. ಪ್ರಭುಗಳಿಗೆ ಇಲ್ಲಿನ ವಾಣಿಜ್ಯ ಸಂಘವು ದಿನಾಂಕ ೨೦ ರಂದು ಒಂದು ಸತ್ಕಾರವೇರ್ಪಡಿಸಿದಾಗ ಅವರು ಈಗಿನ ಭಾಷಾವಾರ ಪ್ರಾಂತ ರಚನೆಯು ಜಾತೀಯತೆಯ ಇನ್ನೊಂದು ಸ್ವರೂಪವೆಂದು ಹೇಳಿ ಕಾಕಾ ಕಾಲೇಲಕರರ ಸೂಚನೆಯಂತೆ ಪಶ್ಚಿಮ ತೀರಕ್ಕೆ ಸಾಗರತೀರ ಪ್ರಾಂತವಾಗಬೇಕೆಂದರು.

ಪ್ರಾಂತಿಕ ಕ್ಷೇಮನಿಧಿಯ ಜಿಲ್ಲಾ ಶಾಖೆಯಲ್ಲಿ ಈಗ ಬರೇ ೧,೩೫,೦೦೦ ರೂಪಾಯಿಗಳಿವೆ. ಸಂಘದ ಮುಂದೆ ಹಲವು ಆರೋಗ್ಯ ಕಾರ್ಯಕ್ರಮಗಳ ಯೋಜನೆಗಳಿವೆ. ಆದ್ದರಿಂದ ಜನತೆಯು ಕೊಡುಗೈಯಿಂದ ಮುಂದೆ ಬರಬೇಕೆಂದು ಕಾರ್ಯದರ್ಶಿ ಸಿ. ಜಿ. ಕಾಲ್ಸರ್‌ನ್‌ರವರು ವಿನಂತಿಸಿದ್ದಾರೆ.

ಹಿಂದೀ ಪದವೀದಾನ ವಿತರಣೋತ್ಸವವು ದಿನಾಂಕ ೨೬ರಂದು ಮಾಜಿ ಮಂತ್ರಿ ಶ್ರೀ. ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿಗಳು ಶ್ರೀ. ಕೆ. ಆರ್. ನಂಬುಂಡನ್‌ರು ಸ್ವಾಗತ ಮಾಡಿದ ಮೇಲೆ ಪ್ರಚಾರಕ ಶ್ರೀ. ಎನ್. ಎನ್. ನಾಯಕರು ಪರಿಚಯಿಸಿದರು. ಉತ್ತೀರ್ಣರಾದವರಿಗೆ ಪದವಿಗಳನ್ನಿತ್ತು. ಇಲ್ಲಿಯ ಗವರ್ನಮೆಂಟ ಕಾಲೇಜಿನ ಪ್ರಿನ್ಸಿಪಾಲರು ಶ್ರೀ ಎಂ. ವಿ. ಶಿವರಾಮಯ್ಯನವರು ತಮ್ಮ ಭಾಷಣದಲ್ಲಿ ಹಿಂದುಸ್ಥಾನಿ ಸಾಹಿತ್ಯದ ಕುರಿತು ಮಾತನಾಡಿದರು. ಅಧ್ಯಕ್ಷರು ಸಮುಗಿಂದು ಒಂದು ರಾಷ್ಟ್ರಭಾಷೆ ಅಗತ್ಯ, ಇದರಿಂದ ಕನ್ನಡಕ್ಕೆ ಕುಂದಿರಯುಲ್ಲವೆಂದರು. ಕೊನೆಯಲ್ಲಿ ಹಿಂದೀ ಪಾಟಗಳಾದವು.

ಮಂಗಳೂರಲ್ಲಿ ದಿನಾಂಕ ೨೬ ರಂದು ಶ್ರೀ ರಾಮ ಮೋಹನ ರಾಯರವರ ೧೧೫ ವಾರ್ಷಿಕ ದಿನವು ಇಲ್ಲಿನ ಬ್ರಹ್ಮ ಮಂದಿರದಲ್ಲಿ ಜರಗಿತು. ಅಧ್ಯಕ್ಷರಾದ ಕೆ. ಎಸ್. ಹೆಗ್ಗಡೆ ಮತ್ತು ಇತರ ಮಹನೀಯರು ರಾಯರು ನಮ್ಮ ದೇಶಕ್ಕೂ ಜಗತ್ತಿಗೂ ಸಲ್ಲಿಸಿದ ಸೇವೆಯನ್ನು ತಿಳಿಸಿದರು.

ದ. ಕ. ಜಿಲ್ಲಾ ಬಿಸೋಮೊಬೈಲ್ ಯೂನಿಯನ್ (ಮೋಟರ ಕೆಲಸಗಾರರ ಸಂಘ)ದ ವಿಶೇಷ ಮಹಾ ಸಭೆಯೊಂದು ಮಂಗಳೂರಲ್ಲಿ ದಿನಾಂಕ ೨೬ ರಂದು ಜರಗಿತು. ಕಾರ್ಯದರ್ಶಿಗಳಾಗಿದ್ದ ಡಾ. ಸಂಜೀವನಾಥರು ಕೊಟ್ಟ ರಾಜೀನಾಮೆಯನ್ನು ಸಭೆಯು ಸ್ವೀಕರಿಸಿತು. ಅದೇ ದಿನ ಸಂಜೆ ಕೇಂದ್ರ ಬಯಲಿನಲ್ಲಿ ಜರಗಿದ ಬಹಿರಂಗ ಸಭೆಯಲ್ಲಿ ಅಧ್ಯಕ್ಷರಾದ ಎನ್ ಎನ್ ಸುವರ್ಣ ಮತ್ತು ಬಿ. ಎಸ್. ಭಾಸ್ಕರ ರೈ, ಎನ್ ಎಸ್ ಕಿಲ್ಲೆ ಮುಂತಾದವರು ಮೋಟರ ಕೆಲಸಗಾರರನ್ನು ಉದ್ದೇಶಿಸಿ ಮಾತನಾಡಿದರು.

ಮಧ್ವ ಮತದ ಹಲವಾರು ಗ್ರಂಥಗಳನ್ನು ನಿತ್ಯಾನ್ಹಿಕ ದೇವಪೂಜಾ ಪದ್ಧತಿ, ದಾಸರ ಪದ ಯಕ್ಷಗಾನ ಪ್ರಸಂಗಾದಿಗಳನ್ನು ಪ್ರಕಟಿಸಿ ಅಖಿಲ ಕರ್ನಾಟಕದಲ್ಲೆಲ್ಲ ಪ್ರಸಿದ್ಧಿ ಹೊಂದಿದ್ದ ಶ್ರೀ ಪಾವಂಜೆ ಗುರುರಾಯರು ೨೩ ನೇ ತಾರೀಕಿಗೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ನಿಧನದ ನಿಮಿತ್ತ ಅವರ ಒಡೆತನದ ಶ್ರೀಕೃಷ್ಣ ಮುದ್ರಣಾಲಯವು ಮೂರು ದಿನ ಮುಚ್ಚಲ್ಪಟ್ಟಿದ್ದಿತು.

ಪೋಲೀಸರು ಗುರುಮೂರ್ತಿ ಮರಾಠೆ, ವಿನಾಯಕ ಅವಲಕ್ಕಿ ಹಾಗು ಬೇರೆ ೭ ಜನರನ್ನು ಬಂಧಿಸಿರುವರೆಂದು ಸುದ್ದಿ ಬಂದಿದೆ. ಗುರುಮೂರ್ತಿಯವರ ಮನೆಯ ಝಡತಿ ಮಾಡಿ ಕೆಲ ಕಾಗದ ಪತ್ರಗಳನ್ನು ಒಯ್ದರು. ಶಿವಮೊಗ್ಗ ಜೇಲಿನಲ್ಲಿ ಸಂರಕ್ಷಕ ಕಾಯದೆಯ ಮೇರೆಗೆ ಬಂಧಿಸಲಾದ ೩೦ ಮುಸಲ್ಮಾನರನ್ನು ಮೈಸೂರಿಗೆ ಸ್ಥಳಾಂತರಿಸಲಾಗಿದೆ.

ಕನ್ನಡ ಪುಸ್ತಕಗಳಿಗೆ ಬಹುಮಾನ

ಕನ್ನಡದಲ್ಲಿ ಬಹುಮಾನ ಪಡೆಯಲು ಅರ್ಹವಾದ ಆರು ಪುಸ್ತಕಗಳ ಹೆಸರುಗಳನ್ನು ಸೂಚಿಸಬೇಕೆಂದು ಮದ್ರಾಸ ಸರಕಾರದವರು ಮದ್ರಾಸ ಕರ್ನಾಟಕ ಸೇವಾ ಸಂಘಕ್ಕೆ ಕೇಳಿಕೊಂಡಿದ್ದಕ್ಕೆ ಕರ್ನಾಟಕ ಸೇವಾ ಸಂಘದವರು ಕೆಳಗಿನ ಪುಸ್ತಕಗಳ ಹೆಸರುಗಳನ್ನು ತಿಳಿಸಿದ್ದಾರೆ.

(೧) ಸತ್ಯಾಗ್ರಹ (೨) ವಿಜ್ಞಾನದ ವಿಚಿತ್ರಗಳು ೩) ಇಂದ್ರಜಾಲ (೪) ಗೀತಾಸಾರ (೫) ಕವಿರಾಜಮಾರ್ಗ ವಿವೇಕ ಮತ್ತು (೬) ನೀತಿ ರಾಮಾಯಣ.

ಹಿಂದುಸ್ತಾನ

ಮುಂಬಯಿ

ಮುಂಬಯಿ ಸಾಂತಾಕ್ರೂಝ ವಿಮಾನ ನಿಲ್ದಾಣದಲ್ಲಿ ತಾ. ೨೭ ರಂದು ಒಬ್ಬ ಮುಸ್ಲಿಂ ಪ್ರಯಾಣಿಕನನ್ನು ಸುಂಕದ ಅಧಿಕಾರಿಗಳು ಸಂಶಯದ ಮೇಲೆ ಶೋಧಿಸಲಾಗಿ ಅವನ ಹತ್ತಿರ ೫೫೦೦೦ ರೂ. ಬೆಲೆಯ ಬಂಗಾರ ದೊರಕಿತು. ಇದನ್ನು ಇವನು ತನ್ನ ಬೂಟಿನಲ್ಲಿ ಸಾಬಾಣದಲ್ಲಿ ಸೂಟ ಕೇಸಿನ ಒಳ ಅರಿವೆಯಲ್ಲಿ ಹಲ್ಲುಜ್ಜುವ ಪೇಸ್ಟಿನಲ್ಲಿ ಅಡಗಿಸಿಟ್ಟಿದ್ದನು. ಈ ಬಂಗಾರವನ್ನು ವಶಪಡಿಸಿಕೊಳ್ಳಲಾಗಿದೆ. ಅವನನ್ನು ಬಂಧಿಸಲಾಗಿದೆ.

ಮುಂಬಯಿ ಸುಂಕದ ಕಚೇರಿಯವರು ತಾ.೨೮ರ ರಾತ್ರಿ ಮುಂಬಯಿಯಿಂದ ಆಫ್ರಿಕೆಗೆ ಹೊರಡಲಿದ್ದ ಹಡಗದಲ್ಲಿ ೫೦೦೦೦ರೂ. ಗಳ ಅಫೀಮನ್ನು ಕಳ್ಳತನದಿಂದ ಸಾಗಿಸುತ್ತಿದ್ದದ್ದನ್ನು ಕಂಡು ಹಿಡಿದರು.

ಮಹಾತ್ಮಾ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಯ ಮುಂಬಯಿ ಕಚೇರಿಯಲ್ಲಿ ತಾ.೨೭ರ ವರೆಗೆ ೮,೧೧,೬೪೮ರೂ.ಗಳು ಕೂಡಿವೆಯೆಂದು ತಿಳಿಯುತ್ತದೆ.

ಮುಂಬಯಿ ಗವರ್ನರರು ತಾ.೨೬ರಂದು ಮುಂಬಯಿ ರಾಷ್ಟ್ರೀಯ ವಿದ್ಯಾರ್ಥಿ ಸೈನಿಕ ಪಡೆಯನ್ನುದ್ದೇಶಿಸಿ ಮಾತನಾಡುತ್ತ ನೀವು ಪ್ರತ್ಯಕ್ಷಸೈನಿಕರಾಗಿರದಿದ್ದರೂ ಹಿಂದಳವರು. ಪರರ ಆಕ್ರಮಣಕ್ಕೊಳ್ಳದಿದ್ದರೂ ದೇಶ ಸಂರಕ್ಷಣೆಗೆ ತರುಣರ ಅಗತ್ಯವಿದೆ. ಆದ್ದರಿಂದ ನೀವು ಉತ್ಸಾಹದಿಂದ ಈ ಕಾರ್ಯಕ್ಕೆ ಮುನ್ನುಗ್ಗಿ ಬರಬೇಕು ಎಂದು ತರುಣರನ್ನು ಆಹ್ವಾನಿಸಿದರು.

ಹಿಂದುಸ್ತಾನಿ ಸಾಹಿತ್ಯಕ್ಕೆ ಉತ್ತೇಜನ ಕೊಡುವ ಉದ್ದೇಶದಿಂದ ಮುಂಬಯಿ ಸರಕಾರವು ೬೦೦೦ ರೂ.ಯ ಸಹಾಯ ಕೊಡಬೇಕೆಂದು ಈ ವರ್ಷಕ್ಕಾಗಿ ತೆಗೆದಿಟ್ಟಿದ್ದಾರೆಂದೂ ಈ ಸಹಾಯ ಬಯಸುವ ಗ್ರಂಥಕರ್ತರು ಅಥವಾ ಪ್ರಕಾಶಕರು ತಮ್ಮ ಪುಸ್ತಕದ ೯೪ ಪ್ರತಿಗಳೊಂದಿಗೆ ತಮ್ಮ ವಿಳಾಸ ಬೆಲೆ ಇತ್ಯಾದಿ ವಿವರಗಳನ್ನು ಇದೇ ಡಿಸೆಂಬರ ೧೫ ರೊಳಗಾಗಿ ಚೇರಮನ್ ಪ್ರಾವಿನ್ಸಿಯಲ್ ಬೋರ್ಡ ಆಫ್ ಎಜ್ಯುಕೇಶನ್ ಇನ್ ಹಿಂದುಸ್ತಾನಿ ಲೋಕ ಕಲ್ಯಾಣ ೭೭ ಶನಿವಾರ ಪೇಠ ಪುಣೆ ೨ ಇವರಿಗೆ ಅರ್ಜಿ ಹಾಕಬೇಕೆಂದೂ ಪ್ರಕಟವಾಗಿದೆ.

೧೯೪೨ರ ಚಳವಳಿಯಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾಗ ಅನೇಕರು ಮರಣ ಹೊಂದಿ ತಮ್ಮ ಕುಟುಂಬದವರನ್ನು ಅನಾಥರನ್ನಾಗಿ ಮಾಡಿ ಹೋದದ್ದು ಕಂಡುಬಂದದ್ದರಿಂದ ಮುಂಬಯಿ ಸರಕಾರವು ಇಂತಹ ಕುಟುಂಬಗಳಿಗೆ ಒಟ್ಟು ೬೭೦೦ ರೂ. ಪರಿಹಾರ ಮಂಜೂರ ಮಾಡಿದ್ದಾರೆಂದು ತಿಳಿಯುತ್ತದೆ.

ಹರಿಜನರಿಗೂ ಪೂಜೆಯ ಸಮಾನ ಹಕ್ಕು ದೊರೆಯಲೆಂದು ದೇವಾಲಯ ಶಬ್ದದ ವ್ಯಾಖ್ಯೆಯನ್ನು ಕೆಳಗಿನಂತೆ ಮುಂಬಯಿ ಸರಕಾರವು ವಿಸ್ತರಿಸಲು ಯೋಚಿಸಿದ್ದಾರೆಂದು ತಿಳಿಯುತ್ತದೆ– ಹಿಂದು ಸಮಾಜದವರು ರೂಢಿ, ಬಳಕೆ, ಇತರ ರೀತಿಯಿಂದ ಧಾರ್ಮಿಕ ಪೂಜೆಗಾಗಿ ಉಪಯೋಗಿಸುವ ಸ್ಥಳವು ಅದರ ಹೆಸರು ಏನೇ ಇರಲಿ ದೇವಾಲಯವೆಂದು ಕರೆಯಲ್ಪಡುವದು, ಅದಕ್ಕೆ ಹೊಂದಿಕೊಂಡ ಭೂಮಿ ಆ ಸ್ಥಳದಲ್ಲಿದ್ದ ಎಲ್ಲ ಗುಡಿಗಳು ಅದರಲ್ಲಿ ಬರುವವು.

ಮುಂಬಯಿ ಸರಕಾರವು ಮದ್ಯ ಪ್ರತಿಬಂಧವನ್ನು ಯೋಜನೆಗನುಸರಿಸಿ ಸಾಗಿಸುವದೆಂದೂ ಈ ಬಗ್ಗೆ ಮತ್ತು ಜಮೀನದಾರಿ ನಿರ್ಮೂಲನ ವಿಷಯದಲ್ಲಿ ಸಾವಕಾಶವಾಗಿ ಸಾಗಬೇಕೆಂದು ಹಿಂದುಸ್ತಾನ ಸರಕಾರವು ಸಲಹೆ ಕೊಟ್ಟಿದ್ದರೂ ಈ ವಿಷಯಗಳ ಬಗ್ಗೆ ಕೇಂದ್ರ ಸರಕಾರದಿಂದ ಧನ ಸಹಾಯ ಕೋರುವದಿಲ್ಲವಾದಕಾರಣ ಈ ಸಲಹೆಯನ್ನು ಮುಂಬಯಿ ಸರಕಾರವು ಗಮನಿಸುವದಿಲ್ಲವೆಂದು ತಿಳಿಯುತ್ತದೆ.

ಹೈದರಾಬಾದ ಸಮಸ್ಯೆಯು ಸಸೂತ್ರವಾಗಿ ಪರಿಹಾರವಾದದ್ದಕ್ಕೆ ತಾ.೨೬ರಂದು ಮುಂಬೈ ನಗರದ ಎಲ್ಲ ದೇವಾಲಯ, ಚರ್ಚ, ಮಸೂದೆ ಮೊದಲಾದಲ್ಲಿ ವಿಶೇಷ ಪ್ರಾರ್ಥನೆ ನಡೆದವು. ಪ್ರಾಂತದ ಮುಖ್ಯ ಮುಖ್ಯ ಪಟ್ಟಣಗಳಲ್ಲಿಯೂ ಇದೇ ರೀತಿ ಪ್ರಾರ್ಥನೆಗಳಾದ ವರದಿ ಬಂದಿವೆ.

ಈಗ ತಾಂಡವವಾಡುತ್ತಿರುವ ಅತಿಪ್ರಸರಣವನ್ನು ಅಲ್ಪಾವಧಿಯಲ್ಲಿಯೇ ನಿಯಂತ್ರಿಸಲಾಗದಿದ್ದರೆ ಮುಂಬಯಿ ಪ್ರಾಂತದಲ್ಲಿ ಕರಭಾರವನ್ನು ಸ್ವಲ್ಪ ಹೆಚ್ಚಿಸಬೇಕಾಗುವದೆಂದು ಅರ್ಥಸಚಿವರಾದ ಶ್ರೀ ವೈಕುಂಠಲಾಲ ಮೇಥಾರು ತಾ.೨೪ರಂದು ಮುಂಬಯಿ ಶಾಸನ ಸಭೆಯಲ್ಲಿ ತಿಳಿಸಿದರು.

ಅನೇಕ ಸಂಸ್ಥಾನಗಳು ಮುಂಬಯಿ ಪ್ರಾಂತದಲ್ಲಿ ಲೀನವಾದ ಕುರುಹಿಗೆಂದು ಲೀನವಾದ ಸಂಸ್ಥಾನಗಳಲ್ಲಿ ನೂರಕ್ಕೆ ೧೦ ರಷ್ಟು ಭೂಕಂದಾಯ ಸೂಟು ಬಿಡಲು ಮುಂಬಯಿ ಸರಕಾರವು ನಿರ್ಧರಿಸಿದ್ದು ೧೯೪೮–೪೯ ರಲ್ಲಿ ಈ ಸೂಟು ಬಿಡಲಾಗುವದು.

ಪುಣೆಯ ವಿಶ್ವವಿದ್ಯಾಲಯವು ಈ ವರ್ಷಾರಂಭಕ್ಕೆ ಪ್ರಾರಂಭವಾಗಿ ೧೯೪೯ರ ಮಾರ್ಚ ಅಥವಾ ಎಪ್ರಿಲ ತಿಂಗಳಲ್ಲಿ ಪರೀಕ್ಷೆಗಳನ್ನು ನಡೆಸುವದೆಂದು ಆ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ. ಎಂ. ಆರ್. ಜಯಕರರು ತಿಳಿಸಿದರು. ಈಗ ಈ ವಿಶ್ವವಿದ್ಯಾಲಯದ ಕಚೇರಿಯು ಭಾಂಡಾರಕರ ಸಂಶೋಧನ ಸಂಸ್ಥೆಯಲ್ಲಿದ್ದು ಬೇಗ ಅದನ್ನು ಗಣೇಶಖಿಂಡಿಯ ಸರಕಾರೀ ಭವನಕ್ಕೆ ಸ್ಥಳಾಂತರಿಸಲಾಗುವದೆಂದು ತಿಳಿಯುತ್ತದೆ. ಅದು ೬೦೦ ಎಕರೆಯ ವಿಶಾಲ ಸ್ಥಳವಿದ್ದು ಅಲ್ಲಿ ವಿಶ್ವವಿದ್ಯಾಲಯದ ನಗರವನ್ನೂ ರಚಿಸಬರುವಂತಿದೆ. ಈ ವಿಶ್ವವಿದ್ಯಾಲಯದ ಕಾರ್ಯಕ್ಕೆ ಶಿವರಾಮ ಕಾಳೆ ಎಂಬ ಒಬ್ಬ ಪ್ರಾಥಮಿಕ ಶಾಲಾ ಮಾಸ್ತರರು ೧೦೦೧ರೂ. ಕೊಟ್ಟದ್ದು ಇದೇ ಮೊಟ್ಟಮೊದಲ ಕಾಣಿಕೆಯಾಗಿದೆಯೆಂದು ತಿಳಿಯುತ್ತದೆ ಈ ವರೆಗೆ ೨ ಲಕ್ಷ ೩ ಸಾವಿರ ರೂ.ಗಳು ಕೂಡಿವೆ.

ಹೊಸದಿಲ್ಲಿ

ಅಖಿಲ ಭಾರತ ವಿದ್ಯಾರ್ಥಿ ಮಹಾಮಂಡಲದ ೧೨ ನೇ ವಾರ್ಷಿಕ ಅಧಿವೇಶನವು ದಿಲ್ಲಿಯಲ್ಲಿ ಡಿಸೆಂಬರ ಕೊನೆಯ ವಾರದಲ್ಲಿ ನಡೆಯುವದೆಂದು ಮಹಾಮಂಡಲದ ಕಾರ್ಯದರ್ಶಿಗಳು ಪ್ರಕಟನೆ ಹೊರಡಿಸಿದ್ದಾರೆ.

ಹೈದರಾಬಾದದ ಪೋಲೀಸ ಕ್ರಮದಿಂದ ಹಿಂದೀ ರಾಜಕಾರಣದಲ್ಲಿದ್ದ ಕೊಳೆಯೆಲ್ಲ ತೊಳೆದು ಹೋಯಿತೆಂದೂ ಇದರಿಂದ ಪಾಕಿಸ್ತಾನಕ್ಕೂ ಅದರ ಮುಖಾಂತರ ಜಗತ್ತಿಗೂ ಹಿತವೇ ಉಂಟಾಗಿದೆ ಎಂದು ಮೊದಲಾಗಿ ಪಂ. ಜವಾಹರಲಾಲರು ದಿಲ್ಲಿಯಲ್ಲಿ ನಿರಾಶ್ರಿತ ವಸತಿಯಲ್ಲಿಯ ಲಾಲಾ ಲಜಪತರಾಯ ಮುನಸಿಪಲ ಪೇಟೆಯ ಉದ್ಘಾಟನೆ ಮಾಡುತ್ತ ತಾ. ೨೫ ರಂದು ಸಾರಿದರು.

ಹೊಸ ಘಟನೆಯ ಪ್ರಕಾರ ನಡೆಯಬೇಕಾದ ಆಯ್ಕೆಗೆ ಮತದಾರರ ಪಟ್ಟಿಯ ಸಿದ್ಧತೆ ಎಲ್ಲ ಪ್ರಾಂತಗಳಲ್ಲಿಯೂ ಸಂಸ್ಥಾನಗಳಲ್ಲಿಯೂ ನಡೆದಿದೆಯೆಂದು ಸುದ್ದಿ ಬಂದಿದೆ. ಈ ಬಗ್ಗೆ ನಿರಾಶ್ರಿತ ಶಬ್ದದ ವ್ಯಾಖ್ಯೆಯನ್ನು ಗಲಭೆಗೆ ಗುಳೇ ಬಂದವನೆಂದು ಮಾಡಲಾಗಿದ್ದು ಇಂತಹ ನಿರಾಶ್ರಿತರಿಂದ ಸ್ಥಿರ ವಾಸದ ಬಗ್ಗೆ ಹೇಳಿಕೆ ತೆಗೆದುಕೊಂಡು ಅವರ ಹೆಸರುಗಳನ್ನು ಪಟ್ಟಿಯಲ್ಲಿಸೇರಿಸಿಕೊಳ್ಳಲಾಗುತಿರುವದೆಂದೂ ಅವರ ನಾಗರಿಕತ್ವದ ವಿಚಾರವನ್ನು ಆ ಮೇಲೆ ಮಾಡಲಾಗುವದೆಂದೂ ಘಟನಾಸಮಿತಿ ಕಚೇರಿಯ ಪ್ರಕಟನೆ ಹೊರಟಿದೆ.

ಲಾಭದಲ್ಲಿ ಒಂದು ಪಾಲನ್ನು ಕೂಲಿಕಾರರಿಗೆ ಹಂಚುವ ಪ್ರಯೋಗವನ್ನು ಮೊದಲು ೫ ವರ್ಷಗಳ ವರೆಗೆ, ಜವಳಿ, ಸಣಬು, ಉಕ್ಕು, ಸಿಮೆಂಟು, ಸಿಗರೇಟ ಮೊದಲಾದ ಉದ್ಯಮಗಳಲ್ಲಿ ಮಾಡಿ ನೋಡಬೇಕೆಂದು ಈ ಸಂಬಂಧದಲ್ಲಿ ನೇಮಿಸಲಾದ ಸಮಿತಿಯು ಸೂಚಿಸಿದೆ. ಈ ಪ್ರಯೋಗವನ್ನು ನೋಡಿ ಅದರ ಅನುಭವದ ಮೇಲಿಂದ ಮುಂದಿನ ಧೋರಣೆಯನ್ನು ನಿರ್ಧರಿಸಬೇಕೆಂದು ಸಮಿತಿಯ ಸೂಚನೆಯಿದೆ. ಈ ಸೂಚನೆಗಳನ್ನು ಕೇಂದ್ರ ಸಲಹೆ ಸಮಿತಿಯು ಪರಿಶೀಲಿಸುವದು.

ಹಿಂದುಸ್ತಾನ ಪಾಕಿಸ್ತಾನಗಳ ನಡುವೆ ಕೈದಿಗಳ ವಿನಿಮಯದ ಬಗ್ಗೆ ಆದ ಒಪ್ಪಂದದಂತೆ ಹಿಂದುಸ್ತಾನ ಸರಕಾರವು ಅಕ್ಟೋಬರ ೧೪ ಕ್ಕೆ ೪೦೦ ಮುಸ್ಲಿಂ ಕೈದಿಗಳನ್ನು ಪಾಕಿಸ್ತಾನಕ್ಕೆ ಒಪ್ಪಿಸುವದು. ಪಾಕಿಸ್ತಾನ ಸರಕಾರವು ಒಂದು ಸಾವಿರ ಮುಸಲ್ಮಾನೇತರ ಕೈದಿಗಳನ್ನು ಹಿಂದುಸ್ತಾನಕ್ಕೆ ಒಪ್ಪಿಸುವದು. ಈ ವಿನಿಮಯವು ಫಿರೋಜಪುರದಲ್ಲಿ ನಡೆಯುವದು.

ಜಯಪುರ ಕಾಂಗ್ರೆಸ್ಸಿನ ಗಾಂಧಿ ನಗರದ ಶಂಕುಸ್ಥಾಪನೆಯು ಮಹಾತ್ಮರ ಜನ್ಮ ದಿನವಾದ ಅಕ್ಟೋಬರ ೨ ಕ್ಕೆ ನಡೆಯಲಿದೆಯೆಂದೂ ಅದಕ್ಕಾಗಿ ಆಚಾರ್ಯ ವಿನೋಬಾ ಭಾವೆಯವರನ್ನು ಆಮಂತ್ರಿಸಲಾಗಿದೆಯೆಂದೂ ತಿಳಿಯುತ್ತದೆ.

ಹಿಮಾಚಲ ಪ್ರದೇಶದಲ್ಲಿಯ ಭಜ್ಜಿ ಸಂಸ್ಥಾನದ ನರೇಂದ್ರರಾಗಿದ್ದ ರಾಣಾ ವೀರಪಾಲಸಿಂಗರನ್ನು ೧೯೪೦ ರಿಂದ ಯರವಡಾ ಜೇಲಿನಲ್ಲಿ ಸ್ಥಾನಬದ್ಧತೆಯಲ್ಲಿ ಇಡಲಾಗಿತ್ತು. ಈಗ ಅವರು ಬಿಡುಗಡೆ ಹೊಂದಿದ್ದು ಸಂಸ್ಥಾನ ಶಾಖೆಯ ಮಂತ್ರಿ ಪಟೇಲರೊಡನೆಯೂ ಶ್ರೀ ಮೆನನ್ನರೊಡನೆಯೂ ತಮ್ಮ ಸಂಸ್ಥಾನದ ಆಡಳಿತದ ಬಗ್ಗೆ ಮಾತುಕತೆ ನಡೆಸಲು ದಿಲ್ಲಿಗೆ ಹೋಗಿದ್ದಾರೆಂದು ತಿಳಿಯುತ್ತದೆ.

ಘಟನಾ ಸಮಿತಿಯ ಸದಸ್ಯರಾದ ಶ್ರೀ. ಕೆ. ಸಂತಾನಂ ಅವರನ್ನು ಕೇಂದ್ರದ ರೇಲ್ವೆ ಸಹಾಯಕ ಮಂತ್ರಿಯೆಂದೂ ಶ್ರೀ ಖುರ್ಶಿದ ಲಾಲ ಮತ್ತು ಸತ್ಯನಾರಾಯಣಸಿಂಹ ಇವರನ್ನು ಅನುಕ್ರಮವಾಗಿ ಸಂಪರ್ಕಶಾಖೆಯ ಮತ್ತು ಮುಖ್ಯ ಮಂತ್ರಿಗಳ ಉಪಮಂತ್ರಿಗಳೆಂದೂ ನೇಮಿಸಲಾಗಿದೆಯೆಂದು ಪ್ರಕಟನೆ ಹೊರಟಿದೆ.

ಮುಖ್ಯಮಂತ್ರಿ ಪಂ. ಜವಾಹರಲಾಲರೂ ಸಂರಕ್ಷಣ ಮಂತ್ರಿ ಸರದಾರ ಬಲದೇವಸಿಂಗರೂ ಒಂದು ಸಂಯುಕ್ತ ಪ್ರಕಟನೆ ಹೊರಡಿಸಿ ಯುದ್ಧದಲ್ಲಿ ಮೃತರಾದ ಸೈನಿಕರ ಕುಟುಂಬಕ್ಕೆ ಸಹಾಯ ನೀಡಲು ದೇಶದ ಜನವೆಲ್ಲ ಸೈನಿಕ ನಿಧಿಗೆ ಮುಕ್ತಹಸ್ತದಿಂದ ಧನ ನೀಡಬೇಕೆಂದು ವಿಜ್ಞಾಪಿಸಿಕೊಂಡಿದ್ದಾರೆ. ಸೈನಿಕರ ಮರಣದಿಂದ ಅನೇಕ ಕುಟುಂಬಗಳು ನಿರಾಶ್ರಿತವಾಗಿದ್ದು ಅವರಿಗೆ ತಕ್ಕ ಪರಿಹಾರ ಕೊಡುವದು ಅವಶ್ಯವೆಂದು ಒತ್ತಿ ಹೇಳಲಾಗಿದೆ.

ಪಶ್ಚಿಮ ಬಂಗಾಲ

ಹಿಂದೀ ವಿಜ್ಞಾನಾಭಿವೃದ್ಧಿ ಸಂಸ್ಥೆಯು ಯಾದವಪುರದಲ್ಲಿ ೩೬ ಲಕ್ಷ ರೂ ವೆಚ್ಚಮಾಡಿ ಕಟ್ಟಿಸಲಿರುವ ಹೊಸ ಕಟ್ಟಡದ ಶಂಕುಸ್ಥಾಪನೆಯು ಪ. ಬಂಗಾಲದ ಮುಖ್ಯಮಂತ್ರಿ ಡಾ. ಬಿ. ಸಿ. ರಾಯರ ಹಸ್ತದಿಂದ ತಾ ೨೬ ಕ್ಕೆ ನೆರವೇರಿತು.

ಹಿಂದೀ ಸಂಸ್ಥಾನ

ಸಾರ್ವಜನಿಕ ಹಿತದೃಷ್ಟಿಯಿಂದ ಬಡೋದೆಯ ಮಹಾರಾಜರು ಒಂದು ಸುಗ್ರೀವಾಜ್ಞೆ ಹೊರಡಿಸಿ ಕೆಲವು ವಿಷಯಗಳಿಗೆ ಸಂಬಂಧಪಟ್ಟ ಪ್ರಕಟನೆ ಮುದ್ರಣಗಳನ್ನು ಪ್ರತಿಬಂಧಿಸುವ ಮತ್ತು ಪೂರ್ವ ಪರಿಶೀಲನೆ ನಡೆಸುವ ಮತ್ತು ೩ ತಿಂಗಳ ವರೆಗೆ ಮುದ್ರಣಾಲಯಕ್ಕೆ ಬೀಗ ಮುದ್ರೆ ಹಾಕುವ ಅಧಿಕಾರವನ್ನು ಸರಕಾರಕ್ಕೆ ಕೊಟ್ಟಿದ್ದಾರೆ. ಇದಕ್ಕೆ ವಿರುದ್ಧವಾಗಿ ವರ್ತಿಸಿದವರಿಗೆ ೧೦ ವರ್ಷಗಳ ವರೆಗೆ ಶಿಕ್ಷೆ ದಂಡ ಮಾಡಲಾಗುವದು.

ಗಾಂಧೀ ಸ್ಮಾರಕಕ್ಕೆ ೩೪ ಕೋಟಿ ರೂ

ಗಾಂಧೀ ರಾಷ್ಟ್ರೀಯ ಕೇಂದ್ರ ಸ್ಮಾರಕ ಸಮಿತಿಯ ಕಾರ್ಯದರ್ಶಿಗಳಾದ ಆಚಾರ್ಯ ಕೃಪಲಾನಿಯವರು, ಬರುವ ಕೆಲತಿಂಗಳಲ್ಲಿಯೇ ೩೪ ಕೋಟಿ ರೂಪಾಯಿಗಳನ್ನು ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ಸಂಗ್ರಹಿಸಲು ಕಾರ್ಯಕರ್ತರೆಲ್ಲ ಅಣಿಗೊಳ್ಳಬೇಕೆಂದು ಎಲ್ಲರೂ ಬಿನ್ನವಿಸಿಕೊಂಡಿದ್ದಾರೆ.

ಸಂಯುಕ್ತ ಪ್ರಾಂತ

ಸಂಯುಕ್ತ ಪ್ರಾಂತದ ಗವರ್ನರರಾದ ಶ್ರೀಮತಿ ಸರೋಜಿನಿ ನಾಯಡು ಅವರು ಘಾಜಿಪೂರ ನಿಲ್ದಾಣದಲ್ಲಿ ತಮ್ಮ ಡಬ್ಬಿಯಲ್ಲಿ ಏರುವಾಗ ಕಾಲು ಜಾರಿದ್ದರಿಂದ ಕಾಲಿಗೆ ಸ್ವಲ್ಪ ಗಾಯವಾಗಿದೆ. ಇದಕ್ಕಾಗಿ ಅವರು ೧೦ ದಿನ ತಮ್ಮ ಕಾರ್ಯಕ್ರಮವನ್ನು ರದ್ದುಪಡಿಸಿರುವರು.

ರಾಘೋವಾ ಭಾಗದತ್ತ ನೆರೆಹಾವಳಿಯಿಂದ ಸಂತ್ರಸ್ತರಿಂದ ೧೧೫ ಸ್ತ್ರೀ ಪುರುಷರು ಹಾಗು ಮಕ್ಕಳನ್ನು ನಾವೆಯಲ್ಲಿ ಬೇರೆಡೆ ಸಾಗಿಸುತ್ತಿದ್ದಾಗ ನಾವೆಯು ಗಂಡಕದಲ್ಲಿ ಪ್ರವಾಹಕೆ ಸಿಲುಕಿ ಮಗುಚಿಬಿದ್ದು ೧೦೭ ಜನರು ಜಲಸಮಾಧಿ ಹೊಂದಿದರೆಂದೂ ೮ ಜನ ಪಾರಾದರೆಂದೂ ಪಾಟಣಾದಿಂದ ತಾ. ೨೫ ಕ್ಕೆ ವಾರ್ತೆ ಬಂದಿದೆ.

ಮದ್ರಾಸ

ಅಬಕಾರಿ ಪೋಲೀಸರು ತಾ. ೨೫ ಕ್ಕೆ ಮದ್ರಾಸ ಸೆಂಟ್ರಲ ಸ್ಟೇಶನ್ನಿನಲ್ಲಿ ನಾಲ್ವರು ಪ್ರವಾಸಿಕರನ್ನು ಸಂಶಯದಿಂದ ಶೋಧಿಸಲಾಗಿ ಅವರಲ್ಲಿ ೧ ಲಕ್ಷ ೪೦ ಸಾವಿರ ರೂಪಾಯಿ ಬೆಲೆಯ ಅಫು ಸಿಕ್ಕಿತು. ಇವರು ಮದ್ರಾಸ ಪ್ರಾಂತದವರೇ ಇದ್ದು ದಿಲ್ಲಿಯಿಂದ ಬಂದಿದ್ದರು. ಈ ನಾಲ್ಕೂ ಜನರನ್ನು ಬಂಧನದಲ್ಲಿಡಲಾಗಿದೆ.

ಗವರ್ನರ ಜನರಲ್ ಶ್ರೀ ರಾಜಗೋಪಾಲಾಚಾರ್ಯರ ಆದೇಶಕ್ಕನುಸರಿಸಿ ಮದ್ರಾಸದಲ್ಲಿ ಎಲ್ಲ ದೇವಾಲಯ ಮಸೀದೆ ಚರ್ಚುಗಳಲ್ಲಿ ಹೈದರಾಬಾದದ ಸೈನಿಕ ಕಾರ್ಯಾಚರಣೆಯ ಬಗ್ಗೆ ವಿಶೇಷ ಪ್ರಾರ್ಥನೆ ನಡೆದುದಲ್ಲದೆ ಆಭಾರ ಮನ್ನಣೆಯ ಸಮಾರಂಭಗಳು ತಾ. ೨೬ ಕ್ಕೆ ನೆರವೇರಿದವು. ಸಂಜೆಗೆ ನಗರದ ಬೇರೆ ಬೇರೆ ಭಾಗಗಳಲ್ಲಿ ಸಭೆಗಳಾದವು.

ವಾರದ ಭವಿಷ್ಯ

ಜೋತಿಷಿ— ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯ ಕಥನ ಆಫೀಸ ಖಡೇಬಝಾರ, ಬೆಳಗಾವಿ.

ಅಕ್ಟೋಬರ ೪ ರಿಂದ ೧೦ ರ ವರೆಗೆ

ಮೇಷ

ಎಲ್ಲರ ಪ್ರಕೃತಿ ಉತ್ತಮ, ಸ್ತ್ರೀ ಸುಖ ಮನಸ್ಸಿನಂತೆ. ಆದರೆ ಮಕ್ಕಳಿಂದ ಸ್ವಲ್ಪ ವಿರೋಧ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆಪ್ತರಲ್ಲಿ ಗೌರವ ಮತ್ತು ಕೆಲ ಮಂಗಳ ಕೃತ್ಯಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಶತ್ರುಗಳಿಗೆ ಪರಭಾರೆ ಸ್ವಲ್ಪ ಹಾನಿ. ಮಿತ್ರಸುಖ ಉತ್ತಮ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಅನುಕೂಲ. ಅಶ್ವಿನಿಯ ೪ ನೇ ಮತ್ತು ಭರಣಿಯ ಮೊದಲನೇ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೪, ೫, ೯, ೧೦ ಅನುಕೂಲ.

ಈ ವಾರದಲ್ಲಿಯ ವಿಶೇಷವೆಂದರೆ ಗುರು ಅಶ್ವಿನ ಶುದ್ಧ ಪಂಚಮಿ ಗುರುವಾರ ೧೪ ಘ. ೨೨ ಪ. (ತಾ. ೭-೧೦-೪೮ ಮಧ್ಯಾಹ್ನ ೧೨-೯ ಗಂಟೆಗೆ)ಕ್ಕೆ ವೃಶ್ಚಿಕ ರಾಶಿಯಿಂದ ಧನುರಾಶಿಗೆ ಬರುವನು. ಅರ್ಥಾತ್ ಈ ರಾಶಿಯವರಿಗೆ ಅವನು ಈ ವರೆಗೆ ೮ ನೆಯವನಿದ್ದನು ಇನ್ನು ೯ ನೆಯವನಾಗುವನು. ಆದುದರಿಂದ ಭಾಗ್ಯೋದಯ, ಆರೋಗ್ಯ, ಸತ್ಸಮಾಗಮ ತೀರ್ಥಯಾತ್ರೆ, ದೂರದ ಪ್ರವಾಸ, ಮಾನಸಿಕ ಉನ್ನತಿ ಮತ್ತು ಉತ್ತಮೋತ್ತಮ ವಿಚಾರ ಬರುವ ಮೊದಲಾದ ಫಲಗಳನ್ನು ಕೊಡುವನು.

ವೃಷಭ

ನಿಮ್ಮ ಪ್ರಕೃತಿ ಅನುಕೂಲ ಆದರೆ ಹೆಂಡತಿ ಮತ್ತು ಮಕ್ಕಳಿಗೆ ಸ್ವಲ್ಪ ಕ್ಲೇಶವುಂಟಾಗುತ್ತ ನಡೆಯುತ್ತದೆ. ಬಹುತರ ಎಲ್ಲ ವಿಷಯದಲ್ಲಿ ಪ್ರಾಪಂಚಿಕ ತೊಂದರೆ. ಒಳ್ಳೆ ಕೆಲಸದಲ್ಲಿಯೂ ಮನಸ್ಸಿನಲ್ಲಿ ಉದಾಸೀನತೆ. ಸ್ಥಾವರದಲ್ಲಿ ಬಗೆ ಬಗೆಯ ಕಿಟಿಕಿಟಿ. ಸರಳ ಮಾತಿನಲ್ಲಿಯೂ ನಿಮ್ಮ ಬುದ್ಧಿಭೇದ ಕುಂಠಿತ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಧಾರಣವೇ. ಆದರೆ ಲಾಭ ಉತ್ತಮ. ಮಿತ್ರರಿಂದ ನಿಂದೆ ಮತ್ತು ಉಪೇಕ್ಷೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳು ನಮ್ರ ಆಗುವ ಧೋರಣ. ಬಹಳ ವಾಹನ ಸುಖ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಕೃತ್ತಿಕೆಯ ೪ ನೆ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೬, ೭, ೮ ಅನುಕೂಲ.

ತಾ. ೭ ಕ್ಕೆ ಬರುವ ೮ ನೇ ಗುರು ನಿಮ್ಮ ಮತ್ತು ಮಿತ್ರರ ಪ್ರಕೃತಿಗೆ ಕ್ಲೇಶ ಬಂಧು ವರ್ಗದವರಿಗೆ ವಿರೋಧ. ಧಂದೆ ಮತ್ತು ಕೂಲಿ ಮೊದಲಾದ್ದಕಿಂತ ಅವಚಿತ ಲಾಭಕ್ಕೆ ಹೆಚ್ಚು ಉತ್ತಮ. ಪ್ರಪಂಚಕ್ಕಿಂತ ಪಾರಮಾರ್ಥ ಹೆಚ್ಚು ಸುಖಕರ.

ಮಿಥುನ

ಪ್ರಕೃತಿ ಉತ್ತಮ ಸ್ತ್ರೀ ಮತ್ತು ಸಂತತಿಯದೂ ನೆಟ್ಟಗೆ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಲಾಭ ಎಲ್ಲ ನೆಟ್ಟಗೆ. ಆದರೆ ಹವ್ಯಾಸವನ್ನು ಹೆಚ್ಚಿಸುವ ವೆಚ್ಚ ಬಹಳ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಅನುಕೂಲತೆ. ಮಿತ್ರ ಸುಖವೂ ನೆಟ್ಟಗೆ. ಸ್ಥಾವರ ಆಸ್ತಿಯ ಬಗ್ಗೆ ಪಂಚರಲ್ಲಿಯೇ ನ್ಯಾಜ್ಯವಾಗುವದರಿಂದ ನಿಮಗೆ ಲಾಭ ಸಂಭವಿಸುವದು. ವಾಹನ ಸುಖ ದೊರಕುವದು. ಪ್ರಿಯ ಆಪ್ತರ ಭೆಟ್ಟಿಯ ಲಾಭ. ಪ್ರವಾಸಾದಿ ಕಾರ್ಯಗಳು ಹಿತವಾಗಿವೆ ಮೃಗಾದ ೪ನೆಯ, ಆದ್ರಾರ್ದ ಮೊದಲಿನ ೩ ಚರಣಗಳಿಗೆ ತೊಂದರೆಯಿಂದಲೇ ಯಶಸ್ಸು. ತಾ. ೪, ೫, ೯, ೧೦ ಇವು ಒಳ್ಳೆಯವು.

ತಾ. ೭ ಕ್ಕೆ ಬರುವ ೭ ನೇ ಗುರು ಫಲದ ಮೂಲಕ ಸ್ತ್ರೀ ಪ್ರೇಮ ಹೆಚ್ಚುವದು. ಆದರೆ ಆಕೆಗೆ ಆರೋಗ್ಯ ಕಡಿಮೆ. ದ್ರವ್ಯ ಲಾಭವು ತುಂಬ ಲಭಿಸುವದು. ಉದ್ಯೋಗದಲ್ಲಿಯೂ ವಾದವಿವಾದದಲ್ಲಿಯೂ ಯಶ. ಮಿತ್ರಸುಖ ಉತ್ತಮ. ಒಳ್ಳೆ ವಿಚಾರಗಳು ಹೆಚ್ಚುವವು.

ಕರ್ಕ

ಪ್ರಕೃತಿ ಸಾಧಾರಣವೆ. ಅಲ್ಲದೆ ಮನೆಯ ಬಹುತರ ಎಲ್ಲರ ಪ್ರಕೃತಿಯೂ ಅಷ್ಟು ಸರಿಯಾಗಿರುವದಿಲ್ಲ ಮತ್ತು ಎಲ್ಲರೂ ಪರಸ್ಪರರಲ್ಲಿ ಕಲಹ ಮಾಡುವರು. ಉದ್ಯೋಗದಲ್ಲಿ ಧಂದೇ ಮಾಡುವವರಿಗಿಂತ ನೋಕರಿ ಮಾಡುವವರಿಗೆ ಹೆಚ್ಚು ನೆಟ್ಟಗೆ. ಪ್ರಗತಿ ಮತ್ತು ಪ್ರತಿಷ್ಠೆ ಬಹಳ ಉತ್ತಮ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಮಧ್ಯಮ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಬೆಟ್ಟಿಯು ಹೆಚ್ಚು ಅನುಕೂಲ. ಪುಷ್ಯೆಯ ೪ ನೆಯ ಮತ್ತು ಆಶ್ಲೇಷೆಯ ಮೊದಲಿನ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೬, ೭, ೧೧, ೧೨ ಇವು ಒಳ್ಳೆಯವು.

ತಾ. ೭ ಕ್ಕೆ ಬರುವ ೬ ನೇ ಗುರುವಿನ ಫಲ ಹೀಗಿದೆ. ಆರೋಗ್ಯ ಕಡಮೆ. ಮಿತ್ರರಲ್ಲಿ ಕೆಲವರ ವಿಯೋಗ. ದುಷ್ಟವಾಸನೆಗಳ ಪ್ರಾಬಲ್ಯ ದಾಂಭಿಕ ವೃತ್ತಿ. ನೋಕರಿ ಮಾಡುವವರಿಗೆ ಹೆಚ್ಚಳ.

ಸಿಂಹ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಇಬ್ಬರಲ್ಲಿಯೂ ಬಹಳ ಮತವಿರೋಧ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖವು ಸಾಧಾರಣ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಎಲ್ಲವೂ ಉತ್ತಮ. ಪ್ರತಿಯೊಂದು ಕೆಲಸದಲ್ಲಿಯೂ ಅಲ್ಪಾಯಾಸದಿಂದ ಯಶ ದೊರಕುವದು. ಮಿತ್ರ ಸುಖ ಉತ್ತಮ. ನೋಕರಿ ಮಾಡುವವರಿಗಿಂತ ಧಂದೆ ಮಾಡುವವರಿಗೆ ಹೆಚ್ಚು ಅನುಕೂಲ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಒಳ್ಳೆ ಯಶ. ಪ್ರವಾಸಾದಿ ಕಾರ್ಯಗಳು ಸುಖಕರ. ಮಘಾದ ೪ ನೆಯ ಮತ್ತು ಪೂರ್ವಾದ ಮೊದಲಿನ ೩ ಚರಣಗಳಿಗೆ ಹೆಚ್ಚು ಉತ್ತಮ. ತಾ. ೪, ೫, ೯, ೧೦ ಇವು ಒಳ್ಳೆಯವು.

೭ ನೇ ತಾ. ಗೆ ಬರುವ ೫ ನೆಯ ಗುರುವಿನ ಫಲ ಹೀಗಿದೆ. ವಿದ್ಯಾ, ಸಂತತಿ ಸುಖ, ದೈವೀ ಕೃಪೆ, ಮಿತ್ರ ಸುಖ, ದ್ರವ್ಯ ಲಾಭ, ಕೀರ್ತಿ ಮತ್ತು ಪ್ರಕೃತಿ ಎಲ್ಲ ಉತ್ತಮ.

ಕನ್ಯಾ

ಪ್ರಕೃತಿ ಉತ್ತಮ ಸ್ತ್ರೀಸುಖ ನೆಟ್ಟಗೆ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆಗಳು ಬಹಳ. ಸ್ಥಾವರದಲ್ಲಿ ಹೆಚ್ಚಳ ಕಂಡು ಬಂದರೂ ಅದಕ್ಕಾಗಿ ಬಹಳ ವೆಚ್ಚವೂ ಆಗುವದು ಮತ್ತು ಕೆಲವರೊಡನೆ ನಿಷ್ಠುರ ಘಟಿಸುವದು. ಉದ್ಯೋಗದಲ್ಲಿ ಪ್ರಗತಿ ಕಡಮೆ ಆದರೆ ಪ್ರತಿಷ್ಠೆ ಲಾಭ ಇವು ತುಂಬ ಲಭಿಸುವವು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಉಭಯ ಪಕ್ಷಕ್ಕೂ ಸಮಾನ ಸ್ಥಿತಿ. ಅಶುಭ ಸ್ವಪ್ನ ಬೀಳುವವು. ಪ್ರವಾಸಕ್ಕಿಂತ ಬೆಟ್ಟಿ ಮತ್ತು ಪತ್ರವ್ಯವಹಾರಗಳು ನೆಟ್ಟಗೆ. ಉತ್ತರೆಯ ೪ ನೆಯ ಮತ್ತು ಹಸ್ತಾನಕ್ಷತ್ರದ ಮೊದಲಿನ ೩ ಚರಣಗಳಿಗೆ ತೊಂದರೆಗಳು ಕಡಮೆ ತಾ. ೪, ೫, ೬, ೭ ಇವು ಒಳ್ಳೆಯವು.

ತಾ ೭ ಕ್ಕೆ ಬರುವ ೪ ನೆಯ ಗುರುಫಲ ಹೀಗಿದೆ. ಆಪ್ತರೊಡನೆ ವೈರ. ಕೆಲವು ವಿಷಯಗಳನ್ನು ಮನಸ್ಸಿನ ವಿರುದ್ಧ ಮಾಡುವ ಪ್ರಸಂಗ. ಮಕ್ಕಳು ಅಪ್ರಿಯ ಕೃತಿ ಮಾಡುವರು. ಪ್ರತಿಷ್ಠೆ ನೆಟ್ಟಗೆ ಆದರೆ ಲಾಭ ಕಡಮೆ.

ತುಲಾ

ಪ್ರಕೃತಿ ಉತ್ತಮ. ಮಕ್ಕಳ ಉತ್ಕರ್ಷ. ಹೆಂಡತಿಗೆ ಮಾತ್ರ ಸದಾ ತ್ರಾಸವೇ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕಸುಖವುಸಾಧಾರಣ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ ಆದರೆ ಲಾಭ ಕಡಮೆಯಷ್ಟೇ ಅಲ್ಲ ವೆಚ್ಚವೂ ಹೆಚ್ಚು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಬಹಳ ಯಶ ದೊರಕಿದರೂ ವೈರಿ ಪಕ್ಷದ ಬಲ ಮಾತ್ರ ಹಾಗೆ ಉಳಿಯುವದು. ಪ್ರವಾಸಾದಿ ಕಾರ್ಯಗಳು ಸುಖಕರ. ಚಿತ್ರಾದ ೪ ನೆಯ ಮತ್ತು ಸ್ವಾತಿಯ ಮೊದಲಿನ ೩ ಚರಣಗಳಿಗೆ ತೊಂದರೆಯುಂಟಾಗದೇ ಯಶಸ್ಸು. ತಾ. ೪, ೫, ೬, ೭ ಇವು ಒಳ್ಳೆಯವು.

ತಾ. ೭ ಕ್ಕೆ ಬರುವ ೩ ನೆಯ ಗುರುಫಲ ಹೀಗಿದೆ. ಭಾಗ್ಯ, ಲಾಭ, ಮಿತ್ರಸುಖ, ಸ್ತ್ರೀ ಸುಖ, ವಾದವಿವಾದದಲ್ಲಿ ಯಶ ಇವೆಲ್ಲ ಲಭಿಸುವವು.

ವೃಶ್ಚಿಕ

ಪ್ರಕೃತಿಯು ಸಾಧಾರಣವೇ. ಕೆಲವು ಪ್ರಾಪಂಚಿಕ ಸಂಗತಿಗಳಲ್ಲಿ ನಿಮ್ಮ ಮತ್ತು ಉಳಿದವರ ಮತಭೇದ. ಸ್ತ್ರೀ ಸುಖ ನೆಟ್ಟಗೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ನೆಟ್ಟಗೆ ಆದರೆ ಲಾಭ ಕಡಮೆ. ಅಂದಾಜಿಗಿಂತ ವೆಚ್ಚ ಹೆಚ್ಚು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಬಹಳ ಯಶಸ್ಸು. ಆದರೂ ತೊಂದರೆಯೂ ವೆಚ್ಚವೂ ಹೆಚ್ಚು. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಹೆಚ್ಚು ಉತ್ತಮ. ಅನುರಾಧಾ ನಕ್ಷತ್ರದ ೪ ನೆಯ ಮತ್ತು ಜ್ಯೇಷ್ಠಾ ನಕ್ಷತ್ರದ ಮೊದಲಿನ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೭, ೮, ೯, ೧೦ ಇವು ಒಳ್ಳೆಯವು.

ತಾ. ೭ ಕ್ಕೆ ಬರುವ ೨ನೆಯ ಗುರುಫಲ ಹೀಗಿದೆ. ಪ್ರಾಪಂಚಿಕ ಸುಖ, ಧನಸಂಗ್ರಹ, ಮಂಗಲಕಾರ್ಯ, ಪ್ರತಿಷ್ಠೆ ವೈರಿಗಳೊಡನೆ ಒಪ್ಪಂದ ಇವುಗಳಿಗೆಲ್ಲ ನೆಟ್ಟಗೆ.

ಧನು

ಪ್ರಕೃತಿ ಉತ್ತಮ. ಸ್ತ್ರೀ ಸುಖ ಒಳಿತು ಆದರೆ ಮಕ್ಕಳಿಂದ ಕುಸು ಕಿಟಿಕಿಟಿ, ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭ ಇವೂ ಬಹಳ ಉತ್ತಮ. ದೊಡ್ಡ ಸಾಹಸದ ಕಾರ್ಯದಲ್ಲಿ ಸಹ ವಿಜಯಪ್ರಾಪ್ತಿ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಯಶ. ಮಿತ್ರರಂತೆ ಶತ್ರುಗಳು ಸಹ ಉಪಕಾರ ಕೃತ್ಯ ಮಾಡುವರು. ಪ್ರವಾಸಾದಿ ಕಾರ್ಯಗಳು ಹಿತಾವಹ. ಮೂಲಾದ ೪ ನೆಯ ಮತ್ತು ಪೂರ್ವಾಷಾಢಾದ ಮೊದಲಿನ ೩ ಚರಣಗಳಿಗೆ ಹೆಚ್ಚು ಉತ್ತಮ. ತಾ. ೪, ೫, ೯, ೧೦ ಇವು ಒಳ್ಳೆಯವು.

ತಾ. ೭ ಕ್ಕೆ ಬರುವ ೧ ನೆಯ ಗುರುಫಲ ಹೀಗಿರುತ್ತದೆ. ಪ್ರಕೃತಿ, ಸ್ತ್ರೀ ಸುಖ, ಸಂತತಿ ಸುಖ, ಕೀರ್ತಿ, ಭಾಗ್ಯ, ಧರ್ಮಕಾರ್ಯ ಇವುಗಳಿಗೆಲ್ಲ ಸರ್ವೋತ್ಕೃಷ್ಟವಾಗಿದೆ.

ಮಕರ

ಪ್ರಕೃತಿ ಕೃಶವೆಂದು ಕಂಡು ಬಂದರೂ ಸ್ತ್ರೀಸುಖ ಮತ್ತು ಪ್ರಾಪಂಚಿಕ ಸುಖ ಉತ್ತಮ. ವೆಚ್ಚವು ಹೆಚ್ಚಾದರೂ ಅದರಿಂದ ಉದ್ದೇಶ ಸಫಲವಾಗುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಇವೂ ಉತ್ತಮ. ಆದರೆ ಎರಡನೆಯವರ ಉತ್ಕರ್ಷದ ಮೂಲಕ ಮನಸ್ಸಿಗೆ ಬಹಳ ವಿಷಾದ. ಸ್ಪರ್ಧೆಯಲ್ಲಿಯೂ ವಾದದಲ್ಲಿಯೂ ಉಭಯ ಪಕ್ಷಕ್ಕೂ ಸಮಾನ ಸ್ಥಿತಿ. ಮಿತ್ರತ್ವದಲ್ಲಿ ಕುಸು ವಿರೋಧ. ಪರಸ್ತ್ರೀ ಬಗ್ಗೆ ಕುಬುದ್ಧಿ. ಪ್ರವಾಸ ಮತ್ತು ಪತ್ರವ್ಯವಹಾರಗಳು ಬೆಟ್ಟಿಗಿಂತ ಹೆಚ್ಚು ಉತ್ತಮ. ಉತ್ತರಾಷಾಢಾದ ೪ ನೆಯ [illegible] ಶ್ರವಣ ನಕ್ಷತ್ರದ ಮೊದಲಿನ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೪, ೫, ೬, ೭ ಇವು ಒಳ್ಳೆಯವು.

ತಾ. ೭ ಕ್ಕೆ ಬರುವ ೧೨ ನೆಯ ಗುರುಫಲ ಹೀಗಿರುತ್ತದೆ. [illegible] ಒಳ್ಳೆಯ ಕೆಲಸಕ್ಕಾಗಿ [illegible] ಅನೇಕರೊಡನೆ ವಿರೋಧ. [illegible] ಉತ್ಕರ್ಷ ಮತ್ತು [illegible] ವಿರೋಧ. [illegible] ಶತ್ರುಗಳ ಪ್ರಾಬಲ್ಯ.

ಕುಂಭ

ಪ್ರಕೃತಿ ಉತ್ತಮ. ಸ್ತ್ರೀ ಸುಖ ಪ್ರಾಪಂಚಿಕ ಸುಖ ಉತ್ತಮ. ಆದರೆ ಆಕೆಯ ವಿಷಯಗಳಲ್ಲಿ [illegible] ಸಾಧಕ. ಮಕ್ಕಳಲ್ಲಿ ಉತ್ಕರ್ಷ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭ ಇವೆಲ್ಲವೂ ನಿರೀಕ್ಷೆಗಿಂತ ಮಿಗಿಲಾಗಿ ಲಭಿಸುವವು. [illegible] ದ್ದರೂ ಇನ್ನು ದೊರಕಬೇಕಿತ್ತು [illegible] ವಾಗಿ ನಿಮ್ಮ ಮನಸ್ಸು ಚಂಚಲಿಸುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಅನುಕೂಲತೆಯಿದೆ. ಸ್ಥಾವರದಲ್ಲಿ ಹೆಚ್ಚಳವುಂಟು. ಪ್ರವಾಸಾದಿ ಕಾರ್ಯಗಳು ಹಿತಾವಹವಾಗಿವೆ. ಆದರೆ ಧನಿಷ್ಠಾದ ೪ ನೆಯ ಮತ್ತು ಶತತಾರಕೆಯ ಮೊದಲಿನ ೩ ಚರಣಗಳಿಗೆ ತೊಂದರೆಯುಂಟಾದರೂ ಯಶ. ತಾ. ೪, ೫, ೬, ೭ ಇವು ಒಳ್ಳೆಯವು.

ತಾ. ೭ ಕ್ಕೆ ಬರುವ ೧೧ ನೆಯ ಗುರುಫಲ ಹೀಗಿದೆ. ದ್ರವ್ಯಲಾಭ, ಸಂತತಿಯ ಉತ್ಕರ್ಷ, ಸ್ತ್ರೀ ಸುಖ, ಹೀಗೆ ಬಹುತರ ಎಲ್ಲ ಸಂಗತಿಗಳಲ್ಲಿಯೂ ಸುಲಭವಾಗಿ ಯಶಪ್ರಾಪ್ತಿ.

ಮೀನ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ನೆಟ್ಟಗೆ. ನಿಮ್ಮ ನಿಮ್ಮೊಳಗೆ ಕಲಹ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಇವು ಮನಸ್ಸಿಗೆ ತಕ್ಕಂತೆ. ಆದರೆ ಅವೆಲ್ಲ ಬಹಳ ಕಷ್ಟಸಾಧ್ಯವಾಗುವ ಹಾಗೆ ಅತಂಕಗಳು ಬಂದೊದಗುವವು. ಪರಸ್ತ್ರೀ ವಿಷಯದಲ್ಲಿ ಕುಬುದ್ಧಿ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಬಹಳ ಯಶ. ಪ್ರವಾಸ ಪತ್ರವ್ಯವಹಾರಗಳಿಗಿಂತ ಬೆಟ್ಟಿ ನೆಟ್ಟಗೆ. ಉತ್ತರಾಭಾದ್ರಪದದ ೪ ನೆಯ ಮತ್ತು ರೇವತಿಯ ಮೊದಲಿನ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೬, ೭, ೮ ಇವು ಒಳ್ಳೆಯವು.

ತಾ. ೭ ಕ್ಕೆ ಬರುವ ೧೦ ನೆಯ ಗುರುಫಲ ಹೀಗಿದೆ. ಪ್ರಭಾವ, ಪ್ರತಿಷ್ಠೆ, ಪ್ರಕೃತಿ ಇವಕ್ಕೂ ಸಂಗ್ರಹಕ್ಕೂ ಬಹಳ ಒಳ್ಳೆಯದು.

ದಕ್ಷಿಣ ಆಫ್ರಿಕೆಯ ಸರಕಾರವು ಕರೆದ ಹಿಂದೀ ವಿರೋಧಕ ಧೋರಣೆಯನ್ನು ಪ್ರತಿಭಟಿಸಲು ಹಿಂದೀಯರೆಲ್ಲರೂ ಐಕ್ಯವಾಗಬೇಕೆಂದು ಟ್ರಾನ್ಸವಾಲ ಕಾಂಗ್ರೆಸ ಕಾರ್ಯ ಸಮಿತಿಯು ವಿನಂತಿಸಿರುತ್ತದೆ.

Reg. No. B. 3148

LICENCE No. 3
Licenced to Post without Prepayment

KARMAVEER 4-10-48

ಪುಸ್ತಕ ಪರಿಚಯ

[... -ಸಂ.]

ಸ್ಮಶಾನ ವೈರಾಗ್ಯ

ಮೂಲ: ಲಿಯೋ ಟಾಲಸ್ಟಾಯ, ಅನುವಾದ: ಶ್ರೀ ಚುಳಕಿ ಗೋವಿಂದರಾಯರು; ಲಲಿತ ಸಾಹಿತ್ಯಮಾಲೆ, ಧಾರವಾಡ ಪು. ೧೧೩ ರೂ. ೧||೮

ಲೋಕದ ಕಣ್ಣು

ಲೇಖಕರು:— ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು. ಪ್ರಕಾಶಕರು:— ಶ್ರೀ ಟಿ. ಶ್ರೀಪತಿ, "ಕೃಷ್ಣ ವಿಹಾರ" ಕದ್ರಿ ದೇವಾಲಯ ರಸ್ತೆ, ಬಿಜಯ, ಮಂಗಳೂರು. ೧೭೯ ಪುಟ, ರೂ. ೨|೬.

ದಾಂಪತ್ಯವೆಂಬುದು ತೀರ ಸಾರ್ವತ್ರಿಕವಾಗಿರುವದರಿಂದ ನಾವು ಬಹುತರವಾಗಿ ಅದರಲ್ಲಿರುವ ಸಮಸ್ಯೆಗಳನ್ನು ಕಡೆಗಣಿಸಿಬಿಡುತ್ತೇವೆ. ನಿಜವಾಗಿ ನೋಡಿದರೆ ಅದು ಮಾನವೀ ಸಂಬಂಧಗಳಲ್ಲೆಲ್ಲ ಅತ್ಯಂತ ಗಹನವೂ ಮೂಲಭೂತವೂ ಆಗಿದೆ. ಅಂಥ ಮಾನವೀ ಸಂಬಂಧ ಬೇರೊಂದಿಲ್ಲವೆಂದರೂ ಸರಿಯೆ. ಎರಡು ಬೇರೆ ಬೇರೆ ಜೀವಗಳು, ಬೇರೆ ಬೇರೆಯೆ ವಾತಾವರಣದಲ್ಲಿ ಬೆಳೆದ ಚೇತಸ್ಸುಗಳು, ಜೀವಮಾನವೆಲ್ಲ, ಸಂತತವಾಗಿ, "ಧರ್ಮೇಚ ಅರ್ಥೇಚ ಕಾಮೇಚ" ಒಂದಾಗಿ ಬಾಳುವೆವೆಂದು, ಸುಖವನ್ನು ಸವಿಯುವೆವೆಂದು ಹೊರಡುವದರ ವೈಚಿತ್ರ್ಯವನ್ನು ನೋಡಿರಿ! ಅವರಿಬ್ಬರ ರುಚಿಗಳು ಭಿನ್ನವಾಗಿರಬಹುದು, ಅಸೆ ಆಕಾಂಕ್ಷೆಗಳು ಬೇರೆಬೇರೆ ಇರಬಹುದು, ಸ್ವಭಾವಗಳೂ ಬೇರೆಬೇರೆ ಇರಬಹುದು. ಅವರ ಚೇತಸ್ಸುಗಳಂತೂ ಖಂಡಿತವಾಗಿ ಬೇರೆಬೇರೆ. ಎಲ್ಲ ಜೀವಿಗಳಿಗಾದಂತೆ ತನ್ನ ಸುಖ ಕಷ್ಟದ ಅರಿವು ಮಾತ್ರ ಮಾನವನಿಗೂ ಎಲ್ಲಕ್ಕಿಂತ ಸರಿಯಾಗಿ ಆಗುವದು, ಇನ್ನೊಬ್ಬನದನ್ನು ತಿಳಿಯುವದು ಕಠಿಣ, ಆದ್ದರಿಂದ ಪರಿಮಿತಗಳಿಂದ ತುಂಬಿದ ಮಾನವ ಜೀವನದಲ್ಲಿ, ದಂಪತಿಗಳಲ್ಲಿ ತಿಕ್ಕಾಟವುಂಟಾಗಿ ತಾವು ಬಯಸಿದ ಸುಖಸಂತೋಷಗಳಿಂತ ವ್ಯಥೆ, ದುಃಖಗಳನ್ನೇ ಹೆಚ್ಚಾಗಿ ಅನುಭವಿಸುವ ಪ್ರಸಂಗ ಅವರಿಗೆ ಒದಗಿದರೆ ಆಶ್ಚರ್ಯವೇನೂ ಇಲ್ಲ. ನಿಜವಾಗಿ ಜಗತ್ತಿನಲ್ಲಿ ದಾಂಪತ್ಯ ಜೀವನದ ದುಃಖಗಳು ಹೆಚ್ಚುತ್ತಲೇ ಇವೆ. ಅದನ್ನು ನಿವಾರಿಸಲು ಕೈಕೊಂಡ ಉಪಾಯಗಳು ಹೊಸ ಹೊಸ ಸಮಸ್ಯೆಗಳನ್ನು ತಂದು ಒಡ್ಡುತ್ತಲಿವೆಯೆ ಹೊರತು ಕ್ಲೇಶಗಳನ್ನು ಪರಿಹರಿಸಲು ಸಮರ್ಥವಾಗಿಲ್ಲ.

ಮನುಷ್ಯ ಜೀವನದಲ್ಲಿ ದಾಂಪತ್ಯ ಮೊಟ್ಟಮೊದಲು ದೈಹಿಕ ಮತ್ತು ಸಾಮಾಜಿಕ ಆವಶ್ಯಕತೆಯನ್ನು ಪೂರೈಸುವ ಸಾಧನವಾಗಿ ಬಳಕೆಗೆ ಬಂದಿರಬಹುದು. ಆದರೆ ಮನುಷ್ಯಪ್ರಾಣಿಗಳು ಬೌದ್ಧಿಕ ಜೀವನವನ್ನು ಬೆಳೆಸಿಕೊಂಡು ಹೋದಂತೆ ಸಮಸ್ಯೆಗಳೂ ವಿಸ್ತಾರಗೊಳ್ಳುತ್ತ ಬಂದವು. ದೈಹಿಕ ಸುಖಾತೀತವಾದ ಮಾನಸಿಕ ಆನಂದದ ಹಸಿವು ಮನುಷ್ಯನಲ್ಲಿ ಹೆಚ್ಚಿದ್ದರಿಂದ ಅವನು ಅಥವಾ ಅವಳು ತನ್ನ ಪತ್ನಿ ಅಥವಾ ಪತಿಯಲ್ಲಿ ದೈಹಿಕ—ಸಾಮಾಜಿಕ—ಆರ್ಥಿಕ ಪ್ರಯೋಜನಗಳನ್ನು ಮೀರಿನಿಂತ ಸುಖವನ್ನು ಅಪೇಕ್ಷಿಸುವ ಸ್ಥಿತಿಯುಂಟಾಯಿತು "ದುಃಖ"ಗಳಿಗೆ ಕಾರಣವಾದ ತಿಕ್ಕಾಟಗಳು ಇಲ್ಲಿಯೆ ಉದ್ಭವಿಸಿದವು. ಬಡತನ, ರೋಗ ಇತ್ಯಾದಿಗಳಿಂದ ಉದ್ಭವಿಸಬಹುದಾದ ಕ್ಲೇಶಕ್ಕಿಂತ ಆಳವಾದ ದುಃಖಗಳು ಸಹಾನುಭೂತಿರಾಹಿತ್ಯ, ತಿಳುವಳಿಕೆಯ ಕೊರತೆ ಇವುಗಳಿಂದ ಹುಟ್ಟಿದವು.

ಮೇಲಿನ ಎರಡೂ ಪುಸ್ತಕಗಳು ಈ ದಾಂಪತ್ಯದ ಸಮಸ್ಯೆಗಳನ್ನು ವಿಶ್ಲೇಷಿಸುತ್ತವೆ. "ಸ್ಮಶಾನ ವೈರಾಗ್ಯ" (The Kreutzer Sonata) ಟಾಲಸ್ಟಾಯರ ಸತ್ವಶಾಲಿ ಲೇಖನಿಯಿಂದ ಬಂದ ನೀಳ್ಗತೆ. ಕಳೆದ ಶತಕದ ಅಂತ್ಯದಲ್ಲಿ ರಶಿಯದ ಶ್ರೀಮಂತ ವರ್ಗದ ದಾಂಪತ್ಯ ಜೀವನದ ಮನಃ ಕಷಾಯಗಳ ಜೀವಂತ ಚಿತ್ರಣವೇ ಅದು. ಹೊಂದಿಕೆಯಾಗಲಾರದ ಪತ್ನಿಯನ್ನು ಕಟ್ಟಿಕೊಂಡು, ಕಥಾನಾಯಕನು, ದಾಂಪತ್ಯ ಸುಖದ ಕನಸುಗಳೆಲ್ಲ ಕುಸಿಯಲು ಪರಪುರುಷ ಸಂಪರ್ಕ ಮಾಡುತ್ತಿದ್ದ ಹೆಂಡತಿಯ ಕೊಲೆ ಮಾಡುತ್ತಾನೆ. ಇಡಿ ಕಥೆಯನ್ನು ಅವನ ಬಾಯಿಂದಲೇ ಹೇಳಿಸಿ ಟಾಲಸ್ಟಾಯರು ಅದರ ಪರಿಣಾಮಶಕ್ತಿಯನ್ನು ಹೆಚ್ಚಿಸಿದ್ದಾರೆ. ದಾಂಪತ್ಯವನ್ನು ಕೂಡಿಸುವ ಆಧುನಿಕ ಪ್ರೇಮವಿವಾಹ ಪದ್ಧತಿ ಕೂಡ ದಾಂಪತ್ಯದಲ್ಲಿರುವ ಮಾನವೀ ಸಮಸ್ಯೆಗಳನ್ನು ಕಡೆಗಣಿಸುವದು. ಮದುವೆಯನ್ನು ಹೆಣ್ಣು ಕೇವಲ ಜೀವನವೃತ್ತಿಯೆಂದು ಬಗೆದು ಯಾವುದಾದರೊಂದು ಗಂಡನ್ನು ಬೋನಿನಲ್ಲಿ ಹಾಕಿಕೊಳ್ಳಲು ಹೆಣಗುತ್ತದೆ. ಆದುದರಿಂದ ವಿವಾಹಪೂರ್ವದ ಪರಿಚಯ, ಪರೀಕ್ಷೆ, ಪ್ರೇಮವಿವಾಹ ಇವೆಲ್ಲ ಬರಿ ನಟನೆ. ಅಂಥ ವಿವಾಹ ಸುಖದುಃಖಭೂಯಿಷ್ಠವಾದ ದಾಂಪತ್ಯಜೀವನದ ಕ್ಲೇಶಗಳನ್ನು ನುಂಗಿ ದಕ್ಕಿಸಿಕೊಳ್ಳುವಷ್ಟು ಪ್ರಬಲವಾದ ಪ್ರೇಮಬಂಧವನ್ನು ನಿರ್ಮಿಸಲಾರದು. ಈಗಿನ ನಾಗರಿಕ ಪ್ರೇಮವಿವಾಹವೆಂಬ ಕಣ್ಣುಕಟ್ಟಿಗಿಂತ ಹಳೆಯ ಹಿರಿಯರ ಸಂಧಾನ ಮೂಲಕ ವಿವಾಹವೆ ಒಳಿತು. ಸ್ತ್ರೀಯಲ್ಲಿ ಮಾನವತೆಯ ಜಾಗ್ರತಿಯಾಗದೆ ಸ್ತ್ರೀಸ್ವಾತಂತ್ರ್ಯ, ಪ್ರೇಮವಿವಾಹ ಇವೆಲ್ಲ ನಿಷ್ಫಲವೆಂದು ಮಹರ್ಷಿ ಟಾಲಸ್ಟಾಯರು ಸ್ಥಾಪಿಸಿದ್ದಾರೆ. ಸ್ವತಃ ದಾಂಪತ್ಯ ಜೀವನದಲ್ಲಿ ಸುಖವನ್ನು ಸ್ಥಾಪಿಸಲು ಪ್ರಯತ್ನಿಸಿ ಸೋತ ಅವರ ಹೃದಯದ ವೇದನೆಯೆಲ್ಲವೂ ಈ ಪುಸ್ತಕದಲ್ಲಿ ಓತಪ್ರೋತವಾಗಿದೆ. ಸ್ತ್ರೀಪುರುಷ ಸಂಬಂಧದ ಸಮಸ್ಯೆಗಳಿಗೆ ಉತ್ತರ ಹುಡುಕಬೇಕೆಂಬವರಾರೂ ಮಹರ್ಷಿ ಟಾಲಸ್ಟಾಯರು ಇಲ್ಲಿ ವ್ಯಕ್ತಗೊಳಿಸಿದ ವಿಚಾರಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಮುಂದುವರಿಯಬಾರದು. ಅವು ರಶಿಯನ್ನರಿಗಷ್ಟೆ ಸೀಮಿತವಾಗಿರದೆ ಆಧುನಿಕ ಸಮಾಜಗಳಿಗೆಲ್ಲ ಅನ್ವಯಿಸುತ್ತವೆ. ಶ್ರೀ ಶಂಕರಭಟ್ಟರ ಕಾದಂಬರಿ ಸಮಸ್ಯೆಯನ್ನೊಂದು ಭಾಗವನ್ನು ಹಿಂಜುತ್ತದೆ. ಇಲ್ಲಿ ಸುಸಂಸ್ಕೃತ ವ್ಯಕ್ತಿತ್ವಗಳ ಘರ್ಷಣೆಯ ಪರಿಣಾಮವನ್ನು ಕಾಣಬಹುದು. ಸಂಪೂರ್ಣ ಅನ್ಯೋನ್ಯದಿಂದ ಆದರೂ ಸಂಪೂರ್ಣ ಸಮಾನರಾಗಿ ದಂಪತಿಗಳು ಒಂದು ಆದರ್ಶಕ್ಕಾಗಿ ದುಡಿದು ಯಾವುದೊಂದು ಮನಃಕಷಾಯವಿಲ್ಲದೆ ಬದುಕು ಬಾಳುವುದು ಅಸಾಧ್ಯಪ್ರಾಯವಾದ ಪ್ರಯಾಸವೆಂದು ಅವರು ತೋರಿಸಿದ್ದಾರೆ. ಅವರ ನಾಯಕ ನಾಯಿಕೆಯರಿಬ್ಬರೂ ಸುಶಿಕ್ಷಿತರು ಧ್ಯೇಯವಾದಿಗಳು. ಇಬ್ಬರೂ ತಮ್ಮ ಪತ್ರಿಕೆಗಾಗಿ ದುಡಿಯುವರು. ಅವರ ಈ ಧ್ಯೇಯನಿಷ್ಠ ದಾಂಪತ್ಯ ಅವರ ಪಾಡಿಗೆ ಅವರಿದ್ದವರೆಗಷ್ಟೆ ಸರಾಗವಾಗಿ, ಅನ್ಯೋನ್ಯವಾಗಿ ಸಾಗುತ್ತದೆ. ಏಕೆಂದರೆ ಅವರಿಬ್ಬರೂ ಭಿನ್ನ ಭಿನ್ನ ವ್ಯಕ್ತಿತ್ವವುಳ್ಳವರಾದರೂ ಪರಸ್ಪರರ ವಿಚಾರಗಳಿಗೆ ಎಡೆಗೊಟ್ಟು ತಮ್ಮ ತಮ್ಮ ವ್ಯಕ್ತಿತ್ವವನ್ನು ಅಷ್ಟಿಷ್ಟು ಅದುಮಿಹಿಡಿದು ಸಾಗುತ್ತಿದ್ದರು. ಆದರೆ ಸ್ವಾರ್ಥ, ಅಸೂಯಾಪರ ವ್ಯಕ್ತಿಗಳ ಸಂಪರ್ಕ ಅವರಿಗೆ ಬಂದಾಗ ನಿಜವಾದ ಸತ್ವಪರೀಕ್ಷೆಯಾಗುತ್ತದೆ. ಭಿನ್ನಾಭಿಪ್ರಾಯಗಳನ್ನು ಪರಸ್ಪರ ಎಡೆಗೊಟ್ಟು ಏಕಾಭಿಪ್ರಾಯವಾಗಿ ಮಾರ್ಪಡಿಸುವ ಬದಲು ಒಂದು ದುರ್ದೈವಿ ಮುಹೂರ್ತದಲ್ಲಿ ನಾಯಿಕೆ ತನ್ನ ವ್ಯಕ್ತಿತ್ವವನ್ನು ಅರ್ಥಾತ್ ಅಹಂಕಾರವನ್ನು ಸ್ವತಂತ್ರವಾಗಿ ಎತ್ತಿನಿಲ್ಲಿಸುತ್ತಾಳೆ. ತಕ್ಷಣ ನಾಯಕನ ವ್ಯಕ್ತಿತ್ವ ಉರಿದೇಳುತ್ತದೆ. ಅವನು ಸ್ವಾಭಾವಿಕವಾಗಿ ಉದಾತ್ತ. ಅವಳ ಸ್ವಾತಂತ್ರ್ಯವನ್ನೊಪ್ಪಿಕೊಳ್ಳಲು ಸಿದ್ಧನೆ. ಆದರೆ ಒಂದಾಗಿ ಹೊರಟಿದ್ದ ಆ ಎರಡು ಜೀವಗಳಲ್ಲಿ ಒಂದು ತನ್ನ ಸ್ವಾತಂತ್ರ್ಯವನ್ನು ಪ್ರತಿಷ್ಠಿಸಿ ತೋರಿದರೆ ಇನ್ನೊಂದು ತನ್ನ ದಾರಿ ಹಿಡಿಯದಿರದು. ನಾಯಕನನೊಂದ ಮನಸ್ಸು ಅನಳಿಂದ ವಿಮುಖವಾಗುತ್ತದೆ. ಇಬ್ಬರಲ್ಲಿಯೂ "ಅಹಂತ್ವ" ಒಂದು ಬಗೆಯ ಸುಸಂಸ್ಕೃತ ದ್ವೇಷದಿಂದ ಬೆಳೆಯುತ್ತದೆ. ನಾಯಕ ಗೃಹತ್ಯಾಗ ಮಾಡು... ಸಂಸಾರಸುಖ ನಿಸ್ಸಾರವೆಂಬುದಕ್ಕಾಗಿ ಹೆಂಡತಿಯ ಮೃತ್ಯುವಿನಲ್ಲಿ ಇದು ಪರ್ಯವಸಾನ ಹೊಂದುವದು.

ಶ್ರೀ ಶಂಕರಭಟ್ಟರು ಬೊಟ್ಟು ತೋರಿದ ಸಮಸ್ಯೆ ಮಹತ್ವದ್ದೂ ಹೌದು, ಸರಿಯಾಗಿಯೂ ಉಲ್ಲೇಖಿಸಲ್ಪಟ್ಟಿದೆ. ಆದರೆ ಕಥೆಯ ಬೆಳವಣಿಗೆ ಅಷ್ಟೇನೂ ಸುಖವಾಗಿ ಆಗಿಲ್ಲ. ನಾಯಕನ ಕಟ್ಟಕಡೆಯ ನಡೆವಳಿಯ ಅರ್ಥವೇ ಆಗುವದಿಲ್ಲ. ಕೊನೆ ಕೊನೆಗೆ ಪುಸ್ತಕ ಮುಗಿಸುವ ಅವಸರಕ್ಕೆ ಬಿದ್ದಂತೆ ಅನಿಸುತ್ತದೆ. ಆದರೆ ಆದರ್ಶ ಸಂಸ್ಕೃತ ದಾಂಪತ್ಯದ ಕನಸು ಕಟ್ಟಿದವರು 'ಅಹಂತ್ವ'ದ ಪ್ರತಿಷ್ಠೆಗೆ ಲೇಶವೂ ಅವಕಾಶ ಕೊಡತಕ್ಕದ್ದಲ್ಲವೆಂಬ ಅಂಶ ಸ್ಫುಟವಾಗಿ ಎದ್ದು ನಿಂತಿದೆ.

ಒಂದು ಚಿಕ್ಕ ಕಥೆ

(೨ ನೇ ಪುಟದಿಂದ)

"ಹುಂ, ಹೌದು ಸಾಮಿ" ಎಂದಳು ಕಾಳಮ್ಮ. ಸರಿ ಇವಳೇ ಆ ನನ್ನ ಸುಮಂಗಲಿಯ 'ಕಾಳಿ' ಎಂದು ನಿರ್ಧಾರವಾಯಿತು ನನಗೆ.

"ಓ ತಾಯಿ, ನಿನ್ನ ಮಗುವಿನ ಹೆಸರೇನಮ್ಮ ?"

"ಚೆನ್ನ ! ನನ್ನ ಬಂಗಾರದ ಚೆನ್ನ" ಎಂದು ಎದೆಗಪ್ಪಿಕೊಂಡಳು ಅವಳು.

"ನಿನ್ನೆ ಆ ಮನೆಯಲ್ಲಿ ಹಾಲು ಕೊಟ್ಟಳಲ್ಲ ಅವಳು ನನ್ನವಳು. ಅವಳೇ ನೀನು ಬಂದುದನ್ನು ಹೇಳಿದಳು," ಎಂದೆ.

"ಒಳ್ಳೇ ಗುಣವಂತೆ ಸಾಮೀ, ಲಕ್ಷ್ಮಿಯಿದ್ದಂತೆ" ಎಂದಳು.

"ಅವಳು ನಿನ್ನನ್ನು ಬಹುವಾಗಿ ನೆನೆಯುತ್ತಾಳೆ" ಎಂದೆ.

"ಯಾಕೆ ಸಾಮೀ ?"

. . . . ?

ಕೊಂಚ ಸಮಯ ನಾನು ಮೌನವಾಗಿ ನಿಂತಿದ್ದೆ.

"ಯಾಕೆ ಸಾಮೀ ?" ಮತ್ತವಳು ಕೇಳಿದಳು.

"ಹೋಗಲಿ ಬಿಡಮ್ಮ !" ಎಂದೆ.

"ಇಲ್ಲ ಸಾಮೀ ನಮ್ಮಿಂದ ಏನಾಗಬೇಕು?"

"ಏನಿಲ್ಲ ತಾಯಿ, ನಿಮ್ಮ ಮೊಗಲಾಯಿಯ ಕೋಲಾಹಲ ಮುಗಿದು ನಿಮ್ಮವರೆಲ್ಲ ಕೂಡಿಕೊಳ್ಳುವ ವರೆಗೆ ನಮ್ಮ ಅತಿಥಿಯಾಗಿರುವೆಯಾ ?" ನಾನು ಉತ್ಸುಕತೆಯಿಂದ ಪ್ರಶ್ನಿಸಿದೆ.

"ಅಪ್ಪಾದರೆ ನನ್ನ ಸುದೈವ ಬುದ್ಧಿ."

"ನಿನ್ನ ಸುದೈವವಲ್ಲ ನಮ್ಮ ಸುದೈವವಮ್ಮಾ ! ನಿನ್ನ ಮಗುವನ್ನು ನೋಡಿಕೊಂಡು ಅವಳು ತನ್ನ ದುಃಖವನ್ನು ಮರೆಯುವಳು. ನೀನು ನಮ್ಮ ಬಾಳನ್ನು ಕೂಡಿಕೊಂಡು ನಿನ್ನ ದುಃಖವನ್ನು ಮರೆಯಲು ಹೆಣಗು" ಎಂದಂದೆ. ಅವಳು ಅತ್ತಿಯ ಕಡೆಗೆ ನೋಡುತ್ತಿದ್ದಳು. ಆ ಭಾವವನ್ನು ತಿಳಿದ ನಾನು "ನಿಮ್ಮತ್ತೆಗೂ ಒಂದು ಆಶ್ರಯ ಕೊಡಿಸುತ್ತೇನೆ" ಎಂದೆ. ಮನೆಯ ದಾರಿ ಹಿಡಿದೆವು.

ಆಗಲೇ ಸಂಜೆ ಸಮಯದ ಕಪ್ಪು ಛಾಯೆ ಕಳೆದು ಬಿದಿಗೆ ಚಂದ್ರನ ಬೆಳಕು ಬೀಳುತ್ತಲಿತ್ತು.

ಸುಮಂಗಲಿ ಪಡಸಾಲೆಯಲ್ಲಿಯೇ ಕುಳಿತಿದ್ದಳು. ನಾವು ಬಂದ ಸದ್ದು ಕೇಳಿ ಬಾಗಿಲು ತೆಗೆದಳು. ನನ್ನ ಹಿಂದೆ ಮಗುವನ್ನು ಅಪ್ಪಿಕೊಂಡು ನಿಂತಿರುವ ಕಾಳಿಯನ್ನು ಕುತೂಹಲಿಸಿ ಚಕಿತಳಾಗಿ ಅರಳಿದ ಕಣ್ಣಿನಿಂದ ಸ್ವಾಗತಿಸುತ್ತಿದ್ದಳವಳು.

ಕಾಳಿ ಮತ್ತು ಆ ಮುದುಕಿ, ಬಾಗಿಲ ಹೊರಗೇ ನಿಂತಿದ್ದರು "ಬನ್ನಿರಮ್ಮಾ ಒಳಗೆ ಬನ್ನಿ, ಸಂಕೋಚ ಬೇಡ. ಇದು ನಿಮ್ಮದೇ ಮನೆ" ಎನ್ನುತ್ತಿದ್ದೆ, ನಾನು. ಸುಮಂಗಲಿಯು ಬಾಗಿಲಲ್ಲಿ ನೀರು ತುಂಬಿದ ತಂಬಿಗೆಯನ್ನು ಇಡುತ್ತ,

"ಅಕ್ಕಾ, ಬಾರಮ್ಮ ಕಾಳೀ" ಎಂದು ಕರೆದಳು ತನ್ನದೇ ಆದ ಕರುಳನ್ನು ಕಳೆದುಕೊಂಡ ನೋವಿನ ಆ ನನ್ನ ದೇವಿ, ಸುಮಂಗಲಿ ! ಮಗುವಿನ ಆಸೆಗಾಗಿ ನಿರಾಶ್ರಿತಳಾದ ಕಾಳಮ್ಮನಿಗೆ ಆಶ್ರಯವಿತ್ತಳು. ಕರುಳಿನ ಪ್ರೇಮ [illegible] ಕೇಳುವುದೇ ಇಲ್ಲ. ಭಿನ್ನಭೇದವಿ[illegible] ಕಾಳಿಯೂ ಸುಖವಾಗಿರಬಹುದು; ಇದ್ದಾಳೆ. ಎಂದು ನಾನು ತಿಳಿದಿದ್ದೇನೆ.

ನಾನು ನನ್ನ ಮೇಜಿನ ಹತ್ತಿರ ಹೋದೆ. ಹಿಂದೆ, ಹಿಂದೆ, ಸುಮಂಗಲಿ ಬಂದಳು.

"ಇವಳೇ ಅಲ್ಲವೆ ಆ ನಿನ್ನ ಕಾಳಿ ?" ಎಂದೆ.

"ಹೌದು, ಕಾಳಿ ನನ್ನವಳು. ಮಗು ಚೆನ್ನ ನಮ್ಮವ" ಎನ್ನುತ್ತ ಹೃದಯ ತುಂಬಿದ ನಗೆಯಿಂದ ನನ್ನೆಡೆ ನೋಡುತ್ತಿದ್ದಳು. ಇದೇ ನನ್ನ ಸರ್ವಸ್ವ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.